ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
Literature Culture Research Quarterly journal
ISSN: 2320-9941

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An exchange of creative impulse

ಸಂಪಾದಕರು ಡಾ. ಸರಸ್ವತಿ ಕೆ. ಬಿ.

ಸಂಪುಟ: 08 • ಸಂಚಿಕೆ 02 • ಏಪ್ರಿಲ್ – ಜೂನ್ 2024
VOLUME: 08 • ISSUE: 02 • April – June 2024

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
Literature Culture Research Quarterly journal
ISSN: 2320-9941

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An exchange of creative impulse

ಪ್ರಕೃತಿ ವಿಸ್ಮಯ

ಪರಿಸರ ಚಿಂತನೆಗಳು

ಸಂಪುಟ: 08 ● ಸಂಚಿಕೆ 02 ● ಏಪ್ರಿಲ್ – ಜೂನ್ 2024
VOLUME: 08 ● ISSUE: 02 ● April – June 2024

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ

ಪ್ರಕಟಣೆ
ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ
ತ್ರೈಮಾಸಿಕ ಪತ್ರಿಕೆ
ತೋಟದ ಮನೆ ನಂ 107(25),
ಕಂಚಾಘಟ್ಟ ಹೊಸ ಬಡಾವಣೆ, ತಿಪಟೂರು 572201
e-mail: prathispandha@gmail.com
wibsite : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ ● PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B.
Associate Professor, English Department
Govt. First Grade College, Tipatur
Tumkur District, Karnataka

ಡಾ. ದತ್ತಾತ್ರೆಯ ಎಂ
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ,
ಕರ್ನಾಟಕ

Dr. Dattatreya M.
Associate Professor, English Department
Kuvempu University, Jnanasahyadri,
Shankaraghatta, Shivamogga Dist,
Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor, Kannada Department
University Of Madras, Chenni, Tamil Nadu.

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ವಾಯತ್ತ,
ಗುಬ್ಬಿ, ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College Autonomous,
Gubbi, Tumkur District, Karnataka

ಡಾ. ಗೋವಿಂದರಾಯ ಎಂ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Assistant Professor, Kannada Department
Govt. First Grade College, Kunigal
Tumkur District, Karnataka

ತಜ್ಞ ಪರಿಶೀಲನ ಸಮಿತಿ • PEER REVIEW COMMITTEE

ಪ್ರೊ. ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ,
ವಸಂತನಗರ, ಬೆಂಗಳೂರು, ಕರ್ನಾಟಕ

Pro. Anitha K. V.
Assistant Professor, Kannada Department
Mount Carmel College Autonomous,
Vasanta, Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ,
ಕೆ. ನಾರಾಯಣಪುರ, ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti College Autonomous,
K. Narayanapura, Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ತಾಂತ್ರಿಕ ಸಹಕಾರ
ಪೃಥ್ವಿ ಸೂರಿ
ವಕೀಲರು, ಚಿಕ್ಕಮಗಳೂರು.

ISSN: 2320-9941

ಸಂಪಾದಕೀಯ...

"ಪ್ರಣತೆಯೂ ಇದೆ, ಬತ್ತಿಯೂ ಇದೆ;
ಜ್ಯೋತಿಯ ಬೆಳಗುವಡೆ, ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೊ?
ಗುರುವಿದೆ ಲಿಂಗವಿದೆ;
ಶಿಷ್ಯನ ಸುಜ್ಞಾನ ಅಂಕುರಿಸದನ್ನಕ್ಕರ ಭಕ್ತಿಯೆಲ್ಲಿಯದೊ?
'ಸೋಹಂ' ಎಂಬುದ ಕೇಳಿ ದಾಸೋಹವ ಮಾಡದಿರ್ದಡೆ
ಅತಿಗಳೆವ ನೋಡಾ ಗುಹೇಶ್ವರಾ" (15)

ಪರಿಸರವು ಪ್ರಕೃತಿಯ ಪ್ರತಿಫಲನ. ಇಂದು ನಿಸರ್ಗದ ಪ್ರಕೃತಿಯನ್ನು ಮಾನವ ತನ್ನ ಪರಿಸರದಿಂದ ದೂರವಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾನೆ. ಇಂದು ಬಹುತೇಕ ಮನುಷ್ಯರು ಪ್ರತಿಫಲಿಸುತ್ತಿರುವುದು ಕೇವಲ ತಮ್ಮ ಮನಸ್ಸಿನ ಮತ್ತು ದೇಹದ ವಿಪರೀತಗಳನ್ನಷ್ಟೇ. ಇದರಿಂದ ನಿಸರ್ಗಕ್ಕೆ ಯಾವುದೇ ವ್ಯತ್ಯಾಸವಾಗದು. ಆದರೆ, ಪ್ರಕೃತಿಯೊಂದಿಗಿನ ಸಹಬಾಳ್ವೆಯಿಂದ ನಮ್ಮ ಜೀವಿತದಲ್ಲಿ ಸಂಭವಿಸಬಹುದಾದ ಪವಾಡಗಳನ್ನು ಕಾಣುವ ಸೌಭಾಗ್ಯಗಳನ್ನು ಕಳೆದುಕೊಳ್ಳುತ್ತೇವೆ ಅಷ್ಟೆ. ಸುಜ್ಞಾನದ ಬೆಳಕು ಅಂಕುರಿಸದೆ ಭಕ್ತಿ ಸಾಧ್ಯವಾಗುವುದಿಲ್ಲ ಎನ್ನುತ್ತಾರೆ ಅಲ್ಲಮಪ್ರಭು. ಭಕ್ತಿಯ ಭಾವ ಬರದೇ ವಿವೇಕ ಉದಯಿಸದು. ಗುರುವಿದ್ದರೂ, ಲಿಂಗವಿದ್ದರೂ, ಪ್ರಣತಿಯಿದ್ದರೂ, ಬತ್ತಿಯಿದ್ದರೂ ಬೆಳಕಿನ ಬಯಕೆಯಿಲ್ಲದೆ ಯಾವುದಕ್ಕೂ ಅರ್ಥವಿಲ್ಲ. ಅಜ್ಞಾನದ ನೋವು ಆಳವಾಗದೇ ಬೆಳಕಿನ ಹಂಬಲ ಬಲಿಯದು. 'ಸೋಹಂ' ಎಂಬುದನ್ನು ಕೇಳಿದ ನಂತರವೂ, ಅರಿವು ದಕ್ಕಿದ ನಂತರವೂ ತನ್ನ ತಿಳಿವನ್ನು ದಾಸೋಹ ಮಾಡದಿದ್ದರೆ ಗುಹೇಶ್ವರ ಮೆಚ್ಚುವುದಿಲ್ಲ ಎನ್ನುವ ಅಲ್ಲಮಪ್ರಭುದೇವರ ಕಾಣ್ಕೆ ನಮ್ಮ ಸುತ್ತಣ ಪರಿಸರವನ್ನು ಹಸನಾಗಿಸುವುದು ದಿಟ.

ವಂದನೆಗಳು
ಸಂಪಾದಕರು

ಅನುಕ್ರಮಣಿಕೆ

ಸಂಶೋಧನಾ ಲೇಖನಗಳು

ISSN: 2320-9941
ಪ್ರತಿಸ್ಪಂದ । Prathispandha

‘ಚಾರಣ ಸಾಹಿತ್ಯ’ ಸಂದರ್ಭದಲ್ಲಿ ಕಂಡುಕೊಳ್ಳಬಹುದಾದ ಮುಖ್ಯ ಆಯಾಮಗಳು ಮತ್ತು ವಿವಿಧ ಪರಿಭಾಷೆಗಳು

• ಡಾ. ಚಂದ್ರಶೇಖರ ವಿ. ನಂಗಲಿ

ಚಾರಣ ಸಾಹಿತ್ಯ ಸಂದರ್ಭದಲ್ಲಿ ಕಂಡುಕೊಳ್ಳಬಹುದಾದ ಬಹು ಮುಖ್ಯ ಆಯಾಮಗಳೆಂದರೆ

1. ಕಾಲ್ನಡಿಗೆಯ ತಿರುಗಾಟಗಳು
2. ಹಸಿರು ಕಾಳಜಿ ಮತ್ತು
3. ಸ್ಥಳೀಯ ಭೂಗೋಳ ಎಂಬುದನ್ನು ಈಗಾಗಲೇ ಪ್ರಸ್ತಾಪಿಸಿದ್ದಾಗಿದೆ. ಪ್ರಸ್ತುತ ಸಾಹಿತ್ಯ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಇವುಗಳ ಸ್ವರೂಪ ಮತ್ತು ಅನ್ವಯ ಕ್ರಮಗಳನ್ನು ಪರಿಚಯಿಸಿಕೊಳ್ಳೋಣ.

1. ಕಾಲ್ನಡಿಗೆಯ ತಿರುಗಾಟಗಳು

ಮನುಷ್ಯನನ್ನು ಹೊರತು ಪಡಿಸಿ ಇತರ ಸಕಲ ಜೀವಿಗಳನ್ನು (ಕ್ರಿಮಿ, ಕೀಟ, ಪಕ್ಷಿ, ಪ್ರಾಣಿ, ಮುಂತಾದವು) ‘ತಿರ್ಯಕ್ ಜೀವಿಗಳು’ ಎಂದು ಕ–ರೆಯುತ್ತಾರೆ. ‘ತಿರ್ಯಕ್ ಜೀವಿಗಳು’ ಎಂದ–ರೆ ತಿರೋಗಾಮಿಗಳು (=ತಿರೆಗೆ ಸಮಾನಾಂತರವಾಗಿ ಚಲಿಸುವ ಜೀವಿಗಳು) ಎಂದರ್ಥ.1 ತಿರೆಗೆ ಲಂಬವಾಗಿ ನಿಂತು 900ಯಲ್ಲಿ ಚಲಿಸುವ ಮನುಷ್ಯ ಜೀವಿಗಳು ‘ತಿರ್ಯಕ್’ ಅಲ್ಲ! ಮನುಷ್ಯನ ಪೂರ್ವಿಕರು (=ಹೋಮೋ ಎರೆಕ್ಟಸ್‌ಗೂ ಮುಂಚೆ) ತಿರ್ಯಕ್ ಜೀವಿಗಳಾಗಿದ್ದರೋ ಏನೋ! ಆದರೆ, ಎಂದು ಮನುಷ್ಯ ತಿರೆಗೆ ಲಂಬವಾಗಿ ನಿಂತು 900ಯಲ್ಲಿ ಚಲಿಸುವುದನ್ನು ಅರ್ಥಾತ್ ನಡೆಯುವುದನ್ನು ಕಲಿತನೋ ಅಂದಿನಿಂದ ಅವನ ಕಶೇರುಕ ನರನಾಡಿ, ಮಿದುಳ ಬಳ್ಳಿ, ಮತ್ತು ಮಿದುಳಿನ ರಚನೆಗಳು ಸಂಪೂರ್ಣ ಬದಲಾದವು. ಬಹುಶಃ ತಿರೋಗಾಮಿಯಾಗಿದ್ದ ಮನುಷ್ಯನ ಸ್ಥಿತಿ ಗತಿಗಳು ಊರ್ಧ್ವಗಾಮಿಯಾಗಿ ಪರಿವರ್ತನೆಗೊಂಡವು. ಮನುಕುಲದ ಮಹಾಪ್ರಸ್ಥಾನದಲ್ಲಿ ಕೃಷಿಯ ಅಲೆ, ಕೈಗಾರಿಕೆಗಳ ಅಲೆ ಮತ್ತು ಇದೀಗ ಮೂರನೆ ಅಲೆ (Third Wave)

ವಿಳಾಸ: ಡಾ. ಚಂದ್ರಶೇಖರ ವಿ. ನಂಗಲಿ
ನಿವೃತ್ತ ಪ್ರಾಂಶುಪಾಲರು ಹಾಗೂ
ಹಿರಿಯ ಸಾಹಿತಿ
ಹೊಸಕೋಟೆ

ಗಳು–ಆಲ್ವಿನ್ ಟಾಫ್ಲರ್ – ಬಹು ಮುಖ್ಯವಾದ ಪರಿವರ್ತನೆಯ ತಿರುವುಗಳಾದವು.

ಒಂದು ಕಾಲಕ್ಕೆ ಸಹಜ ಜೀವನ ಶೈಲಿಯಾಗಿದ್ದ 'ಕಾಲ್ನಡಿಗೆಯ ತಿರುಗಾಟಗಳು' ಕಾಲರಂಗಸ್ಥಳದ ತೆರೆಮರೆಗೆ ಸಲ್ಲುತ್ತಾ ಕಣ್ಮರೆಯಾಗುತ್ತಿದೆ. ನಾಲ್ಕು ಗೋಡೆಗಳ ನಡುವೆ ಬದುಕುವ ಮನುಷ್ಯನ ಸುಖ ಜೀವನ ಮತ್ತು ಶ್ರಮ ರಾಹಿತ್ಯಗಳೇ ಅವನ ಬಾಳನ್ನು ಸ್ಥಾವರತೆಗೆ ದೂಡುತ್ತದೆ. ಇದನ್ನರಿತು ಮೀರುವುದನ್ನು ಜಂಗಮತೆಯ ಕಡೆಗೆ ಚಲಿಸುವುದನ್ನು ಸಾಹಿತ್ಯ ಮತ್ತು ಸಂಸ್ಕೃತಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಇದಕ್ಕೆ ನಿದರ್ಶನವಾಗಿ ನಮ್ಮ ದೇಶದ ಅಭಿಜಾತ, ಮತ್ತು ಮೌಖಿಕ ಮಹಾಕಾವ್ಯಗಳಲ್ಲಿ ತಪ್ಪದೆಯಿರುವ ವನವಾಸ, ವಾನಪ್ರಸ್ಥಗಳನ್ನು ಸ್ಮರಿಸಿಕೊಳ್ಳಬಹುದು. ನಾಡು–ಕಾಡು, ರಾಜ್ಯ–ಅರಣ್ಯ, ನಾಗರಿಕ–ವನ್ಯ, ನಗರೀಯ–ಗ್ರಾಮೀಣ, ಸಂಸ್ಕೃತಿ–ನಿಸರ್ಗ ಇವೇ ಮುಂತಾದ ದ್ವಂದ್ವಾತ್ಮಕ ದೃಷ್ಟಿಕೋನವನ್ನು ಬಹು ಹಿಂದಿನಿಂದಲೂ ಮನಗಾಣಬಹುದು.

ನಗರಗಳು ಎಂದೊಡನೆ ಆಧುನಿಕ ಕಾಲದ ರಚನೆಗಳೆಂದು ಮಾತ್ರ ತಿಳಿಯಬೇಕಾಗಿಲ್ಲ. ಕಾಳಿದಾಸನಲ್ಲಿ ಕೂಡ ನಗರೀಯ–ಗ್ರಾಮೀಣ ಸಂಘರ್ಷವಿದೆ. "ನಗರ ಪರಿಘ ಪ್ರಾಂಶು ಬಾಹುಗಳೆಂಬ ಮಾತು ದುಶ್ಯಂತನಿಗೆ ಸಂಬಂಧಿಸಿದಂತೆ ಕಾಳಿದಾಸನು ಪ್ರಯೋಗಿಸಿದ್ದಾನೆ. ಗ್ರಾಮ–ನಗರ–ಖೇಡ–ಖರ್ವಡ–ಮಡಂಬ–ಪತ್ತನಗಳೆಂಬ ನುಡಿಗಟ್ಟು ವಡ್ಡಾರಾಧನೆ ಆದಿ ಪುರಾಣಗಳಲ್ಲಿ ಕಾಲ್ನಡಿಗೆಯ ತಿರುಗಾಟಗಳಿಗೆ ಸಂಬಂಧಿಸಿದಂತೆ ಪ್ರಯೋಗವಾಗಿದೆ. ಮುಖ್ಯವಾಗಿ ನಗರೀಯ–ಗ್ರಾಮೀಣಗಳೆಂಬ ದ್ವಂದ್ವಾತ್ಮಕತೆ ಮತ್ತು ಸಂಘರ್ಷಭಾವಗಳನ್ನು ಎಲ್ಲಾ ಕಾಲ ದೇಶಗಳಲ್ಲಿ ವೈವಿಧ್ಯಮಯವಾಗಿ ಕಂಡುಕೊಳ್ಳಬಹುದು. ಇದಕ್ಕೆ ಪೌರ್ವಾತ್ಯ ಮತ್ತು ಪಾಶ್ಚಾತ್ಯಗಳೆಂಬ ಭೇದವಿಲ್ಲ. 'ಕಾಲ್ನಡಿಗೆಯ ತಿರುಗಾಟಗಳು' – ಎಂಬ ಹೆಸರಿನಲ್ಲೇ ಪ್ರಬಂಧ ರಚನೆ ಮಾಡಿರುವ ರಾಬರ್ಟ್ ಲೂಯಿ ಸ್ಟೀವನ್‌ಸನ್ ಇಲ್ಲಿ ನೆನಪಾಗುತ್ತಾನೆ. ಕಾಲ್ನಡಿಗೆಯಿಂದ ಉಂಟಾಗುವ ಪರಿಣಾಮ ರಮಣೀಯತೆಯನ್ನು ಕುರಿತು ಈ ಪ್ರಬಂಧ ಬಹು ಮನೋಜ್ಞವಾಗಿ ವ್ಯಾಖ್ಯಾನಿಸಿದೆ. ಈ ಪ್ರಬಂಧದಿಂದ ಆಯ್ದ ಭಾಗವನ್ನಲ್ಲಿ ಲಕ್ಷ–ಲಕ್ಷಣ ದೃಷ್ಟಿಯಿಂದ ಉಲ್ಲೇಖಿಸಲಾಗಿದೆ :

ಗಡಿಯಾರಗಳೇ ಇಲ್ಲ ಎನ್ನುವಂಥ ಒಂದು ಹಳ್ಳಿ ನನಗೆ ತಿಳಿದಿದೆ. ಈ ಹಳ್ಳಿಯಲ್ಲಿ ಕಾಲ ಎಷ್ಟು ನಿಧಾನವಾಗಿ ಪ್ರಯಾಣ ಮಾಡುತ್ತದೆ, ಕಾಲ ಪುರುಷ ಅಲ್ಲಿ ನಮಗೆ ಹೇಗೆ ಬೊಗಸೆ ಗಟ್ಟಲೆಯಲ್ಲಿ ಬಿಡುವಿನ ಗಳಿಗೆಗಳನ್ನು ಕೊಡುತ್ತಾನೆ ಎಂಬುದು ತಿಳಿಸಿದರೆ ಆ ಹಳ್ಳಿಯ ಕಡೆಗೆ ಲಂಡನ್ನಿನಿಂದ, ಲಿವರ್ ಪೂಲಿನಿಂದ, ಪ್ಯಾರಿಸ್ಸಿನಿಂದ ಎಲ್ಲಾ ದೊಡ್ಡ ನಗರಗಳಿಂದಲೂ ಜನರ ನೂಕು ನುಗ್ಗಲು ಆರಂಭವಾಗುವುದೆಂಬುದು ನನ್ನ ನಂಬಿಕೆ. ಈ ಮಹಾನಗರಗಳಲ್ಲಿ ಗಡಿಯಾರಗಳು ಬುದ್ಧಿ ಸ್ವಾಸ್ಥ್ಯ ಕಳೆದುಕೊಂಡು ಒಂದು ಇನ್ನೊಂದರ ಜೊತೆಗೆ ಪಂದ್ಯ ಕಟ್ಟಿದ ಹಾಗೆ ಪ್ರತಿಯೊಂದೂ ಗಂಟೆಗಳನ್ನು ಇನ್ನೊಂದಕ್ಕಿಂಥ ಬೇಗ ಬೇಗ ಬಾರಿಸತೊಡಗುತ್ತದೆ... "ಒಬ್ಬ ಲೋಭಿಯಿಂದ ಅವನ ಎಲ್ಲ ನಿಧಿಗಳನ್ನು ತೆಗೆದುಕೊಂಡರೂ ಅವನ ಹತ್ತಿರ ಇನ್ನೂ ಒಂದು ನಿಧಿ ಉಳಿಯುತ್ತದೆ. ನೀವು ಅವನಿಂದ ಅವನ ಲೋಭವನ್ನು ಅಪಹರಿಸಲಾರಿರಿ" ಎನ್ನುತ್ತಾನೆ ಮಿಲ್ಟನ್. ಇದೇ ರೀತಿ ನಾನು ಒಬ್ಬ ಆಧುನಿಕ ಕಾಲದ ವ್ಯವಹಾರಿಯ ಬಗ್ಗೆ ಹೇಳುತ್ತೇನೆ. ನೀವು ಅವನಿಗೆ ಏನು ಬೇಕಾದರೂ ಮಾಡಿ, ಅವನನ್ನು ಬೇಕಾದರೆ ಸ್ವರ್ಗದ ನಂದನವನದಲ್ಲೇ ಇಡಿ, ಅವನಿಗೆ ಅಮೃತವನ್ನೇ ಕೊಡಿ, ಅವನಲ್ಲಿ ಇನ್ನೂ ಆ ಒಂದು ಕುಂದು ಹೃದಯದಲ್ಲೇ ಇರುತ್ತದೆ. ಅವನ ವ್ಯಾಪಾರೀ ಗುಣ ಅಭ್ಯಾಸಗಳು, ಈ ವ್ಯಾಪಾರಿ ಗುಣವೆಲ್ಲ ನೀವು ನಡೆಸಿದ ನಡಿಗೆಯಿಂದ ನಿಮ್ಮೆಲ್ಲ ಸಣ್ಣತನಗಳೂ, ಜಂಭವೂ ನಷ್ಟವಾಗಿ ನೀವು ಶುದ್ಧರಾದ ಹಾಗೂ ಒಬ್ಬ ವಿಜ್ಞಾನಿ ಅಥವಾ ಮಗುವಿನಲ್ಲಿ ಹೇಗೋ ಹಾಗೆ ಕುತೂಹಲದ ಆಟಕ್ಕೆ ಅವಕಾಶ ಕೊಟ್ಟ ಹಾಗೂ ತೋರುವುದು. ನಿಮ್ಮ ಕಣ್ಣು ಮುಂದೆ ಹಳ್ಳಿ ಪ್ರದೇಶದ ವಿಚಿತ್ರ ವ್ಯಕ್ತಿಗಳೂ ಮನೋವೃತ್ತಿಗಳೂ ಬಿಚ್ಚಿ ಕೊಳ್ಳುತ್ತಾ ಈಗ ಒಂದು ಹಾಸ್ಯಾಸ್ಪದ ಪ್ರಹಸನವಾಗಿ ಅನಂತರ ಒಂದು ಪುರಾಣ ಕಥೆಯಂತೆ ಗಂಭೀರವೂ ಸುಂದರವೂ ಆಗಿ ಮಾರ್ಪಡುವುದನ್ನು ನೋಡುತ್ತಾ (ನೀವು ನಿಮ್ಮೆಲ್ಲ ಹವ್ಯಾಸಗಳನ್ನು ಬದಿಗಿಟ್ಟು) ಕುಳಿತಿರುತ್ತೀರಿ."2

ವೇಗ ಮತ್ತು ನಿಧಾನಗಳ ನಡುವಣ ವ್ಯತ್ಯಾಸ ವೈವಿಧ್ಯಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತಿರುವ ಈ ಗದ್ಯಭಾಗದಲ್ಲಿ ಕಾಲ್ನಡಿಗೆಯ ತಿರುಗಾಟಗಳ ಪರಿಣಾಮ ರಮಣೀಯತೆಯು ಹೃದ್ಯವಾಗಿ ಮೂಡಿಬಂದಿದೆ. ನಿಧಾನ ಗತಿಯ ಗ್ರಾಮೀಣತೆ ಮತ್ತು ವೇಗಬುದ್ಧಿಯ ನಗರೀಯ ನೆಲೆಗಳನ್ನು ಮುಖಾಮುಖಿಯಾಗಿಸಿರುವ ರಾಬರ್ಟ್ ಲೂಯಿ ಸ್ಟೀವನ್‌ಸನ್ ಇಲ್ಲಿ ನವೀನಯುಗದ ಮನೋವಿಕಾರಗಳಿಗೆ ಸೂಕ್ತ ಚಿಕಿತ್ಸೆಯನ್ನೇ ನೀಡಿದ್ದಾನೆ. ಕಾಲ್ನಡಿಗೆಯ ತಿರುಗಾಟಗಳಲ್ಲಿ ಆಧುನಿಕ ಮಾನವನ ಕೊಳಕೊಂಡ ಗರ್ವರಸವನ್ನು ಹೋಗಲಾಡಿಸುವ ಬಗೆಯೊಂದು ಕಣ್ಮುಂದೆ ನಿಲ್ಲುತ್ತದೆ.

ISSN: 2320-9941

ಬೆಳಗಿನಿಂದ ಸಂಜೆಯ ತನಕ ಎಲ್ಲೂ ನಿಲ್ಲದಂತೆ ಒಂದೇ ಸಮನೆ ನಡೆಯುತ್ತಾ, ಬಿಟ್ಟ ಬಾಣದಂತೆ ಗಮ್ಯ ಸ್ಥಾನವೊಂದನ್ನು ಸೇರಿಕೊಳ್ಳಲು ಧಾವಿಸುವ ಇಂದಿನ ಚಾರಣ ವೀರರು ರಾಬರ್ಟ್ ಲೂಯಿ ಸ್ಟೀವನ್‌ಸನ್ ನಿರೂಪಿಸಿರುವ ವೇಗ ಮತ್ತು ನಿಧಾನಗಳ ವ್ಯತ್ಯಾಸ – ವೈವಿಧ್ಯವನ್ನು ಗ್ರಹಿಸಬೇಕು. "ಆತುರಗಾರನಿಗೆ ಬುದ್ಧಿ ಮಟ್ಟ" ಎಂಬ ಕನ್ನಡ ಗಾದೆ ಈ ದೃಷ್ಟಿಯಿಂದ ಗಮನಾರ್ಹವಾಗಿದೆ – ಚಾರಣ ಸಾಹಿತ್ಯದಲ್ಲಿ ಆತುರ–ಕ್ಕೆ ಎಡೆಯಿಲ್ಲ. ಕುವೆಂಪು ಮಾತಿನಲ್ಲಿ ಹೇಳುವುದಾದರೆ, ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ. ಎಂಬ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಕಾಲ್ನಡಿಗೆಯ ತಿರುಗಾಟಗಳಲ್ಲಿ ಹಳ್ಳಿಗಾಡಿನ ಜನರ ಜೀವನ ಕ್ರಮ, ಸ್ಥಳೀಯ ಸಂಸ್ಕೃತಿಯ ವೈಶಿಷ್ಟ್ಯಗಳ ಜೊತೆಗೆ, ಪರ್ವತಾರಣ್ಯಗಳ ಭವ್ಯತೆ, ಧಾರಣಾ ಶಕ್ತಿ, ಜೈವಿಕ ಸರಪಳಿಯ ಜಟಿಲ ಜಾಲ ಮುಂತಾದವುಗಳನ್ನೆಲ್ಲ ಗಮನಿಸಬೇಕಾಗುತ್ತದೆ. ಇವು ವಾಹನ ಸಂಚಾರಗಳಿಂದ ಪ್ರಾಪ್ತಿಯಾಗುವುದಿಲ್ಲ. ಈ ದೃಷ್ಟಿಯಿಂದ ಪ್ರವಾಸ ಸಾಹಿತ್ಯ ಬೇರೆ ಮತ್ತು ಚಾರಣ ಸಾಹಿತ್ಯ ಬೇರೆ ಎಂಬುದನ್ನು ತಿಳಿಯಬೇಕಾಗುತ್ತದೆ.

ಈ ಸಂದರ್ಭದಲ್ಲಿ ಸಿದ್ಧಾರ್ಥ ಎಂಬುವರು ಬರೆದ "Our Souls Cannot keep pace" – ಎಂಬ ಲೇಖನವನ್ನು (ಡೆಕ್ಕನ್ ಹೆರಾಲ್ಡ್ 25–1–1998) ಸ್ಮರಿಸಿಕೊಳ್ಳಬಹುದು. ಆಫ್ರಿಕಾ ದೇಶದ ಚಾರಣ ಯಾನದಲ್ಲಿ ಕಾರ್ಲ್ ಯೂಂಗ್ ಪಡೆದ ವಿಶಿಷ್ಟ ಅನುಭವಗಳನ್ನಿಲ್ಲಿ ಪ್ರಸ್ತಾಪಿಸಲಾಗಿದೆ. ಸ್ಥಳೀಯ ಆಫ್ರಿಕನ್ನರ ಮಾರ್ಗದರ್ಶನದಲ್ಲಿ ಕಾರ್ಲ್ ಯೂಂಗ್ ಚಾರಣ ಮಾಡುತ್ತಿದ್ದಾಗ ಗಮನಿಸಿದ ಸಂಗತಿ ಹೀಗಿದೆ: ಚಾರಣದ ಹಾದಿಯುದ್ದಕ್ಕೂ ಪದೇ ಪದೇ ವಿಶ್ರಮಿಸಿಕೊಳ್ಳುತ್ತಿದ್ದ ಸ್ಥಳೀಯರನ್ನು ಸೋಮಾರಿಗಳೆಂದು ಕರೆಯಲೊಪ್ಪದ ಯೂಂಗ್ ಸೂಕ್ಷ್ಮ ಸಂವೇದನಾ ಶೀಲನಾದ್ದರಿಂದ ಸುಮ್ಮನೆ ಸಹಿಸಿಕೊಂಡಿರುತ್ತಾನೆ. ಕೊನೆಗೊಮ್ಮೆ ಬೇಸರವನ್ನು ತಡೆಯಲಾಗದೆ "ಇಷ್ಟೊಂದು ನಿಲುಗಡೆಗಳೇಕೆ?" ಎಂದು ಕೇಳಿಬಿಡುತ್ತಾನೆ. ಅದಕ್ಕೆ ಆ ಸ್ಥಳೀಯ ಆಫ್ರಿಕನ್ನರು ಕೊಡುವ ಉತ್ತರವಿದು: "ಈ ಕಾಡುದಾರಿಗಳಲ್ಲಿ ನಡೆಯುವಾಗ ನಿಮ್ಮ ವೇಗಕ್ಕೆ ತಕ್ಕಂತೆ ನಮ್ಮ ಆತ್ಮಗಳು ಒಗ್ಗಿಕೊಳ್ಳುವುದಿಲ್ಲ. ನಾವು ಆಗಾಗ್ಗೆ ಅಲ್ಲಲ್ಲಿ ನಿಂತು ಕುಂತು ಕಾಯುತ್ತಾ ಪೂರ್ವಸ್ಮೃತಿಗಳಲ್ಲಿ ಸುತ್ತಮುತ್ತ ಸುಳಿದಾಡುವ ನಮ್ಮ ಅತ್ಮಗಳನ್ನು ಮರಳಿ ಹಿಡಿದಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನಾವು ಗೊಂದಲಕ್ಕೊಳಗಾಗಿ ಈ ಕಾಡಿನಲ್ಲಿ ಕಳೆದು ಹೋಗಿಬಿಡುತ್ತೇವೆ" ಆಫ್ರಿಕಾ ದೇಶದ ಬುಡಕಟ್ಟು ಜನರ ಈ ಮಾತುಗಳು ನಾಗರಿಕರ ವೇಗಬುದ್ಧಿ ಮತ್ತು ಗ್ರಾಮೀಣರ ನಿಧಾನಗತಿಯ ಮಹಾನ್ ರೂಪಕದಂತೆ ಮೂಡಿಬಂದಿವೆ. ಚಾರಣ ಸಾಹಿತ್ಯದ ಬಹುಮುಖ್ಯ ಆಯಾಮವಾದ ಕಾಲ್ನಡಿಗೆಯ ತಿರುಗಾಟಗಳಲ್ಲಿ ಗಮನಿಸಲೇಬೇಕಾದ ಸೂಕ್ಷ್ಮ ವಿಚಾರವಿದೆಂದು ಹೇಳಬಹುದು.

ವೇಗ ಮತ್ತು ನಿಧಾನಗಳ ಈ ದ್ವಂದ್ವಾತ್ಮಕತೆ ಮತ್ತು ಸಂಘರ್ಷಭಾವಗಳನ್ನು ಬಿಂಬಿಸುವ ಹಲವು ಕತೆಗಳು, ಪೌರಾಣಿಕ ರೂಪಕಗಳು ನಮ್ಮಲ್ಲಿವೆ. ಆಮೆ ಮತ್ತು ಮೊಲದ ರೇಸಿನ ಕತೆ, ವಿಶ್ವ ಪ್ರದಕ್ಷಿಣೆಯ ಪಣಕ್ಕೊಳಗಾಗುವ ಸುಬ್ರಹ್ಮಣ್ಯ ಮತ್ತು ಗಣಪತಿ ಪ್ರಸಂಗ – ಇವು ತನ್ನ ಆಂತರ್ಯದಲ್ಲಿ ವೇಗ–ನಿಧಾನಗಳ ಸಂಘರ್ಷವನ್ನೇ ಹೇಳುತ್ತಿವೆ. ನಿಧಾನವೇ ಪ್ರಧಾನವೆಂಬ ಕಾಲ್ನಡಿಗೆಯ ತಿರುಗಾಟಗಳಿಂದ ಪ್ರಾಪ್ತಿಯಾಗುವ ಸಿದ್ಧಿ–ಸಾಧನೆಗಳಿಗೆ ಹೆನ್ರಿಡೇವಿಡ್ ಥೋರೋ ಮತ್ತೊಂದು ಉದಾಹರಣೆಯಾಗಿದ್ದಾನೆ. ಇತನ 'ಫಚಿಟಜಜಟಿ ೀಡಿ ಟಿಜ ಚಿಟಿಜ ಔಣಖಜಡಿ ಘಿಡುಣ–ುಟಿಧಿ' ಆಂಗ್ಲ ಚಾರಣ ಸಾಹಿತ್ಯದ ಅತ್ಯುತ್ತಮ ಪ್ರತಿನಿಧಿಯಾಗಿದೆ. ಸತ್ಯಾಗ್ರಹದ ಸಮರಕ್ಕೆ ಕಾಲ್ನಡಿಗೆಯನ್ನು ಒಂದು ಮಹಾನ್ ಅಸ್ತ್ರವನ್ನಾಗಿ ಬಳಸಿದ ಗಾಂಧಿಯವರು ಥೋರೋ ಪ್ರಭಾವಕ್ಕೆ ಒಳಗಾಗಿರುವುದನ್ನು ಗಾಂಧಿಯವರ ಮಾತುಗಳಲ್ಲೇ ಕೇಳೋಣ:

"..... ಭೂಮಿಯನ್ನು ಸಾಗುವಳಿ ಮಾಡುವ ಉತ್ಕೃಷ್ಟವಾದ ಕೆಲಸದ ತರುವಾಯ ಅಡ್ಡಾಡಲಿಕ್ಕೆ ಹೋಗುವುದು ಸರ್ವೋತ್ತಮವಾದ ವ್ಯಾಯಾಮವಾಗಿದೆ. ಇದು ಎಲ್ಲ ವ್ಯಾಯಾಮಗಳ ಅರಸನಂತಿರುವುದು. ನಮ್ಮ ದೇಶದೊಳಗಿನ ಫಕೀರರೂ, ಸಾಧುಗಳೂ ತಮ್ಮ ಯಾತ್ರೆಗಾಗಿ ದೇಶದ ಒಂದು ತುದಿಯಿಂದ ಮತ್ತೊಂದು ತುದಿಗೆ ಕಾಲ್ನಡಿಗೆಯಿಂದಲೇ ಪ್ರಯಾಣ ಮಾಡುವುದರಿಂದ ಒಳ್ಳೆಯ ಗಟ್ಟಿಗರಾಗಿರುವರು. ಥೋರೋ ನಾಮಕ ಪ್ರಸಿದ್ಧ ಅಮೇರಿಕನ್ನನು ಅಡ್ಡಾಡುವುದರಿಂದಾಗುವ ವ್ಯಾಯಾಮದ ವಿಷಯಕ್ಕೆ ಬಹು ಯೋಗ್ಯ ವಿಚಾರಸರಣಿಗಳಿಂದ ಯುಕ್ತವಾದ ಒಂದು ಗ್ರಂಥವನ್ನು ಬರೆದಿರುವನು. ಸಮಯವು ಸಿಗುವುದಿಲ್ಲವೆಂಬ ನೆವದಿಂದ ಹೊರಗೆ ಹೋಗಿ ಚೆನ್ನಾಗಿ ಅಡ್ಡಾಡದೆ, ಯಾವಾಗಲು, ಕುಳಿತಲ್ಲಿಯೇ ಕುಳಿತು ಓದು ಬರೆಯುವ ಲೇಖಕನ ಲೇಖನಗಳು ಆತನ ಶರೀರದಷ್ಟೇ ನಿಸ್ಸಾರವಾಗಿರುವುವೆಂದು ಆತನು ವರ್ಣಿಸಿರುವನು. ತನ್ನ ಸ್ವಂತ ಅನುಭವವನ್ನು ಕುರಿತು ಥೋರೋ ಬರೆಯುವುದೇನೆಂದರೆ "ನನ್ನ ದೊಡ್ಡ ಗ್ರಂಥಗಳು ನಾನು ವಿಶೇಷವಾಗಿ ತಿರುಗಾಡಲಿಕ್ಕೆ ಹೋದ ಸಮಯದಲ್ಲಿಯೇ

ಬರೆಯಲ್ಪಟ್ಟವು. ಅಡ್ಡಾಡುವುದೆಂದರೆ ನನಗೆ ರೂಢಿಯೇ ಬಿದ್ದ ಹಾಗಾಗಿ, ನಾಲ್ಕೈದು ತಾಸುಗಳವರೆಗೆ ಅಡ್ಡಾಡಿದ–ರೆ ನನಗೆ ಏನೂ ಅನ್ನಿಸುತ್ತಿರಲಿಲ್ಲ. ಸಾಕಷ್ಟು ಶಾರೀರಿಕ ವ್ಯಾಯಾಮವಿಲ್ಲದೆ ಮಾಡಿದ ಮಾನಸಿಕ ಕೆಲಸಗಳು ನೀರಸವಾಗಿಯೂ ನಿಸ್ಸತ್ವವಾಗಿಯೂ ಆಗುವುವೆಂಬುದು ನಮಗೆ ಗೊತ್ತಾಗುವುದಿಲ್ಲ. ನಾವು ಒತ್ತಡದಿಂದ ನಡೆಯುವಾಗ ಹೊರಗಿನ ಶುದ್ಧ ಹವೆಯು ಶ್ವಾಸಕೋಶಗಳಲ್ಲಿ ಬಹಳವಾಗಿ ಸೇರಿಕೊಳ್ಳುವುದು. ಹಾಗೆಂದು ಊರಲ್ಲಿ ಓಣಿಯೊಳಗೆ ತಿರುಗಾಡುವುದೂ ಅಥವಾ ದಿನಾಲು ಒಂದೇ ಕಡೆಗೆ ಅಡ್ಡಾಡಲಿಕ್ಕೆ ಹೋಗುವುದೂ ತಕ್ಕದ್ದಲ್ಲ. ಇದರ ಬದಲಾಗಿ ಅಡವಿಗಳಲ್ಲಿಯೂ ಹೊಲಗಳಲ್ಲಿಯೂ ಅಡ್ಡಾಡಲಿಕ್ಕೆ ಹೊರಟರೆ ಸೃಷ್ಟಿ ನಿರ್ಮಾಣದ ವೈಚಿತ್ರ್ಯವು ಗೋಚರವಾಗಿ ನಮಗೆ ಆನಂದವಾಗುವುದು."3

ಚಾರಣ ಪ್ರಜ್ಞೆ ಮತ್ತು ಚಾರಣ ಸಾಹಿತ್ಯಗಳ ಲಕ್ಷ್ಯ – ಲಕ್ಷಣದ ಬಗ್ಗೆ ಇದಕ್ಕಿಂತಲೂ ಚೆನ್ನಾಗಿ ಹೇಳಲು ಶಕ್ಯವಿಲ್ಲ. ಹಳ್ಳಿಗಾಡು ಮತ್ತು ಪರ್ವತಾರಣ್ಯಗಳಲ್ಲಿ ಅಲೆದಾಡುವ ಭಾಗ್ಯವನ್ನು ಪಂಪ ಕವಿಯು 'ನೆಲ ಮುಟ್ಟುವ ಆಳ್ತಿ' ಎಂದು ಕರೆದಿದ್ದಾನೆ. "ಕಾಡೊಡಮೆ ಎಳಸಲೆ ಕಗ್ಗೂಡಿದುದೆನೆ ನೆಲದೊಳಿರ್ದ ನೆಲ್ಲಿಯ ಕಾಯೇಂ ? ನೋಡ! ನೆಲ ಮುಟ್ಟಲ್ ಅಲ್ಲಿಯೊಳಾಡುವೊಡೆ ಈ ದೆವಸಮಲ್ತೆ ಬೇಂಟೆಯ ದೆವಸಂ" (ವಿ.ವಿ. 5.40). ಈ ಸಾಲುಗಳನ್ನು ಪಂಪನ ಸಮಸ್ತ ಭಾರತ ಕಥಾಮೃತದಲ್ಲಿ ಡಾ. ಎಲ್. ಬಸವರಾಜು ಅವರು ತಪ್ಪಾಗಿ ಗ್ರಹಿಸಿ ಅನುವಾದಿಸಿದ್ದಾರೆ. "ಯಾರಾಗಲಿ ಇಷ್ಟಪಟ್ಟ ಮಾತ್ರಕ್ಕೇ ಕಾಡು ಕೈವಶವಾಗುವುದೆನ್ನಲು ಅದೇನು ನೆಲಕ್ಕುದುರಿದ ನೆಲ್ಲಿಕಾಯೇನು? ನೆಲವನ್ನೇ ಸೋಕದ ಪ್ರೀತಿಯಲ್ಲಿ ಆಡುವುದಾದರೆ ಈ ದಿನವೇ ಅಲ್ಲವೇ ಬೇಟೆಯ ದಿವಸ ?" ಈ ಸಾಲುಗಳ ಸರಿಯಾದ ಗ್ರಹಿಕೆ ಮತ್ತು ಸಮರ್ಪಕ ಅನುವಾದ ಹೀಗಿದೆ: ಅರಣ್ಯವೆಂಬ ನಿಧಿ ಬಯಸಿದೊಡನೆ ಕೈಗೂಡಿತೆನ್ನಲು ನೆಲದಲ್ಲಿ ಉದುರಿ ಬಿದ್ದಿರುವ ನೆಲ್ಲಿಯ ಕಾಯಿಯೇ? ನೆಲವನ್ನು ಮುಟ್ಟಿ ಪ್ರೀತಿಯಿಂದ ಆಡುವ ಈ ದಿವಸವೇ ಬೇಟೆಯ ದಿವಸವಲ್ಲವೆ? – ಪಂಪನು ಹೇಳುತ್ತಿರುವ, ಕಾಡು ಬೇಟೆಯ 'ದಿವಸಗಳು, ಎಂಬುದನ್ನು 'ಕಾಡು ಬೇಟದ ದಿವಸಗಳು' ಎಂದು ಬದಲಾಯಿಸಿಕೊಂಡಲ್ಲಿ ಅದುವೇ ಚಾರಣ ಸಾಹಿತ್ಯದ ವ್ಯಾಖ್ಯಾನವಾಗುತ್ತದೆ. ನೆಲವನ್ನು ಮುಟ್ಟುವ ಅಲ್ಲಿ ಪಂಪನ ಕಾಲದಲ್ಲಿ ಎಂತೋ ಅಂತೆಯೇ ಇಂದಿನ ನವೀನಯುಗದಲ್ಲೂ ಆದರ್ಶವಾಗಿ ಮೆರೆಯಬೇಕಾಗಿದೆ. ಇದಕ್ಕೆ ಕಾಲ್ನಡಿಗೆಯ ತಿರುಗಾಟಗಳೇ ಸೂಕ್ತ ಮಾರ್ಗವೆನಿಸುತ್ತದೆ.

2. ಹಸಿರು ಕಾಳಜಿ

ಮನುಕುಲದ ಇತಿಹಾಸಕ್ಕೆ ಎರಡು ದಡಗಳಿವೆ 1. ನಿಸರ್ಗ 2. ಸಂಸ್ಕೃತಿ ಪ್ರತಿಯೊಬ್ಬ ಮನುಷ್ಯನೂ ಹುಟ್ಟುತ್ತಲೇ ನಿಸರ್ಗದ ಭಾಗವಾಗಿರುತ್ತಾನೆ. ಆದರೆ ಭಾಷೆಯನ್ನು ಕಲಿಯುತ್ತಾ ಜಾತಿ, ಮತ, ಧರ್ಮ, ಕಾಲ ದೇಶಗಳ ಪಂಜರ–ಕ್ಕೆ ಸಿಲುಕಿ ಸಂಸ್ಕೃತಿಯ ದಡದಲ್ಲೇ ಇದ್ದು ಬಿಡುತ್ತಾನೆ. ಮತ್ತೆ ಮನುಷ್ಯ ನಿಸರ್ಗಕ್ಕೆ ವಾಪಸಾಗುವುದು ಸಾವಿನಲ್ಲಿ. ಹೀಗೆ ಹುಟ್ಟು ಮತ್ತು ಸಾವು –ಈ ಎರಡು ಸಂದರ್ಭಗಳಲ್ಲಷ್ಟೆ ಮನುಷ್ಯ ನಿಸರ್ಗದ ಭಾಗವಾಗಿರುತ್ತಾನೆಯೇ ವಿನಾ ಉಳಿದಂತೆ ಹುಟ್ಟಿನಿಂದ ಹಿಡಿದು ಸಾವಿನವರೆಗೆ ಸಂಸ್ಕೃತಿಯ ಪಂಜರದಲ್ಲಿ ಖೈದಿಯಾಗಿಯೇ ಬದುಕುತ್ತಾನೆ. ಅವನಿಗೆ ನಿಸರ್ಗದ ನೆನಪೇ ಆಗುವುದಿಲ್ಲ.

ಸಂಸ್ಕೃತಿಯ ಪಂಜರಗಳನ್ನೇ 'ನಿಕೇತನ' ಎಂದು ಕರೆಯಬಹುದು. 'ನಿಕೇತನ' ಎಂದರೆ ನಾಲ್ಕು ಗೋಡೆಗಳ ರಚನೆ ಎಂದರ್ಥ. ಬಹುತೇಕ ಮಾನವರು ಹುಟ್ಟುವುದು, ಬೆಳೆಯುವುದು, ಕಲಿಯುವುದು, ದುಡಿಯುವುದು ಇತ್ಯಾದಿಗಳು ನಾಲ್ಕು ಗೋಡೆಗಳಲ್ಲಿಯೇ! ಸಂಸ್ಕೃತಿಯ ಇಂಥ ದಡವನ್ನು ಮೀರಿ ನಿಸರ್ಗವೆಂಬ ಅನಿಕೇತನಕ್ಕೆ ಹತ್ತಿರವಾಗಬೇಕೆಂಬ ಪ್ರತಿಪಾದನೆ ಕುವೆಂಪು ಸಾಹಿತ್ಯದಲ್ಲಿದೆ. ಈ ಅರ್ಥದಲ್ಲೇ ಅವರು "ಓ ನನ್ನ ಚೇತನ ಆಗು ನೀ ಅನಿಕೇತನ" ಎಂದು ಹಾಡಿದ್ದಾರೆ. ನಾವು ಇದನ್ನರಿತು ಸಂಸ್ಕೃತಿಯ ದಡದಲ್ಲಿ ಸ್ಥಗಿತರಾಗಿ ಉಳಿಯದೆ, ನಿಸರ್ಗದ ಕಡೆಗೂ ಚಲಿಸಬೇಕಾಗುತ್ತದೆ. ಅಂದರೆ, ಸಂಸ್ಕೃತಿ ಮತ್ತು ನಿಸರ್ಗ ಎಂಬ ಎರಡೂ ದಡಗಳನ್ನು ಒಳಗೊಳ್ಳುವಂಥ ಜೀವನ ಶೈಲಿಯೊಂದನ್ನು ಪ್ರಜ್ಞಾ ಪೂರ್ವಕವಾಗಿ ಅಳವಡಿಸಿಕೊಳ್ಳಬೇಕಾಗಿದೆ. ಈ ಚಲನಶೀಲ ಪ್ರಕ್ರಿಯೆಯನ್ನು 'ನಿಸರ್ಗೀಕರಣ'ವೆಂಬ ಮಾತಿನಿಂದ ನಿರ್ದೇಶಿಸಬಹುದು. ಇದರಿಂದ ಮೈಮನಗಳಿಗೆ ಹಿತಕರ ಮತ್ತು ಅದೇ ಆರೋಗ್ಯವಂತಿಕೆ ಕೂಡ! ಇದನ್ನು ವ್ಯಕ್ತಿ ಮತ್ತು ರಾಷ್ಟ್ರ, ವ್ಯಷ್ಟಿ ಮತ್ತು ಸಮಷ್ಟಿ ಎರಡೂ ನೆಲೆಗಳಲ್ಲೂ ಅನ್ವಯಿಸಿಕೊಂಡು ಅರ್ಥ ಮಾಡಿಕೊಳ್ಳಬೇಕು. ಸಂಸ್ಕೃತಿಯ ಹುಸಿ ನುಸುಳುಗಳಿಂದ, ಕೃತಕ ಆಚ್ಛಾದನಗಳಿಂದ ಪಾರಾಗಿ ನಿಸರ್ಗವನ್ನು ಸೂಕ್ಷ್ಮ ಮತ್ತು ಸಮಗ್ರ ನೆಲೆಗಳಲ್ಲಿ ಒಳಗೊಳ್ಳುವ ಪ್ರಜ್ಞೆಯೇ 'ಹಸಿರು ಕಾಳಜಿ'ಯಾಗಿದೆ.

ISSN: 2320-9941

ಸಂಸ್ಕೃತಿ ಸಿದ್ಧಿಯ ಸಂಭ್ರಮದಲ್ಲಿ ನಿಸರ್ಗದಿಂದ ದೂರವಾಗದೆ, ನಿಸರ್ಗಕ್ಕೆ ಅಪರಿಚಿತರೆನಿಸದೆ, ನಿಸರ್ಗದೊಂದಿಗೆ ಸಹಜವಾಗಿರುವ ರೀತಿ – ನೀತಿಗಳನ್ನು ಹಸಿರು ಕಾಳಜಿ ಎಂದು ಕರೆಯಲಾಗಿದೆ.

ಹಸಿರು ಕಾಳಜಿಯ ಸುವಿಶಾಲ ನಿರೂಪ ಮತ್ತು ಸಂಕೀರ್ಣ ದರ್ಶನಗಳನ್ನು ಗ್ರಹಿಸಬೇಕಾದರೆ, ನಿಸರ್ಗದ ವ್ಯಾಖ್ಯೆಯನ್ನು ಕಂಡು ಕೊಳ್ಳಬೇಕಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ನಿಸರ್ಗ ಮತ್ತು ಪ್ರಕೃತಿ ಎಂಬ ಪರಿಭಾಷೆಗಳನ್ನು ಪರ್ಯಾಯ ಶಬ್ದಗಳಂತೆ ಬಳಸುವ ವಾಡಿಕೆಯಿದೆ. ಕರ್ನಾಟಕ ಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ –ಎಂಬ ಲೇಖನವನ್ನು ಬರೆದಿರುವ ಆಚಾರ್ಯ ಡಿ.ಎಲ್. ನರಸಿಂಹಾಚಾರ್ ಅವರು ಕನ್ನಡ ಸಾಹಿತ್ಯದ ಕೃತಿಗಳಲ್ಲಿರುವ ಅಷ್ಟಾದಶ ವರ್ಣನೆಗಳ ಪೈಕಿ, ಉದಧಿ–ಋತು–ದಿನೇಶ–ಚಂದ್ರ– ಮಧು–ಕುಭೃದುದಕ–ವನಸ್ಪತಿಗಳೆಂಬ ಏಳು ವರ್ಣನೆಗಳನ್ನು ಪ್ರಕೃತಿ ವರ್ಣನೆಗಳಿಗೆ ಸಂಬಂಧಪಟ್ಟುವೆಂದು ಹೇಳಿದ್ದಾರೆ.

ಇಲ್ಲಿ ಡಿ.ಎಲ್. ಎನ್. ನಿಸರ್ಗವನ್ನು ಗಣಿತಕ್ಕೊಳಪಡಿಸಿದ್ದರೂ, ವಾಸ್ತವವಾಗಿ ನಿಸರ್ಗದ ವ್ಯಾಪ್ತಿ ಅಗಣಿತವೆಂಬುದನ್ನು ಮರೆಯಬಾರದು. ನಿಸರ್ಗದ ಆಗಣಿತ ವ್ಯಾಪ್ತಿಗೆ ಸಂಬಂಧಪಟ್ಟ ವ್ಯಾಖ್ಯೆಯೊಂದನ್ನು ಡಾ. ಕೆ.ವಿ. ನಾರಾಯಣ ಅವರು ನೀಡಿರುವುದು ಈ ಸಂದರ್ಭದಲ್ಲಿ ಉಲ್ಲೇಖನಾರ್ಹವಾಗಿದೆ:

“ಮನುಷ್ಯನನ್ನು ಹೊರತು ಪಡಿಸಿ ಈ ಸೃಷ್ಟಿಯ ಪ್ರತಿಯೊಂದು ವ್ಯಾಪಾರ ಇವೆಲ್ಲ ‘ನಿಸರ್ಗ’ ವೆನಿಸಿಕೊಳ್ಳುತ್ತವೆ. ಮನುಷ್ಯನನ್ನು ಹೊರತುಪಡಿಸಿ ಎಂದೆನಷ್ಟೆ ಬಹುಶಃ ಈ ಶತಮಾನ ಎದುರಿಸಿದ ಅತ್ಯಂತ ಗಹನವಾದ ಪ್ರಶ್ನೆ ಈ ಹೊರತುಪಡಿಸುವಿಕೆಯನ್ನು ಕುರಿತೇ ಇದೆ ಎಂಬುದನ್ನು ಗಮನಿಸಬೇಕು. ಹಾಗೆ ನೋಡಿದರೆ ದೇಹ, ಪ್ರಾಣ ಮತ್ತು ಮನಸ್ಸುಗಳ ಮಟ್ಟಿಗೆ ಮನುಷ್ಯ ನಿಸರ್ಗದ ಒಂದು ಭಾಗವೇ ಸರಿ. ಆದರೆ ಪ್ರಜ್ಞೆಯ ಆವಿಷ್ಕಾರದೊಡನೆ ನಿಸರ್ಗದ ಅಂಶಗಳನ್ನು ಹೊತ್ತೂ ಅದರಿಂದ ಬೇರೆಯಾಗುವ ಪ್ರಕ್ರಿಯೆ ಮೊದಲಾಗುತ್ತದೆ. ಹಾಗಾಗಿ ಮನುಷ್ಯ ನಿಸರ್ಗದಿಂದ ಹೊರತಾಗಿದ್ದಾನೆ ಎನ್ನುವ ಮಾತಿನಷ್ಟೇ ಅದರ ಭಾಗವೇ ಆಗಿದ್ದಾನೆ ಎಂಬುದೂ ನಿಜ.”4

ನಿಸರ್ಗ ಮತ್ತು ಮನುಷ್ಯನ ಸಂಬಂಧಗಳನ್ನು ಡಯಲೆಕ್ಟಿಕ್ ದೃಷ್ಟಿಯಿಂದ ವಿವರಿಸುತ್ತಿರುವ ಕೆ. ವಿ. ಎನ್. ಅವರು ಮೇಲಿನ ನಿರ್ವಚನದಲ್ಲಿ ಎರಡು ನೆಲೆಗಳನ್ನು ಏಕಕಾಲಕ್ಕೆ ಗುರುತಿಸುತ್ತಿದ್ದಾರೆ. ಇದನ್ನು ಕೆಳಕಂಡ ಪರಿಭಾಷೆಯಲ್ಲಿ ಹೀಗೆ ವಿವರಿಸಬಹುದು:

1. ನಿಸರ್ಗ ಮುಖ ದೃಷ್ಟಿ

2. ನಿಸರ್ಗ ವಿಮುಖ ದೃಷ್ಟಿ

ಮನುಷ್ಯನು ನಿಸರ್ಗದ ಒಂದು ಮುಖವೆಂಬ ಗ್ರಹಿಕೆಯೇ ನಿಸರ್ಗ ಮುಖ ದೃಷ್ಟಿ ಎನಿಸಿಕೊಂಡರೆ ಮನುಷ್ಯ ನಿಸರ್ಗದಿಂದ ವಿಮುಖನಾಗುತ್ತಿದ್ದಾನೆಂಬ ಗ್ರಹಿಕೆಯೇ ನಿಸರ್ಗ ವಿಮುಖ ದೃಷ್ಟಿಯಾಗಿದೆ. ಇವರೆಡರಲ್ಲಿ ಮೊದಲನೆಯದು ನೈಸರ್ಗಿಕ ಗ್ರಹಿಕೆ ಎನಿಸಿಕೊಂಡರೆ, ಎರಡನೆಯದು ಸಂಸ್ಕೃತಿ ಜನ್ಯ ಕೊಡುಗೆಯಾಗಿದೆ. ವಿಶೇಷವಾಗಿ ‘ಗ್ರಾಮೀಣ’ರಲ್ಲಿ ನಿಸರ್ಗ ಮುಖ ದೃಷ್ಟಿಯನ್ನು ಮನಗಾಣಬಹುದಾದರೆ, ನಗರೀಯರಲ್ಲಿ ನಿಸರ್ಗ ವಿಮುಖ ದೃಷ್ಟಿಯನ್ನು ಗುರುತಿಸಬಹುದು. ನಮ್ಮ ದೇಶದ ಮಹಾನಗರಗಳ ಬದುಕನ್ನು ಅವಲೋಕನ ಮಾಡಿದ್ದಾದರೆ, ನಿಸರ್ಗವಿದೂರ ನೆಲೆಗಳ ಪರಿಚಯವಾಗುತ್ತದೆ. ಒಂದು ಮಾತಿನಲ್ಲಿ ಹೇಳುವುದಾದರೆ, ನಾಗರಿಕರಾಗುವುದೆಂದರೆ, ನಿಸರ್ಗದಿಂದ ದೂರ ಸರಿಯುವುದು ಎಂದರ್ಥ! ಡಾ. ಕೆ.ವಿ. ನಾರಾಯಣ ಅವರು ಹೇಳುವಂತೆ “ನಿಸರ್ಗ ಮತ್ತು ಸಂಸ್ಕೃತಿಗಳು ಭಿನ್ನ ತಾತ್ವಿಕ ನೆಲೆಗಳನ್ನು ಹೊಂದಿವೆ. ಸಂಸ್ಕೃತಿ ಎಂಬುದು ನಿಸರ್ಗದ ಮೂಲಕವೇ ಮೈ ತಳೆದರೂ ಅದನ್ನು ಮೀರುವ ನಿರ್ವಹಿಸುವ ನೆಲೆಯುತ್ತ ಸಾಗುತ್ತದೆ”. ನಿಸರ್ಗ ಮತ್ತು ಮನುಷ್ಯನ ಸಂಬಂಧಗಳಲ್ಲಿ ಪ್ರಕಟಗೊಳ್ಳುವ ಈ ದ್ವಂದ್ವಮಾನ ದೃಷ್ಟಿಯನ್ನು ಹಸಿರು ಓದಿನ ಮೂಲಕ ಹಾಗೂ ಹಸಿರು ಸಾಹಿತ್ಯದ ಪರಿಶೀಲನೆಯ ಮೂಲಕ ಅಧ್ಯಯನ ಮಾಡುವುದೇ ಹಸಿರು ಕಾಳಜಿ ಎನಿಸಿಕೊಳ್ಳುತ್ತದೆ.

ಈ ಮೇಲೆ ಪ್ರಸ್ತಾಪಿಸಿದ ಗ್ರಾಮೀಣ ಮತ್ತು ನಗರೀಯಗಳೆಂಬ ವಿರುದ್ಧ ನೆಲೆಗಳು ನಮ್ಮ ಸಂದರ್ಭದಲ್ಲಿ ರೂಪುಗೊಂಡ ಬಗೆಯನ್ನು ಇಲ್ಲಿ ಪರಿಶೀಲಿಸಬಹುದು. ನವಭಾರತದ ನಿರ್ಮಾಣ ಕಾರ್ಯವು ಹೇಗಿರಬೇಕೆಂಬ ಸ್ಪಷ್ಟ ಅರಿವಿದ್ದ ಲೋಹಿಯಾ ಅವರು 1. ಹಳ್ಳಿ 2. ಜಿಲ್ಲೆ, 3. ಪ್ರಾಂತ 4. ಕೇಂದ್ರಗಳೆಂಬ ನಾಲ್ಕು ಕಂಬಗಳ ರಾಷ್ಟ್ರದ ಪರಿಕಲ್ಪನೆಯನ್ನು ಮುಂದಿಟ್ಟು ಕ್ರಮವಾಗಿ ಗ್ರಾಮ ಪಂಚಾಯತ್ ಜಿಲ್ಲಾ ಪಂಚಾಯತ್ – ರಾಜ್ಯ ಸರ್ಕಾರ–ಕೇಂದ್ರ ಸರ್ಕಾರಗಳೆಂಬ ನಾಲ್ಕು ತಲೆಗಳ ಆಡಳಿತ ವ್ಯವಸ್ಥೆಯನ್ನು ಪ್ರತಿಪಾದಿಸಿದ್ದರು. ಇದು ಸ್ಪಷ್ಟವಾಗಿ ಗಾಂಧಿಯವರ ಗ್ರಾಮ ಸ್ವರಾಜ್ ನೀತಿಯನ್ನು ಒಳಗೊಂಡ ಚಿಂತನೆಯಾಗಿದೆ. ಇದರಲ್ಲಿ ಜನ ಸಮುದಾಯಗಳ ಭಾಗವಹಿಸುವಿಕೆ

ಮತ್ತು ಸ್ವಯಂ ಸರ್ಕಾರದ ಆಶಯಗಳಿದ್ದವು. ಆದರೆ, ನೆಹರೂ ನೇತೃತ್ವದ ಪಡೆ ಕೇಂದ್ರ ಮತ್ತು ರಾಜ್ಯಗಳಿಗೆ ಕೊಟ್ಟ ವಿಶೇಷವಾದ ಪ್ರಾಶಸ್ತ್ಯದಿಂದಾಗಿ ಜಿಲ್ಲೆ ಮತ್ತು ಹಳ್ಳಿಯ ನೆಲೆಗಳು ನಿರ್ಲಕ್ಷ್ಯಕ್ಕೆ ಒಳಗಾದವು. ಇದರ ಪರಿಣಾಮವಾಗಿಯೇ ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವದ ಹೊತ್ತಿಗೆ ನಗರ ಪ್ರದೇಶಗಳು ಮತ್ತು ಗ್ರಾಮೀಣ ಪ್ರದೇಶಗಳೆಂಬ ವಿರುದ್ಧ ಧ್ರುವಗಳ ರಚನೆಯಾಯ್ತು. ಸಕಲ ಸೌಲಭ್ಯಗಳಿಂದ ಕೂಡಿದ ನಗರ ಪ್ರದೇಶಗಳು ಸಾವಿರ ಕಣ್ಣುಗಳು ನವಿಲಿನಂತೆ ಚಿತ್ತಾಪಹಾರಿಯಾಗಿದ್ದರೆ ಕನಿಷ್ಠ ಸೌಲಭ್ಯಗಳು ಇಲ್ಲದ ಗ್ರಾಮೀಣ ಪ್ರದೇಶಗಳು ಅಷ್ಟಾವಕ್ರನಂತೆ ತೋರುತ್ತಾ ತಿರಸ್ಕಾರಕ್ಕೆ ತುತ್ತಾದವು. ಈ ಗ್ರಾಮೀಣ ಮತ್ತು ನಗರೀಯಗಳು ಪರಸ್ಪರ ಸಂಧಿಸಲಾಗದೆ ವಿರುದ್ಧ ಧ್ರುವಗಳಾಗಿರುವುದರಿಂದಲೇ ಇಂದು ನಗರಾಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಎಂಬ ವಿಭಜನೆಯುಂಟಾಗಿ ಪರಸ್ಪರ ತಾಳ ಮೇಳವಿಲ್ಲದ ಪರಿಸ್ಥಿತಿ ತಲೆದೋರಿದೆ. ಗಾಂಧಿಯವರ ಚಿಂತನೆಗಳಲ್ಲಿ ಮುನ್ನೋಟವೆಂಬಂತೆ ಪ್ರಕಟಗೊಂಡಿದ್ದ ಗ್ರಾಮ ಸ್ವರಾಜ್ ಮತ್ತು ಪರಿಸರ ಸ್ನೇಹಿ ವಿಚಾರಗಳನ್ನು ನೆಹರೂ ಯುಗದಲ್ಲಿ ಒಂಟಿದನಿಯೆಂಬಂತೆ ಎತ್ತಿ ಹಿಡಿದ ಲೋಹಿಯಾ ಅವರ ಹಸಿರು ಕಾಳಜಿಯ ವಿಚಾರಧಾರೆ ಇಂದು ನಮಗೆ ತುಂಬ ಪ್ರಸ್ತುತವಾಗಿ ಕಾಣುತ್ತದೆ. ಈ ದೃಷ್ಟಿಯಿಂದ ಇಂಡಿಯಾದ ನದಿಗಳು ಎಂಬ ಲೋಹಿಯಾ ಅವರ ಪ್ರಬಂಧ (1958) ಬಹು ಮುಖ್ಯವಾಗಿದೆ.

"ನಮ್ಮ ದೇಶದ (ಜನತೆಯ) ಮನಸ್ಸು, ಹೃದಯಗಳು ನದಿಗಳ ಸಂಗಡ ಬೆಸೆದು ಹೋಗಿದ್ದಾವೆ. ಆದ–ರೆ ನದಿಗಳೋ ನಗರಗಳಿಂದ ಹರಿದು ಬರುವ ಕೊಳಚೆ ನೀರು ಮತ್ತು ವಿಸರ್ಜನೆಗಳು ಬಿದ್ದು, ಕಲುಷಿತವಾಗಿ ಬಿಟ್ಟಿರುತ್ತವೆ. ಕೊಳಚೆ ನೀರಿನಲ್ಲಿ ಹೆಚ್ಚು ಭಾಗ ಕಾರ್ಖಾನೆಗಳಿಂದ ಬರುತ್ತದೆ. ಹೀಗೆ ನದಿ ನೀರನ್ನು ಕಲುಷಿತ ಮಾಡುವುದರ ವಿರುದ್ಧ ನಾವು ಒಂದು ಚಳುವಳಿಯನ್ನೇ ಪ್ರಾರಂಭಿಸಬೇಕೆ? ಕೊಳಚೆ ನೀರನ್ನು ಗಂಗಾಕ್ಕೋ ಕಾವೇರಿಗೋ ನಾಲೆ ತೆಗೆದು ಬಿಡುವುದಕ್ಕೆ ಬದಲಾಗಿ ಕಾಲುವೆಗಳ ಮೂಲಕ ಹತ್ತು ಇಪ್ಪತ್ತು ಮೈಲಿ ದೂರ ಸಾಗಿಸಿ ಅಲ್ಲಿ ಹೊಲಗಳಿಗೆ ಬಿಡಬೇಕು, ಅಲ್ಲಿ ಗೊಬ್ಬರದ ಕಾರ್ಖಾನೆಗಳನ್ನು ನಿರ್ಮಿಸಬಹುದು. (ರಾಜಕೀಯದ ಮಧ್ಯೆ ಬಿಡುವು, ಅನು: ಕೆ.ವಿ. ಸುಬ್ಬಣ್ಣ)

ಲೋಹಿಯಾ ಚಿಂತನೆಯಲ್ಲಿ ಗಾಂಧಿಯವರು ಹೇಳುವಂತೆ ನಗರಗಳು ನಿರ್ವಹಿಸಬೇಕಾದ ಗ್ರಾಮ ಜೀವನ ಪೋಷಕ ಪಾತ್ರವನ್ನು ಗುರುತಿಸಬಹುದು. ಯೋಜನಾ ರಹಿತ ನಗರ ಸಂಸ್ಕೃತಿ ತುಂಬ ಅಪಾಯಕಾರಿಯಾದ ಬೆಳವಣಿಗೆ, ಭಾರತದ ಮಹಾನಗರಗಳು ಹಸಿರು ಕಾಳಜಿಯ ಮುನ್ನೋಟ ಮತ್ತು ಪರಿಸರ ಸ್ನೇಹಿಯಾದ ದೂರದೃಷ್ಟಿಗಳಿಲ್ಲದೆ ಕಾಲಗತಿ ಮತ್ತು ವಿವಿಧ ಪರಿಸ್ಥಿತಿಗಳಿಗೆ ಹೊಂದಿಕೊಂಡು ಅಸ್ತವ್ಯಸ್ತವೆಂಬಂತೆ ಅರಳುತ್ತಾ ವಿಸ್ತರಿಸಿಕೊಳ್ಳುತ್ತಿರುವ ಮನುಷ್ಯಕೇಂದ್ರಿತ ಯೋಜನೆಗಳ ಫಲಶ್ರುತಿಯಾಗಿದೆ. ಫ್ರಾನ್ಸ್ ದೇಶದ ಸುಪ್ರಸಿದ್ಧ ನಗರ ಯೋಜಕ ಕಾರ್ಬೂಸಿಯರ್ ಚಂಡಿಗರ್ ನಗರ ನಿರ್ಮಾಣ ಸಂದರ್ಭದಲ್ಲಿ ಯೋಜನಾ ರಹಿತ ನಗರ ಸಂಸ್ಕೃತಿಯ ಬಗ್ಗೆ ಹೇಳಿರುವ ಮಾತುಗಳಲ್ಲಿ ಹಸಿರು ಕಾಳಜಿಯ ವ್ಯಾಖ್ಯಾನವಿದೆ.

"ಸೂರ್ಯ, ಆಕಾಶ ಹಾಗೂ ಹಸಿರು – ಇವು ನಮ್ಮ ದೇಹ ಹಾಗೂ ನಮ್ಮ ಚೈತನ್ಯವನ್ನು ರೂಪಿಸಿದ ಪುರಾತನ ಪ್ರಭಾವಗಳು, ತಮ್ಮ ನೈಸರ್ಗಿಕ ಪರಿಸರಣದಿಂದ ಪ್ರತ್ಯೇಕಿಸಲ್ಪಟ್ಟ ಸಕಲ ಜೀವಿಗಳೂ ನಾಶಗೊಳ್ಳುತ್ತವೆ. ಕೆಲವು ಮಂದಗತಿಯಲ್ಲಿ ನಾಶಗೊಂಡರೆ ಮತ್ತೆ ಕೆಲವು ತೀವ್ರ ಗತಿಯಲ್ಲಿ ನಾಶಗೊಳ್ಳುತ್ತವೆ. ಈ ಸಾರ್ವತ್ರಿಕ ನಿಯಮಕ್ಕೆ ಮಾನವನೇನೂ ಹೊರತಲ್ಲ. ನೈಸರ್ಗಿಕ ಪರಿಸ್ಥಿತಿಗಳಿಂದ ಮನುಷ್ಯರನ್ನು ದೂರ ಮಾಡಿರುವ ನಮ್ಮ ನಗರಗಳು ಜನತೆಯನ್ನು ಹಿಂಸಿಸಿವೆ. ನರಳಿಸಿವೆ, ಭಂಗಗೊಳಿಸಿವೆ, ಕೆರಳಿಸಿವೆ, ಹಿಂಡಿವೆ ಮತ್ತು ನಿರ್ವೀರ್ಯರನ್ನಾಗಿ ಮಾಡಿವೆ. ಮಹಾನಗರಗಳಲ್ಲಿ ವಾಸ ಮಾಡುವ ಮೂರು ನಾಲ್ಕನೆಯ ತಲೆಮಾರಿನವರು, ನಿರ್ವೀರ್ಯತೆಯ ಹಾದಿ ಹಿಡಿದಿರುತ್ತಾರೆ. ಇಟ್ಟಿಗೆಯ ಗೋಡೆ ಮತ್ತು ಕಾಂಕ್ರೀಟ್ ಕಟ್ಟಡಗಳಲ್ಲಿ ಬಂಧಿತರಾಗುವ ಹಾಗೂ ಪೆಟ್ರೋಲ್ ಹೊಗೆಯ ವಾಸನೆಯಿಂದ ಪೀಡಿತರಾಗುತ್ತಿರುವ ಬೃಹತ್ ನಗರಗಳ ಜನತೆಯು ಜೀವನದ ಅಗತ್ಯ ಸುಖ ಸಂತಸಗಳಾದ ಶುದ್ಧ ಬೆಳಕು, ಪರಿಶುದ್ಧ ಗಾಳಿ ಮತ್ತು ಪಚ್ಚ ಹಸುರಿನ ಆನಂದವಿಲ್ಲದೆ ನಿಸ್ಸಾರಗೊಳ್ಳುತ್ತಿದ್ದಾರೆ. ಒಂದು ಬಗೆಯ ಅತೃಪ್ತಿ ಮತ್ತು ತೀವ್ರ ಒತ್ತಡಗಳಿಂದ ಕೂಡಿದ ಗೃಹ ಬಂಧನದ ಜೀವನವನ್ನು ನಡೆಸುತ್ತಿದ್ದಾರೆ. ಮಾನವನ ಜೀವನದಲ್ಲಿ ಪ್ರಕೃತಿಯ ಪರಿಸ್ಥಿತಿಗಳನ್ನು ಪುನಃ ಸ್ಥಾಪಿಸಿದ ಹೊರತು ಅವನು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯ ಶಾಲಿಯಾಗಿರಲಾರ" (ಹೂವಿನ ಮರಗಳು – ಡಾ. ಎಂ.ಎಸ್. ರಂಧಾವ)

ಇದಕ್ಕೆ ಪೂರಕವಾಗಿ ಕಾರ್ಲ್ ಮಾರ್ಕ್ಸ್ ಹೇಳುವ ಮಾತುಗಳನ್ನಿಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ:

"ಉಪಸಂಹಾರದ ನುಡಿಯೆಂದರೆ, ಸಂಸ್ಕೃತಿಯ ಇತಿಹಾಸದಲ್ಲಿ ಮಾನವ ಸಮುದಾಯದ ಕೃಷಿಯೆಂಬುದು

ISSN: 2320-9941
ಪ್ರತಿಸ್ಪಂದ । Prathispandha

ನಿರಂತರವಾದ ಪ್ರಗತಿಯತ್ತ ಧಾವಿಸುತ್ತಿರುವಾಗಲೇ ಪ್ರಜ್ಞಾಪೂರ್ವಕವಾದ ನಿಯಂತ್ರಣಕ್ಕೆ ಒಳಪಡದಿದ್ದರೆ, ತನ್ನ ಹಿಂದೆ ಮರುಭೂಮಿಗಳನ್ನಷ್ಟೇ ಉಳಿಸಿ ಬಿಡುತ್ತದೆ" (ಮಾರ್ಕ್ ಮತ್ತು ಏಂಗೆಲ್ಸ್ ಸೆಲೆಕ್ಟೆಡ್ ಕರೆಸ್ಪಾಂಡೆನ್ಸ್ ಪು. 190)

ಈ ಮಾತುಗಳಲ್ಲಿ ಆರ್ಥಿಕ ದೃಷ್ಟಿಯ ಬಂಡವಾಳಕ್ಕೆ ಕಟ್ಟು ಬೀಳದೆ ನೈಸರ್ಗಿಕವಾದ ಹಸಿರು ಬಂಡವಾಳಕ್ಕೆ ಕಾರ್ಲ್‌ಮಾರ್ಕ್ಸ್ ಕೊಟ್ಟಿರುವ ಮಹತ್ವ ಸ್ವಯಂ ಸ್ಪಷ್ಟ. ಕೊನೆಯದಾಗಿ ಏಂಗೆಲ್ಸ್ ಹೇಳಿರುವ ಹಸಿರು ಕಾಳಜಿಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳೋಣ:

"ಪ್ರತಿಯೊಂದು ಹೆಜ್ಜೆಗೂ ನಾವು ನೆನಪಿನಲ್ಲಿಡಬೇಕಾದ ಸಂಗತಿಯೆಂದರೆ ಯಾರೊಬ್ಬರೂ ನಿಸರ್ಗದಿಂದ ಹೊರಗೆ ನಿಂತು ಅನ್ಯ ದೇಶೀಯರ ಮೇಲೆ ವಿಜಯವನ್ನು ಸಾಧಿಸಿದಂತೆ ನಿಸರ್ಗವನ್ನು ಅತಿಕ್ರಮಿಸಲು ಸಾಧ್ಯವಿಲ್ಲ. ನಾವು ಪಡೆದಿರುವ ಮಾಂಸ, ರಕ್ತ, ಮತ್ತು ಮಿದುಳುಗಳು ನಿಸರ್ಗದ ಭಾಗವಾಗಿರುವಂತೆಯೇ ಅವು ನಿಸರ್ಗದ ನಡುವೆಯೇ ಅರಳಬೇಕಾಗಿದೆ. ನಿಸರ್ಗದ ಮೇಲಣ ನಮ್ಮ ಯಜಮಾನಿಕೆಯೆಂಬುದು ವಾಸ್ತವವಾಗಿ ಸೃಷ್ಟಿಯಲ್ಲಿರುವ ಇತರೆಲ್ಲ ಜೀವಿಗಳ ಕ್ರಮ ಪರಿಣಾಮಗಳನ್ನು ಸಮರ್ಥವಾಗಿ ಅರಿತು ನಮಗೆ ತಕ್ಕಂತೆ ಅನ್ವಯಿಸಿಕೊಂಡ ಸ್ವಾರ್ಥಪೂರಿತ ಅವಕಾಶವೆ ಸೈ" (ಡಯಲೆಕ್ಟಿಕ್ಸ್ ಆಫ್ ನೇಚರ್. ಪು 180)

ಈ ವಿವರಣೆಯಲ್ಲಿರುವ ಹಸಿರು ಕಾಳಜಿ ಹಾಗೂ ಹಸಿರು ಓದಿನ ತಾತ್ವಿಕತೆಯ ಚರ್ಚೆಗಳು ಸಂಸ್ಕೃತಿಯ ಪುನರ್‌ಮೌಲೀಕರಣ ಮತ್ತು ಅಧ್ಯಯನಗಳಿಗೆ ಒತ್ತಾಯಿಸುವುದನ್ನಿಲ್ಲಿ ವಿಶೇಷವಾಗಿ ಗ್ರಹಿಸಬೇಕಾಗಿದೆ.

ಹಸಿರು ಕಾಳಜಿಯ ಚಿಂತನೆಯಲ್ಲಿ 'ಶಬ್ದ ಜ್ಞಾನ' ಮತ್ತು 'ಬಿಂಬ ಜ್ಞಾನಗಳ' ವೈರುಧ್ಯವನ್ನು ಮತ್ತೊಂದು ಮುಖ್ಯಾಂಶವನ್ನಾಗಿ ಪ್ರತಿಪಾದಿಸಬಹುದು. ಶಿವರಾಮಕಾರಂತರು 'ಬಾಳ್ವೆಯೇ ಬೆಳಕು' ಕೃತಿಯಲ್ಲಿ ಮನುಷ್ಯನ ಎಲ್ಲ ತಿಳುವಳಿಕೆ ಅನುಭವಗಳನ್ನು 'ಶಬ್ದ' ಮತ್ತು 'ಬಿಂಬ'ಗಳೆಂಬ ಪರಿಭಾಷೆಯಲ್ಲಿ ವಿವರಿಸಿದ್ದಾರೆ.

1. "ನಾವು ಚಿಂತಿಸಲಿ, ಯೋಚಿಸಲಿ–ಅವೆಲ್ಲ ಗುಣಗಳು ಬೆಳೆಯಲು ಎರಡು ಮುಖ್ಯ ಸಾಧನಗಳಿಂದಾಗಿ ಆ ಕೆಲಸ ಸಾಗಬೇಕಾಗುತ್ತದೆ. ಮೊದಲನೆಯದು ಬಿಂಬ, ಎರಡನೆಯದು ಶಬ್ದ, ನಮ್ಮ ಯಾವತ್ತು ನೆನಪುಗಳು ಕಟ್ಟ ಕಡೆಗೆ ಈ ಆಕಾರಗಳನ್ನು ತಾಳುತ್ತವೆ. ವ್ಯಕ್ತ ವಸ್ತುಗಳೆಲ್ಲ ಬಿಂಬಗಳ ರೂಪದಲ್ಲಿ ನಮ್ಮ ಮುಂದೆ ಹೊರಳುತ್ತದೆ. ಅವ್ಯಕ್ತ ವಿಷಯಗಳು (ಂಭಣಡಿಚಿಛಿಣ) ಶಬ್ದಗಳ ರೂಪದಲ್ಲಿ ಮನಸ್ಸಿನಲ್ಲಿ ನಲಿಯುತ್ತವೆ".

2. "ಮನುಷ್ಯನ ಅನುಭವಗಳು ಎರಡು ಬಗೆಯಿಂದ ಹೆಚ್ಚುತ್ತವೆ. ತಾನೇ ಬದುಕಿನ ಸಂಸರ್ಗದಿಂದ ದೊರಕಿಸಿಕೊಳ್ಳುವ ಅನುಭವಗಳು ಒಂದು ಬಗೆ. ಇನ್ನೊಂದು ಬಗೆ – ಪರಿಣತರ ಅನುಭವಗಳನ್ನು ಓದಿ, ಕೇಳಿ ತಿಳಿಯುವುದು. ಆದರೆ ಈ ಎರಡನೆಯ ವರ್ಗದ ಅನುಭವ ನಮಗೆ ಉಪಯುಕ್ತವಾಗಲು, ನಮ್ಮಲ್ಲಿ ಅರಗಲು, ಸ್ವಂತ ಅನುಭವ ಸಾಮ್ಯವಾದರೂ ಬೇಕು. ನಮ್ಮ ಅನುಭವಗಳಿಗೂ ನಾವು ಕೇಳಿ ತಿಳಿಯುವ ಅನುಭವಗಳಿಗೂ ಹೊಂದಿಕೆಯಿಲ್ಲವಾದರೆ ಅವುಗಳು ನಮಗೆ ಹೆಚ್ಚಿನದೇನನ್ನು ಕೊಡಲಾರವು".

ಶಿವರಾಮಕಾರಂತರು ವಿವರಿಸುತ್ತಿರುವ 'ಶಬ್ದ ಜ್ಞಾನ' ಮತ್ತು 'ಬಿಂಬ ಜ್ಞಾನಗಳು' ಹಸಿರು ಕಾಳಜಿಯ ಅನುಭವ ಮಾರ್ಗವನ್ನು ಬಹು ಸಮರ್ಥವಾಗಿ ನಿರೂಪಿಸುವ ಪರಿಭಾಷೆಗಳಾಗಿವೆ. ಶಬ್ದ ಜ್ಞಾನವು ಪುಸ್ತಕದ ಬದನೆಕಾಯಂತೆ ಅಗ್ರಾಹ್ಯವಾಗಿದ್ದರೆ, ಬಿಂಬ ಜ್ಞಾನವು ಪ್ರತ್ಯಕ್ಷಾನುಭವದ ಅಂಗೈ ನೆಲ್ಲಿಕಾಯಂತೆ ಗ್ರಾಹ್ಯವಾಗಿರುತ್ತದೆ. ಗ್ರಂಥ ಲೋಕಕ್ಕೆ ನಿಷ್ಠರಾದ ಪಂಡಿತರು, ವಿದ್ವಾಂಸರು–ಬೆಳ್ಳಕ್ಕರಿಗರು–ನಾಗರಿಕರು ಇವರೆಲ್ಲರನ್ನು ಒಟ್ಟಾಗಿ ಶಬ್ದ ಜ್ಞಾನಿಗಳು ಎಂದು ಕರೆಯಬಹುದು. ಅಂತೆಯೇ ಲೋಕ ಜೀವನಕ್ಕೆ ನಿಷ್ಠರಾದ ಅಲೆಮಾರಿಗಳು, ಮಹಾನ್ ಲೇಖಕರು, ವಿಜ್ಞಾನಿಗಳು, ಚಿಂತಕರು, ಗ್ರಾಮೀಣರು, ಇವರೆಲ್ಲರನ್ನು ಒಟ್ಟಾಗಿ ಬಿಂಬ ಜ್ಞಾನಿಗಳು ಎಂದು ಕರೆಯಬಹುದು. ಶಬ್ದ ಜ್ಞಾನವು ಕೂಪಮಂಡೂಕದಂತೆ ಸಂಕುಚಿತವಾದ ತಿಳುವಳಿಕೆಯಾಗಿದ್ದರೆ, ಬಿಂಬ ಜ್ಞಾನವು ಬಾನಾಡಿಯಂತೆ ಸುವಿಶಾಲ ಸಿದ್ಧಿಯ ತಿಳುವಳಿಕೆಯಾಗಿದೆ. ಶಬ್ದ ಜ್ಞಾನ–ಬಿಂಬ ಜ್ಞಾನಗಳ ವ್ಯತ್ಯಾಸವನ್ನು ಕನ್ನಡ ಗಾದೆಗಳ ಮೂಲಕವೂ ಸ್ಪಷ್ಟಪಡಿಸಬಹುದು. 'ಓದಿ ಓದಿ ಮರುಳಾದ ಕೂಚು ಭಟ್ಟ' –ಎಂಬ ಗಾದೆ ಶಬ್ದಜ್ಞಾನದ ದುರಂತವನ್ನು ಹೇಳಿದರೆ, 'ದೇಶಸುತ್ತಿ ಕೋಶ ಓದು' ಎಂಬ ಗಾದೆ. ಬಿಂಬ ಜ್ಞಾನದ ಘನತೆಯನ್ನು ಹೇಳುತ್ತದೆ. ಹಸಿರು ಕಾಳಜಿಯು ಬಿಂಬ ಜ್ಞಾನದ ಪ್ರತಿಪಾದಕನಾಗಿದೆಯೇ ಹೊರತು 'ಶಬ್ದಜ್ಞಾನ'ವನ್ನು ಬೆಂಬಲಿಸುವುದಿಲ್ಲ.

ಹಳಗನ್ನಡ ಕಾವ್ಯಗಳಲ್ಲಿ ಕಂಡು ಬರುವ ಅಷ್ಟಾದಶವರ್ಣನೆಗಳು ಶಬ್ದ ಜ್ಞಾನಕ್ಕೆ ಉತ್ತಮ ಉದಾಹರಣೆ. ಸಮುದ್ರವನ್ನು ನೋಡದಿದ್ದರೂ ಸಮುದ್ರ ವರ್ಣನೆ ಮಾಡಿರುವ ಕವಿಗಳುಂಟು. ಇವರಿಗೆಲ್ಲ ಸಂಸ್ಕೃತದ 'ಥೆಷರಸ್' ಎನ್ನಬಹುದಾದ ಅಮರಕೋಶವು ಕೈವೊಕ್ಕ ನಿಧಿಯಿದ್ದಂತೆ. ಪಾಂಡಿತ್ಯವೇ ಪ್ರಧಾನವಾದ ಈ ಶಾಬ್ದಿಕರಿಗೆ ಬಿಂಬಜ್ಞಾನದ

ಅಥವಾ ನೈಜವಾದ ಅನುಭವಗಳಿಲ್ಲವೆಂಬುದು ಅವರು ಮಾಡಿರುವ ಅಷ್ಟಾದಶ ವರ್ಣನೆಗಳಿಂದಲೇ ತಿಳಿಯಬಹುದು. ಆದರೆ ಪಂಪನಂಥ ಕವಿಗಳಲ್ಲಿರುವ ಜೀವಂತ ವರ್ಣನೆಗಳು ಬಿಂಬ ಜ್ಞಾನಕ್ಕೆ ಉತ್ತಮ ನಿದರ್ಶನವಾಗಿವೆ.

ಶಬ್ದ ಜ್ಞಾನ ಮತ್ತು ಬಿಂಬ ಜ್ಞಾನಗಳ ವಿಚಾರಕ್ಕೆ ಮತ್ತೊಂದು ನಿದರ್ಶನವೊಂದನ್ನಿಲ್ಲಿ ಪ್ರಸ್ತಾಪಿಸಬಹುದು. ಸುಗಂಧಿ ಬಳ್ಳಿಯ ಕುರಿತು ಬೇರು ಮೂಲದ ಜ್ಞಾನ ಹೊಂದಿರುವ ಕುವೆಂಪು ಅವರು 'ಸೊಗದೆಬೇರು' ಎಂದೂ ಕಾರಂತರು 'ಮಡಿವಾಳನ ಬೇರು' ಎಂದೂ ಕರೆದಿದ್ದಾರೆ. ಇದು ಸ್ಪಷ್ಟವಾಗಿ ಬಿಂಬಾತ್ಮಕ ಗ್ರಹಿಕೆಯಾಗಿದೆ. ಸೊಗದೆ ಬೇರಿನ ಕಷಾಯ ಕುಡಿಯುವ ಸುಬ್ಬಣ್ಣ ಹೆಗಡೆ (ಮಲೆಗಳಲ್ಲಿ ಮದು ಮಗಳು) ಮತ್ತು ಕಾರಂತರು ಬಾಲ್ಯದಲ್ಲೇ ಕಂಡಿದ್ದ ಮಡಿವಾಳನ ಬೇರು ಎರಡೂ ಒಂದೇ! ಸೊಗದೆ ಬೇರಿನ ಕಷಾಯ ರಕ್ತ ಶುದ್ಧಿಕಾರಕವಾದ್ದರಿಂದ ಅದನ್ನು ಅಜ್ಜಿ ಔಷಧಿಯಲ್ಲಿ 'ಮಡಿವಾಳನ ಬೇರು' ಎಂದು ನಿರ್ದೇಶಿಸಲಾಗಿದೆ. ಈ ಬೇರನ್ನು ಕಂಡವರು ಬಿಂಬಜ್ಞಾನಿಗಳಾಗಿದ್ದರೆ, ಕಾಣದವರು ಶಬ್ದಜ್ಞಾನಿಗಳಾಗುವುದು ಅನಿವಾರ್ಯ.

ಒಟ್ಟಿನಲ್ಲಿ ಹಸಿರು ಕಾಳಜಿಯ ಸಮೃದ್ಧ ಜೀವನಾನುಭವದಿಂದ ಕೂಡಿದ ಕುವೆಂಪು ಮತ್ತು ಕಾರಂತರ ಕಾದಂಬರಿಗಳು ಬಿಂಬ ಜ್ಞಾನದ ಅತ್ಯುತ್ತಮ ಪ್ರತಿನಿಧಿಗಳಾಗಿವೆ.

3. ಸ್ಥಳೀಯ ಭೂಗೋಳ

'ಸ್ಥಳೀಯ ಭೂಗೋಳ'ವು ಹಸಿರು ಓದಿನ ಕ್ರಮ ಮತ್ತು ಹಸಿರು ಪ್ರಕಾರವನ್ನಬಹುದಾದ ಚಾರಣ ಸಾಹಿತ್ಯದ ಆತ್ಮದರ್ಶನವಾಗಿದೆ. ಇಡೀ ಭೂಗೋಳವನ್ನು ಅಂಗೈ ನೆಲ್ಲಿಕಾಯಿ ಎಂಬಂತೆ ಭಾವಿಸಿ, 'ವಿಶ್ವ ಗ್ರಾಮದ ಕನಸು ಕಾಣುತ್ತಿರುವ ಸೈಬರ್ ಜಾಲಕ್ಕೆ ಪ್ರತಿಧ್ವಂದಿಯಾಗಿ ಸ್ಥಳೀಯ ಭೂಗೋಳವೆಂಬ ಪರಿಭಾಷೆಯನ್ನಿಲ್ಲಿ ರೂಪಿಸಲಾಗಿದೆ. 'ಸ್ಥಳೀಯ ಭೂಗೋಳ'ವೆಂದರೆ ಯಾವುದೋ ಒಂದು ನಿರ್ದಿಷ್ಟ ಭೂ ಭಾಗ (ವಸುದಾವಲಯ ವಿಲೀನ ವಿಶದ ವಿಷಯ ವಿಶೇಷ) ಮಾತ್ರವೆಂದು ತಿಳಿಯಬಾರದು. 1. ಜೀವಿ ವೈವಿಧ್ಯತೆ 2. ಖಚಿತ ಭಾಷಾ ನೀತಿ 3. ಅನ್ಯ ಜ್ಞಾನ ಶಿಸ್ತುಗಳು 4. ಸೂಕ್ತ ತಂತ್ರಜ್ಞಾನಗಳೆಂಬ ಚತುರಂಗ ಸಜ್ಜಿತ ಪ್ರಗತಿ ತತ್ವವನ್ನು ಆಧರಿಸಿದ ಒಂದು ನಿರ್ದಿಷ್ಟ ಭೂಭಾಗವೇ ಸ್ಥಳೀಯ ಭೂಗೋಳ. Think Globally Act locally ಎಂಬುದೇ ಇದರ ಲಕ್ಷ್ಯ – ಲಕ್ಷಣ

ವಿಶ್ವಮಾನವ ಸಂದೇಶದ ಗುರಿಗೆ ಆಧುನಿಕ ಮಾಹಿತಿ ತಂತ್ರಜ್ಞಾನವನ್ನು ಸೋಪಾನ ಮಾರ್ಗವೆಂದು ಬಲವಾಗಿ ಉದ್ಘೋಷಿಸುತ್ತಿರುವ ಇಪ್ಪತ್ತೊಂದನೇ ಶತಮಾನದ ವಂದಿಮಾಗಧರಿಗೆ ಬಗೆ ಬಗೆಯ ಭ್ರಮೆಗಳಿವೆ. ವಿಶ್ವಗ್ರಾಮದ ಕನಸುಣಿಗಳಾದ ಇವರಿಗೆ ಇಡೀ ಭೂ ಮಂಡಲವು ಅಂಗೈ ಮೇಲಣ ನೆಲ್ಲಿಕಾಯಿ ಆಗಿ ಬಿಟ್ಟಿದೆ. ಪ್ರಪಂಚದ ಯಾವ ಮೂಲೆಯಲ್ಲಿ ಕುಳಿತಿದ್ದರೂ ಕ್ಷಣ ಕ್ಷಣದ ಮಾಹಿತಿಯನ್ನು ಲೋಕ ಜ್ಞಾನವನ್ನು ಪಡೆಯಬಹುದೆಂಬ ಭಾವನೆಯಲ್ಲಿ ಬೀಗುತ್ತಿರುವ ಅಂತರ್ ಜಾಲಿಕರು (= Netigens) ತಂತಮ್ಮ ಸ್ಥಳೀಯ ಭೂಗೋಳಕ್ಕೆ ಎರವಾಗುತ್ತಿದ್ದಾರೆ. ಈ ದೃಷ್ಟಿಯಿಂದ ಪರ್ಯಾಲೋಚಿಸಿದರೆ ವಿಶ್ವಗ್ರಾಮ ಮತ್ತು ಸ್ಥಳೀಯ ಭೂಗೋಳಗಳು ಇಪ್ಪತ್ತೊಂದನೇ ಶತಮಾನದ ಮಹಾನ್ ವೈರುದ್ಯಗಳಾಗಿ ತೋರುತ್ತವೆ. ಕಂಪ್ಯೂಟರೀಕರಣಗೊಂಡಿರುವ ಪ್ರಸಿದ್ಧ ದಿನಪತ್ರಿಕೆಯೊಂದರಲ್ಲಿ Global Village ಎಂಬ ಅಂಕಣವೊಂದಿದೆ. ಯಾವುದೀ ಗ್ಲೋಬಲ್ ವಿಲೇಜ್? ಸ್ಥಳೀಯವಾದ ಕ್ರಿಯೆ ದೇಶಗಳ ಆಯಾಮವನ್ನೇ ಕಳೆದುಕೊಂಡ ಗ್ಲೋಬಲ್ ವಿಲೇಜ್ ಒಂದು ಉಟೋಪಿಯನ್ ಪರಿಕಲ್ಪನೆ. ಸೈಬರ್ ಸಂಸ್ಕೃತಿಯ ವಿಕಿರಣ ಖಡ್ಗದ ಹಿಡಿಯೊಳಗೆ ಅಗೋಚರವಾಗಿರಬಹುದಾದ ಗ್ಲೋಬಲ್ ವಿಲೇಜ್ ನಿಂದ ನಮಗೆ ದಕ್ಕುವುದು ಏನೂ ಇಲ್ಲ. ಬದಲಿಗೆ ಸ್ಥಳೀಯವಾದ ಕ್ರಿಯೆ ಕಾಲ ದೇಶ ಆಯಾಮಗಳನ್ನೊಳಗೊಂಡಿರುವ 'ಸಾಹಿತ್ಯ ಕೃತಿಗಳು' ಕನ್ನಡಕ್ಕೆ ಉತ್ಕೃಷ್ಟ ಕೊಡುಗೆಯನ್ನೇ ನೀಡಿವೆ. ಸ್ಥಳೀಯವಾದ ಭೂಗೋಳ, ಜೀವನಾನುಭವ, ಐತಿಹ್ಯಗಳು, ಸ್ಥಳ ಪುರಾಣಗಳು, ಜನಪದ ಮಿತ್‌ಗಳು, ಫ್ಯಾಂಟಸಿಗಳು, ಅಲಿಗರಿಗಳು ಇವುಗಳಿಲ್ಲದೆ ಸಾಹಿತ್ಯ ನಿಸ್ಸಾರವಾದುದು.

'ವಿಶ್ವಗ್ರಾಮ'ವೆಂಬ ಶಬ್ದಕ್ಕೂ 'ಸ್ಥಳೀಯ ಭೂಗೋಳ'ವೆಂಬ ಬಿಂಬಕ್ಕೂ (=ಶಬ್ದ ಮತ್ತು ಬಿಂಬ) ಇರುವ ನೈಜ ವ್ಯತ್ಯಾಸಗಳನ್ನು ಗಮನಿಸಿದ್ದೇ ಆದಲ್ಲಿ ನಿಜದುದಯವಾಗಬಹುದು. ಪ್ರಪಂಚದ ಯಾವುದೋ ಮೂಲೆಯಲ್ಲಿ ಘಟಿಸುವ ವಿದ್ಯಮಾನವನ್ನು ಮತ್ತೊಂದು ಮೂಲೆಯಲ್ಲಿ ಕುಳಿತು ದರ್ಶಿಸಿದ ಮಾತ್ರಕ್ಕೆ ನಾನು ವಿಶ್ವ ಗ್ರಾಮದ ಮೂರ್ತಿವೆತ್ತ ಚೇತನವಾಗಲಾರೆ ನನಗೆ ದಕ್ಕುವುದು ನನ್ನ ಊರು ಅಷ್ಟೆ, ಬನವಾಸಿಯ ಪಂಪ, ಕಲ್ಯಾಣದ ವಚನಕಾರರು, ಹಂಪೆಯ ಹರಿಹರ, ಗದುಗಿನ ನಾರಾಯಣಪ್ಪ, ಕುಪ್ಪಳಿಯ ಕುವೆಂಪು, ಸಾಧನಕೇರಿಯ ಬೇಂದ್ರೆ, ಕೋಟದ ಕಾರಂತರು, ಇವರೆಲ್ಲರೂ ಸ್ಥಳೀಯ ಭೂಗೋಳ ಮತ್ತು ಕಾರಯಿತ್ರಿ ಪ್ರತಿಭೆಯ ಕೂಡಲ ಸಂಗಮಕ್ಕೆ

ನಿದರ್ಶನವಾಗಿದ್ದಾರೆ. ಆದ್ದರಿಂದ, ಲೇಖಕನಾದವನು ಪ್ರಜ್ಞಾಪೂರ್ವಕವಾಗಿ ಶಾಬ್ದಿಕವಲಯದಿಂದ ತನ್ನನ್ನು ಬಿಡಿಸಿಕೊಂಡು ಮುಕ್ತ ಮನದಿಂದ ಬಿಂಬಾತ್ಮಕ ನೆಲೆಯನ್ನು ಸದಾ ಒಳಗೊಳ್ಳುತ್ತಿರಬೇಕಾಗುತ್ತದೆ. ಈ ಪರಿ ಸಾಹಿತ್ಯದ ಸೃಷ್ಟಿಗೆಂತೋ ಅಂತೆಯೇ ಅದನ್ನು ಪರಿಭಾವಿಸುವ ದೃಷ್ಟಿಗೂ ಅವಶ್ಯವೆಂಬುದನ್ನಿಲ್ಲಿ ಮರೆಯಬಾರದು.

ಸಂಸ್ಕೃತ ಮಾರ್ಗ ಪರಂಪರೆಯ ಶಬ್ದದಲ್ಲಿ ಕನ್ನಡ ದೇಸಿ ಪರಂಪರೆಯ ಬಿಂಬವನ್ನು ಅಳವಡಿಸಿದ ಪಂಪನ ಕಾವ್ಯಗಳು ಬಹು ವಿಶಿಷ್ಟವಾಗಿದೆ. ವಾತಾಪಿಯನ್ನು ಜೀರ್ಣಿಸಿಕೊಂಡ ಅಗಸ್ತ್ಯಮುನಿಯಂತೆ, ಸಂಸ್ಕೃತವನ್ನು ಸಂಪೂರ್ಣವಾಗಿ ತನ್ನಲ್ಲಿ ಜೀರ್ಣಿಸಿಕೊಂಡದ್ದರಿಂದಲೇ ಪಂಪನು ಕನ್ನಡಿಗರ ಆದಿಕವಿ ಮತ್ತು ಮಹಾಕವಿ, ಸಂಸ್ಕೃತದ ಶಾಬ್ದಿಕ ಕಲ್ಪನೆಗಳನ್ನು ಲಕ್ಷಿಸಿಯೇ ಪಂಪನು "ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿ" ಎಂಬ ರೂಪಕವನ್ನಿತ್ತು ಇದರೊಳಗೆ ಕನ್ನಡ ಸಂಸ್ಕೃತಿಯ ಪ್ರತ್ಯಕ್ಷಾನುಭವಗಳನ್ನು ಕ್ರಿಯಾತ್ಮಕವಾಗಿ ಸೃಷ್ಟಿಸಿರುವುದರಿಂದಲೇ 'ಈಸುವೆಂ' ಎಂಬ ಕ್ರಿಯಾಪದ ಬಳಸಿದ್ದಾನೆ. ಪಂಪನು ಸ್ಥಳೀಯ ಭೂಗೋಳದ ಕವಿ. ಭಾರತ ವ್ಯಾಪಿಯಾದ ಅಥವಾ ವಿಶ್ವವ್ಯಾಪಿಯಾದ ಕನ್ನಡಿಯ ಗಂಟಿಗೆ ಬಾಯಿ ಬಿಡುತ್ತಿರುವ ಇಂದಿನ ಕೆಲವು ಸಾಹಿತಿಗಳು ಪಂಪನಿಂದ ಕಲಿಯಬೇಕಾದ ಪಾಠ ಬಹಳಷ್ಟಿದೆ. ಸ್ಥಳೀಯ ಭೂಗೋಳ ಎಂಬುದನ್ನು ಭೌಗೋಳಿಕ ದೃಷ್ಟಿಯಿಂದ ಮಾತ್ರ ನೋಡಬಾರದು. ಭಾಷೆ > ಸಂಸ್ಕೃತಿ > ಸಮಾಜ > ರಾಜಕೀಯ > ಆರ್ಥಿಕ > ಧಾರ್ಮಿಕ ಮುಂತಾದ ಬದುಕಿನ ಎಲ್ಲ ನೆಲೆಗಳನ್ನು ಬಿಂಬಿಸಬಲ್ಲ ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷವೇ 'ಸ್ಥಳೀಯ ಭೂಗೋಳ'.

ಸ್ಥಳೀಯ ಭೂಗೋಳದ ಕ್ರಿಯೆ ಕಾಲ ದೇಶಗಳ ಸಮಸ್ತ ಬಿಂಬವನ್ನು ಪ್ರತಿಷ್ಠಿತ ಶಬ್ದದಲ್ಲಿ ಅಳವಡಿಸುವುದೇ ತಗುಳ್ಚಿ ಪೋಲಿಪ ಕಥನ ಕ್ರಮ. ಇದನ್ನು ಅರ್ಜುನ = ಅರಿಕೇಸರಿ ಎಂಬಂತೆ ಸೀಮಿತಗೊಳಿಸಬಾರದು. ಇಂದು ನೇರವಾಗಿ ಇಂಗ್ಲಿಷ್ ಮೂಲಕ ಅಥವಾ ಇಂಗ್ಲಿಷ್ ಅನುವಾದಗಳ ಮೂಲಕ ತಮ್ಮನ್ನು ಭಾರತ ವ್ಯಾಪಿ ಅಥವಾ ವಿಶ್ವವ್ಯಾಪಿ ನೆಲೆಗಳಲ್ಲಿ ಗುರುತಿಸಿಕೊಳ್ಳಲು ಎಳಸುತ್ತಿರುವ ಕೃತಿಗಳ, ಕೃತಿಕಾರರ ಪೊಳ್ಳುತನವನ್ನು ಗಮನಿಸಿದರೆ, ಪಂಪನ ಘನ ಮಹಿಮೆಯು ಅರಿವಾಗದೆ ಇರದು!

ಪಂಪನಿಂದ ಹಿಡಿದು ಕುವೆಂಪುವರೆಗೆ ಒಳಹೊಕ್ಕು ನೋಡಿದರೆ, ಸ್ಥಳೀಯ ಭೂಗೋಳವು ಕನ್ನಡ ಸಾಹಿತ್ಯದಲ್ಲಿ ಚಲನಶೀಲವಾದ ಧಾತು ಮತ್ತು ಧೋರಣೆಗಳಾಗಿದೆ. "ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು" ಎಂಬ ನುಡಿಯಲ್ಲಿ ದೇಸಿ ಎಂದರೆ ಸ್ಥಳೀಯ ಭೂಗೋಳ ಮತ್ತು ಮಾರ್ಗವೆಂದರೆ ಭಾರತ ವ್ಯಾಪಿ ಎಂದು ತಿಳಿಯಬೇಕು. ಇದನ್ನು ಕೊಂಚ ಸ್ಪಷ್ಟಪಡಿಸುವುದಾದರೆ, ಕುರುಜಾಂಗಣ, ಹಸ್ತಿನಾಪುರ, ಇಂದ್ರ ಪ್ರಸ್ಥ ಮುಂತಾದ ಭಾರತ ವ್ಯಾಪಿ ಶಾಬ್ದಿಕ ಭೂಗೋಳದಲ್ಲಿ ಬೋಧನ, ಪುಲಿಗೆರೆ, ಕಿಸುಕಾಡು ಬನವಾಸಿ ಮುಂತಾದ ಕನ್ನಡನಾಡಿನ ಸ್ಥಳೀಯ ಭೂಗೋಳದ ಬಿಂಬವಿದೆ. ಇದನ್ನೇ ಮಾರ್ಗ ದೇಸಿಗಳ ಸಮನ್ವಯ ವೆಂದು ಕರೆದಿದ್ದಾರೆ. ಆದರೆ, ಪಂಪಭಾರತದಲ್ಲಿರುವ "ಇಟ್ಟಳ ಮಾಯ್ತು ದೇಸಿ, ಕಯ್ಯಿಡಿದುದಿಲ್ಲ ಮಾರ್ಗಂ"(7.91) ಎಂಬ ನುಡಿ ಗಮನಾರ್ಹವಾಗಿದೆ. ಈ ಸಂದರ್ಭದಲ್ಲಿ ಗ್ರಹಿಸಬೇಕಾದ ತಿರುಳಿದು, ಅರ್ಜುನನ ದೇಸಿ ತಪಸ್ಸು ಅತಿಶಯವಾಯಿತು. ಆದ್ದರಿಂದ ತಿಲೋತ್ತಮೆಯ ನೃತ್ಯ ಮಾರ್ಗಕ್ಕೆ ಕೈವಶನಾಗಲಿಲ್ಲ. ದೇಸಿಯು ಪಂಪನ ಪಾಲಿಗೆ ಒಂದು ಧ್ಯಾನ, ತಪಸ್ಸು! ದೇಸಿಯ ಸಮೃದ್ಧಿ, ಅತಿಶಯತೆಯಿಂದಾಗಿ ಮಾರ್ಗವು ಕೈಗೂಡಲಿಲ್ಲವೆಂದು ಈ ಪ್ರಾಸಂಗಿಕ ಸೂಚನೆ ಪಂಪನ ಕಾವ್ಯಗಳನ್ನು ನೋಡುವ ಒಂದು ಹೊಸ ಕಾಣ್ಕೆಯಾಗಿದೆ.

ಹಸಿರು ಪ್ರಕಾರವಾದ 'ಚಾರಣ ಸಾಹಿತ್ಯ'ದಲ್ಲಿ ಸ್ಥಳೀಯ ಭೂಗೋಳವೆಂಬ ಪರಿಭಾಷೆಯನ್ನು ಅನ್ವಯಿಸಿ ನೋಡುವುದಕ್ಕೂ ಮುಂಚೆ, ಇದಕ್ಕೊಂದು ಪರಂಪರೆಯೇ ಇದೆಯೆಂಬುದನ್ನು ಮನಗಾಣಿಸುವುದರ ಜೊತೆಗೆ, ಹೊಸ ಓದಿನ ಕ್ರಮವನ್ನಾಗಿಯೂ 'ಸ್ಥಳೀಯ ಭೂಗೋಳ'ವನ್ನು ಕಂಡುಕೊಳ್ಳಬಹುದೆಂಬ ಪ್ರತಿಪಾದನೆಯೂ ಇಲ್ಲಿದೆ. ಸ್ಥಳೀಯ ಭೂಗೋಳವೆಂಬ ದರ್ಶನ ದೃಷ್ಟಿಯೇ ಚಾರಣ ಸಾಹಿತ್ಯದ ತಿರುಳಾಗಿದೆ. ಇದನ್ನು ಕುವೆಂಪು ಸಾಹಿತ್ಯದಲ್ಲಿ ಸುಸ್ಪಷ್ಟವಾಗಿ ಗುರುತಿಸಬಹುದು.

ವಿಶ್ವಗ್ರಾಮಕ್ಕೆ ವ್ಯತಿರಿಕ್ತವಾಗಿ ಕುವೆಂಪು ಸಾಹಿತ್ಯದಲ್ಲಿರುವ ಸ್ಥಳೀಯ ಭೂಗೋಳದ ಬಗ್ಗೆ ವಿಚಾರ ಮಾಡೋಣ. 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಹೂವಯ್ಯನು ಸೀತೆಗೆ ಭೂಪಟಗಳನ್ನು ತೆರೆದು ತೋರಿಸುತ್ತಾ ಬ್ರಹ್ಮಾಂಡ, ಸೌರವ್ಯೂಹ, ಭೂಮಂಡಲಗಳನ್ನು ಪರಿಚಯಿಸುತ್ತಾನೆ. ಭಾರತ ದೇಶ, ಮೈಸೂರು ದೇಶಗಳ ಬಗ್ಗೆ ಹೇಳುತ್ತಾನೆ. ಆಗ ಸೀತೆಯು ಆಸೆಯಿಂದ ಕಾನೂರು, ತೀರ್ಥಹಳ್ಳಿಗಳು ಭೂಪಟದಲ್ಲಿ ಎಲ್ಲಿದೆ ತೋರಿಸು ಎಂಬಂತೆ ಪ್ರಶ್ನಿಸುತ್ತಾಳೆ. ಇದಕ್ಕೆ ಹೂವಯ್ಯ ಕೊಡುವ ಉತ್ತರ ಸ್ವಾರಸ್ಯವಾಗಿದೆ. ಈ ಊರುಗಳನ್ನು ಚುಕ್ಕಿಯಿಂದ ಕೂಡ ನಿರ್ದೇಶಿಸಲು

ಸಾಧ್ಯವಿಲ್ಲವೆಂಬ ಹೂವಯ್ಯನ ಉತ್ತರದಲ್ಲಿ ಸ್ಥಳೀಯ ಭೂಗೋಳದ ಪರಿಕಲ್ಪನೆಯಿದೆ. ಕುವೆಂಪು ಬದುಕಿದ್ದು ಇಂಥ ಸ್ಥಳೀಯ ಭೂಗೋಳದಲ್ಲಿ ಸ್ಥಳೀಯವೂ ಬಹುರೂಪಿಯೂ ಆದ ಭಾಷೆ–ಜನಪದ–ನಿಸರ್ಗ–ಧರ್ಮ–ಸಂಸ್ಕೃತಿ ಇವೆಲ್ಲವನ್ನೂ ಒಳಗೊಂಡಿರುವ (ಆದರೆ, ಪ್ರತಿಷ್ಠಿತ ಭೂಪಟಗಳಲ್ಲಿ ಎಡೆಯಿಲ್ಲದ) ಚುಕ್ಕಿಯಿಂದ ಕೂಡ ನಿರ್ದೇಶಿಸಲು ಸಾಧ್ಯವಿಲ್ಲದಂಥ ಸ್ಥಳೀಯ ಭೂಗೋಳದಲ್ಲಿದ್ದುಕೊಂಡೇ ಕುವೆಂಪು ಮನುಜಮತ ವಿಶ್ವಪಥದ ಮಾತನಾಡಿದ್ದಾರೆ. ಒಚಿಛಿಡಿಠ ಎನ್ನಬಹುದಾದ ವಿಶ್ವದ ವಿರಾಟ್ ಸ್ವರೂಪ ಮತ್ತು Micro ಎನ್ನಬಹುದಾದ ಸ್ಥಳೀಯ ಭೂಗೋಳ ಎರಡನ್ನೂ ಪೂರ್ಣ ದೃಷ್ಟಿಯಿಂದ ಮನಗಾಣುತ್ತಲೇ ಅಲಕ್ಷಿತ ನೆಲೆಗಳನ್ನು ಒಂದು ಪರಿಪ್ರೇಕ್ಷ್ಯಕ್ಕೆ ತರುತ್ತಿರುವ ಕ್ರಮವನ್ನಿಲ್ಲಿ ಮನಗಾಣಬೇಕಾಗುತ್ತದೆ.

ಇದುವರೆಗೆ ದೇಶ – ಕಾಲ ಕ್ರಿಯೆಗಳ ಹಂಗು ಹರಿದುಕೊಂಡ ವಿಶ್ವಗ್ರಾಮದ ಪರಿಕಲ್ಪನೆಯೊಂದಿಗೆ, ದೇಶ ಕಾಲ ಕ್ರಿಯೆಗಳಿಗೆ ಬದ್ಧವಾದ ಸ್ಥಳೀಯ ಭೂಗೋಳದ ಪರಿಲ್ಪನೆಯನ್ನು ಜೊತೆ ಜೊತೆಯಲ್ಲಿಟ್ಟು ವಿವೇಚಿಸಲಾಗಿದೆ. 1. ಕಾಲ್ನಡಿಗೆಯ ತಿರುಗಾಟಗಳು 2. ಹಸಿರು ಕಾಳಜಿ ಮತ್ತು 3. ಸ್ಥಳೀಯ ಭೂಗೋಳಗಳು ಚಾರಣ ಸಾಹಿತ್ಯ ಸಂದರ್ಭಗಳಲ್ಲಿ ಬಹು ಮುಖ್ಯವಾದ ಆಯಾಮಗಳಾಗಿ ನಿಲ್ಲುವುದನ್ನು ಮುಂದಿನ ಅಧ್ಯಾಯಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಪ್ರಸ್ತುತ, ಚಾರಣ ಸಾಹಿತ್ಯ ಪರಿಶೀಲನೆಗೆ ಸಂಬಂಧಪಟ್ಟಂತೆ ಸಾಹಿತ್ಯ ವಿಮರ್ಶೆಯಲ್ಲಿ ಬಳಸಬಹುದಾದ ವಿವಿಧ ಪರಿಭಾಷೆಗಳು ಯಾವುವು? ಎಂಬುದನ್ನು ಅವುಗಳ ಸಂಕ್ಷಿಪ್ತ ಪರಿಚಯದೊಂದಿಗೆ ಅಧ್ಯಯನ ನಡೆಸಬಹುದು.

1. ಲೋಕ ನಿರೀಕ್ಷಣೆ

ಚಾರಣ ಸಾಹಿತ್ಯವು ಮನುಷ್ಯನ ಅಂತಸ್ಥ ಜಗತ್ತಿನ ಶೋಧಕನಲ್ಲ. ಲೋಕ ಗಮನದ ಮೂಲಕ, ಸಚರ ಮತ್ತು ಅಚರ ಜಗತ್ತಿನ ಅದ್ಭುತಗಳು, ವೈಚಿತ್ರ್ಯಗಳು, ಮತ್ತು ನಿಗೂಢತೆಗಳನ್ನು ಅನ್ವೇಷಿಸುವ ಮನೋಧರ್ಮವನ್ನು ಇಲ್ಲಿ ಗುರುತಿಸಬಹುದು. ಜೀವದ ಉತ್ಪತ್ತಿಗೆ ಕಾರಣವಾದ ಪಂಚ ಭೂತಗಳು, ಜೀವಿ – ಜೀವಿಗಳ ನಡುವಣ ಅಭೇದದ ಕಟ್ಟಡ,, ಭೂತ ಶುದ್ಧಿಯೊಂದಿಗೆ ಅವಿಭಾಜ್ಯ ಸಂಬಂಧ ಹೊಂದಿರುವ ಭಾವ ಶುದ್ಧಿ – ಮುಂತಾದ ಸಂಗತಿಗಳನ್ನು ಲೋಕ ನಿರೀಕ್ಷಣೆಯಲ್ಲಿ ಮನಗಾಣಬಹುದು.

ಸಸ್ಯ ಪರಿಸರ–ತಿರ್ಯಕ್ ಪರಿಸರ ಮತ್ತು ಮನುಷ್ಯ ಪರಿಸರಗಳನ್ನು ಪ್ರತ್ಯೇಕವೆಂಬಂತೆ ಕಾಣದೆ, ಹಸಿರು ಪಿರಮಿಡ್ಡಿನ ತತ್ವಕ್ಕೆ ಅನುಗುಣವಾಗಿ ಅಖಂಡವೆಂಬಂತೆ ಪರಿಶೀಲಿಸುವ ಬಗೆಯನ್ನು ಲೋಕ ನಿರೀಕ್ಷಣೆಯಲ್ಲಿ ಗಮನಿಸಬಹುದು. ಈ ದೃಷ್ಟಿಯಿಂದ ಕುವೆಂಪು – ಬೇಂದ್ರೆ ಮತ್ತು ಕಾರಂತರ ಸಮಗ್ರ ಸಾಹಿತ್ಯವನ್ನು ಮರು ಚಿಂತನೆಗೊಳಪಡಿಸಿದಲ್ಲಿ ಹೊಸ ಕಾಣ್ಕೆ ಮತ್ತು ವಿನೂತನ ಸಿದ್ಧಿಗಳನ್ನು ಪಡೆಯಬಹುದು.

ಲೋಕ ನಿರೀಕ್ಷಣೆಯಲ್ಲಿ ಲೇಖಕನ ಲೋಕ ಪ್ರೇಮ ಮತ್ತು ಲೋಕ ಸಂಚಾರಗಳ ಜೊತೆಗೆ ಜೀವಿ ವೈವಿಧ್ಯತೆಯ (Bio-Diversity) ನೆಲೆಗಳನ್ನು ನೋಡಬಹುದು. ಇರುವೆಯಿಂದ ಹಿಡಿದು ಆನೆಯ ವರೆಗೆ, ಹುಲ್ಲಿನಿಂದ ಹಿಡಿದು ಮಹಾವೃಕ್ಷದವರೆಗೆ, ಇಬ್ಬನಿಯಿಂದ ಹಿಡಿದು ಸಮುದ್ರದವರೆಗೆ ಒಂದು ಅಖಂಡ ದರ್ಶನವನ್ನು ಕಾಣಬಹುದು. ಯಾವುದೇ ತಾರತಮ್ಯವಿಲ್ಲದ ಮನಸ್ಸು, ಮಾನವಕೃತ ಶ್ರೇಣೀಕರಣಗಳ ನಿರಾಕರಣೆ, ಸಚರ ಮತ್ತು ಅಚರ ಗಳನ್ನು ಅದ್ವಯವಾಗಿ ನೋಡುವ ಮನೋಧರ್ಮಗಳು ಲೋಕ ನಿರೀಕ್ಷಣೆಯ ನೆಲೆಗೆ ಬದ್ಧವಾದ ಲೇಖಕರಲ್ಲಿ ಕಂಡು ಬರುತ್ತವೆ.

ಜ್ಞಾನ ವ್ಯವಸ್ಥೆಗೆ ಸಂಬಂಧಪಟ್ಟ ಶೈಕ್ಷಣಿಕ ಸಂಸ್ಥೆಗಳು, ನಾಲ್ಕು ಗೋಡೆಗಳ ನಡುವಣ ವ್ಯಾಸಂಗದ ನಿರರ್ಥಕತೆ, ನಿಸರ್ಗ ಮತ್ತು ಜನ ಸಮುದಾಯಗಳ ಸಂಸ್ಪರ್ಶವಿಲ್ಲದ ಜ್ಞಾನ ಶಿಸ್ತುಗಳ ಸ್ಥಾವರತೆ, ಜಡ್ಡುಗಟ್ಟಿದ ಸಂಶೋಧನೆಗಳು ಮುಂತಾದವನ್ನು ಲೋಕ ನಿರೀಕ್ಷಣೆಯೇ ಉಸಿರಾದ ಚಾರಣ ಸಾಹಿತ್ಯವು ನಿರ್ದಯವಾಗಿ ಛಿದ್ರಿಸುತ್ತದೆ. ಇದನ್ನಿ ಬಿ.ಜಿ.ಎಲ್. ಸ್ವಾಮಿ ಅವರ 'ಹಸುರು ಹೊನ್ನು' ಮತ್ತು ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಪರಿಸರ ಕತೆಗಳು' 'ಏರೋಪ್ಲೇನ್ ಚಿಟ್ಟೆ ಇತರ ಕತೆಗಳು' 'ನೆರೆಹೊರೆಯ ಗೆಳೆಯರು' ಮುಂತಾದ ಕೃತಿಗಳಲ್ಲಿ ನೋಡಬಹುದು. ಪ್ರತ್ಯಕ್ಷ ಜ್ಞಾನ ಮತ್ತು ನಿಜಾನುಭವದ ಹಾದಿಗಳು ಲೇಖಕನ ಲೋಕ ನಿರೀಕ್ಷಣೆಯಲ್ಲಿ ಮುಖ್ಯಾಂಶವಾಗಿ ಮನ ಸೆಳೆಯುತ್ತವೆ.

2. ಗ್ರಾಮ್ಯ ಧರ್ಮ ಮತ್ತು ವನ್ಯ ಧರ್ಮ ಪ್ರವೃತ್ತಿಗಳು

ನಮ್ಮ ದೇಶವು ಹಳ್ಳಿಗಳ ದೇಶ. ಹಳ್ಳಿಗಾಡುಗಳು ಮತ್ತು ಗುಡ್ಡಗಾಡುಗಳು ಎಂಬ ಪ್ರಯೋಗದಲ್ಲಿರುವ

ISSN: 2320-9941
ಪ್ರತಿಸ್ಪಂದ । Prathispandha

ಹಳ್ಳಿಗಳು ಮತ್ತು ಕಾಡುಗಳ ಅವಿಭಾಜ್ಯ ಸಂಬಂಧವನ್ನಿಲ್ಲಿ ಮನಗಾಣಬೇಕು. ಭಾರತದ ಜೀವಂತಿಕೆಯನ್ನು ಹಳ್ಳಿಗಳಲ್ಲಿ ಗುರುತಿಸುವ ಮಹಾತ್ಮಗಾಂಧೀ ಚಿಂತನೆಯನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಭಾರತದ ಹಳ್ಳಿಗಾಡುಗಳು ಮತ್ತು ಗುಡ್ಡಗಾಡುಗಳು ಜ್ಞಾನದ ವಿವಿಧ ಶಾಖೆಗಳಿಗೆ ಸಂಬಂಧಪಟ್ಟಂತೆ ಸಂಶೋಧನೆಯ ಮಹಾನ್ ತಾಣಗಳೂ ಸಂಸ್ಕೃತಿ ಅಧ್ಯಯನದ ಕಾರ್ಯಕ್ಷೇತ್ರಗಳೂ ಆಗಬೇಕಾದ ಅನಿವಾರ್ಯತೆಯನ್ನು 'ಹಿಂದ್ ಸ್ವರಾಜ್' ಮೂಲಕ ಗಾಂಧಿಯವರು ಪ್ರತಿಪಾದಿಸಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ಭೂಪಟಗಳಲ್ಲಿ ಚುಕ್ಕಿಯಿಂದ ಕೂಡ ನಿರ್ದೇಶಿಸಲು ಸಾಧ್ಯವಿಲ್ಲದ ಸ್ಥಳೀಯ ಭೂಗೋಳದ ಗ್ರಾಮ್ಯ ಪರಿಸರ, ಅರಣ್ಯಕ ಪರಿಸರ ಮತ್ತು ಬಹುಸಂಖ್ಯಾತ ಜನಸಮುದಾಯದ ಜೀವನ ಕ್ರಮಗಳನ್ನು ಕುರಿತು ವಿಶಿಷ್ಟವಾದ ಒಳನೋಟಗಳು 'ಚಾರಣ ಸಾಹಿತ್ಯ'ದಲ್ಲಿ ಮೂಡಿಬಂದಿವೆ.

ಕುವೆಂಪು – ಕಾರಂತ – ಬಿ.ಜಿ.ಎಲ್. ಸ್ವಾಮಿ ಮತ್ತು ತೇಜಸ್ವಿ ಮುಂತಾದ ಲೇಖಕರ ಕಥನಗಳು ಹಾಗೂ ಮಥನಗಳು ಗ್ರಾಮ್ಯ ಧರ್ಮ ವನ್ಯ ಧರ್ಮ ಪ್ರವೃತ್ತಿಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಿದೆ. ಜನತೆಯ ಆಹಾರ ಪದ್ಧತಿ, ಕೃಷಿ ಪದ್ಧತಿ, ವೈದ್ಯ ಪದ್ಧತಿಗಳು, ಮಾತ್ರವಲ್ಲದೆ ಒಟ್ಟು ಜೀವನ ಶೈಲಿಗೆ ಸಂಬಂಧಪಟ್ಟ, ಬಹು ಮಹತ್ವದ ಕಾಣ್ಕೆಗಳು, ಮೌಖಿಕ ಪರಂಪೆಯ ತಿಳುವಳಿಕೆಗಳು, ಜಡ ಶೈಕ್ಷಣಿಕ ವ್ಯವಸ್ಥೆಗೆ ದಕ್ಕಲಾರದ ಮುನ್ನೋಟಗಳು, ಗ್ರಾಮ್ಯ ಧರ್ಮ ಮತ್ತು ವನ್ಯ ಧರ್ಮ ಪ್ರವೃತ್ತಿಗಳಲ್ಲಿ ಕಂಡು ಬರುತ್ತದೆ. ಚಾರಣ ಸಾಹಿತ್ಯದಲ್ಲಿ ಕಂಡು ಬರುವ 'ಜೀವ ಸಂಪತ್ತಿನ ದಾಖಲಾತಿ'ಗಳು ಗ್ರಾಮ್ಯ ಧರ್ಮ ಮತ್ತು ವನ್ಯ ಧರ್ಮಗಳ ಉಪವಸ್ತುವೆಂದೇ ಹೇಳಬೇಕಾಗಿದೆ. ಈ ಬಗ್ಗೆ ವಿದೇಶಿ ಕಂಪನಿಗಳ ಸಹಯೋಗದಲ್ಲಿ ವಿಸ್ತೃತವಾದ ಅಧ್ಯಯನಗಳೇ ಇಂದು ನಡೆಯುತ್ತವೆ. ಆದರೆ, ಜೀವ ಸಂಪತ್ತಿನ ದಾಖಲಾತಿಯಂಥ ಯೋಜನೆಗಳೇ ಇಲ್ಲದಿದ್ದ ದಿನಗಳಲ್ಲಿ ಕುವೆಂಪು, ಕಾರಂತ, ಬಿ.ಜಿ.ಎಲ್. ಸ್ವಾಮಿ, ತೇಜಸ್ವಿ ಮುಂತಾದವರು ಕನ್ನಡನಾಡಿನ ಕ್ರಿಮಿ ಕೀಟ, ಸಸ್ಯ, ಪಕ್ಷಿ, ಪ್ರಾಣಿ, ನೆಲ, ಜಲ, ಬೆಟ್ಟಗಳನ್ನು ಕುರಿತು ಕಥಾಂತರ್ಗತವೆನ್ನಬಹುದಾದ ಜೈವಿಕ ವೈವಿಧ್ಯತೆಯ ದಾಖಲಾತಿಯನ್ನು ನೀಡಿರುವುದು ಬಹು ಮಹತ್ವದ್ದೆನ್ನಿಸುತ್ತದೆ.

ಸಸ್ಯಕ್ಷೇತ್ರದ ಗಿಡಮೂಲಿಕೆಗಳ ಬಗ್ಗೆ ಹೇಳುವುದಾದರೆ, ಕನ್ನಡದ ಚಾರಣ ಸಾಹಿತ್ಯದಲ್ಲಿ ಈ ಕುರಿತು ವಿಪುಲ ಬರಹಗಳೇ ಪ್ರಕಟವಾಗಿದೆ. ಒಂದು ಮಾದರಿ ಉದಾಹರಣೆಯನ್ನು ಕೊಡುವುದಾದರೆ, ಮಾಜಿ ವಲಯಾರಣ್ಯ ಅಧಿಕಾರಿಗಳು, ಗಿರಿಜನ ವೈದ್ಯ ತಜ್ಞರೂ ಆದ ಎ.ಆರ್.ಎಂ. ಸಾಹೇಬ್ ಅವರು ಪ್ರಕಟಿಸಿರುವ ಅಪೂರ್ವ ಗಿಡ ಮೂಲಿಕೆಗಳು ಹಾಗೂ ಸರಳ ಚಿಕಿತ್ಸೆಗಳು ಎಂಬ ಗ್ರಂಥದಲ್ಲಿ ಎಪ್ಪತ್ತಕ್ಕೂ ಹೆಚ್ಚಿನ ಗಿಡಮೂಲಿಕೆಗಳನ್ನು ಪರಿಚಯಿಸಿದ್ದಾರೆ. ಈ ಎಲ್ಲ ಗಿಡಮೂಲಿಕೆಗಳ ಸಂಶೋಧನೆ ಮತ್ತು ಕಾರ್ಯಾಚರಣೆಗಾಗಿ ಎ.ಆರ್.ಎಂ. ಸಾಹೇಬ್ ಅವರು ಆರಿಸಿಕೊಂಡಿರುವ ಸ್ಥಳೀಯ ಭೂಗೋಳದ ಪಟ್ಟಿ ಹೀಗಿದೆ.

1. ಬಾಬಬುಡನ್ ಗಿರಿ (ಚಂದ್ರದ್ರೋಣ ಪರ್ವತ) ಚಿಕ್ಕಮಗಳೂರು.
2. ಸಿದ್ದರ ಬೆಟ್ಟ (ಸುವರ್ಣ ಗಿರಿ) ದೇವರಾಯನದುರ್ಗ (ಕರಿಗಿರಿ), ನಾಮದ ಚಿಲುಮೆ, ತುಮಕೂರು ಮತ್ತು ನಿಡಗಲ್ ಬೆಟ್ಟಗಳು
3. ಅಂತರಗಂಗೆ (ಶತಶೃಂಗ ಪರ್ವತ), ಕೋಲಾರ
4. ಮಹದೇಶ್ವರ ಬೆಟ್ಟ, ಕೊಳ್ಳೆಗಾಲ

1996 ಮತ್ತು 1997ರಲ್ಲಿ ಕ್ರಮವಾಗಿ ಪ್ರಥಮ ಮುದ್ರಣ ಮತ್ತು ದ್ವಿತೀಯ ಮುದ್ರಣಗಳನ್ನು ಕಂಡಿರುವ ಸಾಹೇಬ್ ಅವರ ಕೃತಿ ಚಾರಣ ಸಾಹಿತ್ಯದ ವೈದ್ಯಕೀಯ ಪ್ರಕಾರಕ್ಕೆ ಸೇರುತ್ತದೆ. ಈ ಕೃತಿಯಲ್ಲಿ ಸಾಹೇಬ್ ಅವರು ಪ್ರತಿಯೊಂದು ಗಿಡಮೂಲಿಕೆಯ ಸಸ್ಯಶಾಸ್ತ್ರೀಯ ನಾಮಧೇಯಗಳು – ಸಂಸ್ಕೃತ ಭಾಷೆಯ ಹೆಸರು – ಹಿಂದಿ, ಮರಾಠಿ, ಗುಜರಾತಿ ಹೆಸರುಗಳು – ಸೋದರಿ ಭಾಷೆಗಳಾದ ತೆಲುಗು, ತಮಿಳು, ಮಲೆಯಾಳಿ ಹೆಸರುಗಳು ಎಲ್ಲಕ್ಕಿಂತ ಮಿಗಿಲಾಗಿ ಕನ್ನಡ ಭಾಷೆಯ ಗಿರಿಜನ, ದೇಸಿ ಹೆಸರುಗಳು ಇವೆಲ್ಲವನ್ನೂ ಏಕತ್ರ ಕೊಟ್ಟಿದ್ದಾರೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿರುವ 'ಕಿರಿಯ ಕರ್ನಾಟಕ' (1994)ವನ್ನು ನೋಡಿದರೆ ಕನ್ನಡ ನಾಡಿನ ಜೈವಿಕ ಪರಿಸರದ ಬಗ್ಗೆ ಇರುವ ಅವಜ್ಞತೆ ಸ್ಪಷ್ಟವಾಗುತ್ತದೆ. ಪಶ್ಚಿಮ ಘಟ್ಟಗಳನ್ನು ಕುರಿತು ಉಲ್ಲೇಖವಿದೆ. ಆದರೆ ಪೂರ್ವ ಘಟ್ಟಗಳ ಪ್ರಸ್ತಾಪವೇ ಇಲ್ಲ. ಪಶ್ಚಿಮ ಘಟ್ಟಗಳನ್ನು ಕುರಿತು ಉಲ್ಲೇಖದಲ್ಲಿ ಎರಡು ಬಗೆಯ ಹೂವಿನ ಫೋಟೋಗಳಿದ್ದು ಅವುಗಳಿಗೆ ಪಶ್ಚಿಮ ಘಟ್ಟಗಳಲ್ಲಿ ಕಾಣಸಿಗುವ, ಅರಳುವ ಹೂವು (ಪು. 308, 312) ಎಂಬ ಶೀರ್ಷಿಕೆಯಿದೆ. ಈ ಹೂವುಗಳ ವಿಶಿಷ್ಟ ಹೆಸರೇನೆಂಬುದು ಓದುಗರಿಗೆ ಹೇಗೆ ತಿಳಿಯಬೇಕು? ಮರಗಳ ಫೋಟೋ ಕೂಡ ಹೀಗೆ ಇದೆ. ತೀರ ಸಾಮಾನ್ಯಿಕರಿಸಿದ ಇಂತಹ ಶೀರ್ಷಿಕೆಗಳ ಬದಲು ಶೀರ್ಷಿಕೆಗಳೇ ಇಲ್ಲದಿದ್ದರೆ ವ್ಯತ್ಯಾಸ

ಏನಿರುತ್ತಿತ್ತು?

ಈ ಪ್ರಶ್ನೆಗಳನ್ನಿಲ್ಲಿ ಕೇಳಲು ಕಾರಣವೇನೆಂದರೆ, ಶಬ್ದ ಜ್ಞಾನದಿಂದ ಹೊರತಾದ ಬಿಂಬ ಜ್ಞಾನವನ್ನು ಒಳಗೊಳ್ಳುವ ಉದ್ದೇಶದಿಂದ. ಅದೇ ಎ.ಆರ್.ಎಂ. ಸಾಹೇಬ್ ಅವರ ಕೃತಿಯಲ್ಲಿ ಪ್ರತಿಯೊಂದು ಗಿಡಮೂಲಿಕೆಗೆ ಸಂಬಂಧಪಟ್ಟ ವಿವಿಧ ಭಾಷೆಗಳ ಹೆಸರುಗಳು ಮತ್ತು ಸಸ್ಯ ಶಾಸ್ತ್ರೀಯ ನಾಮಧೇಯಗಳು ಗಮನಾರ್ಹವಾಗಿವೆ. ಕನ್ನಡನಾಡಿನ ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳೆರಡರಲ್ಲೂ ಕಂಡು ಬರುವ 'ಗ್ಲೋರಿಯೋಸಾ ಸೂಪರ್ಬ' ಎಂಬ ಹೂವಿನ ಗಿಡಕ್ಕೆ ಸಾಹೇಬ್ ಅವರು ಲಿಲಿಯೇಸಿ ಫ್ಯಾಮಿಲಿ ಎಂದು ಕೊಟ್ಟಿರುವುದರ ಜೊತೆಗೆ ಸಂಸ್ಕೃತ, ಹಿಂದಿ, ಮರಾಠಿ, ಗುಜರಾತಿ, ತೆಲುಗು, ತಮಿಳು ಭಾಷೆಯಲ್ಲಿರುವ ಸಂವಾದಿ ಹೆಸರುಗಳನ್ನು ಕೊಟ್ಟು, ಕನ್ನಡದಲ್ಲಿ ಕೋಳಿ ಜುಟ್ಟಿನ ಗಿಡ, ಗೌರಿ ಹೂವಿನ ಗಿಡ, ಅಗ್ನಿಶಿಖೆ –ಎಂಬ ವಿವರಗಳನ್ನು ನೀಡಿದ್ದಾರೆ. ನಂತರ, ಗಿಡದ ಸಮಗ್ರ ವರ್ಣನೆಯನ್ನು ಮಾಡಿ ಸರಳ ಚಿಕಿತ್ಸೆಗಳೇನೆಂಬುದನ್ನು ವಿವರಿಸಿದ್ದಾರೆ. ಸಾಹೇಬ್ ಅವರ ವೈಯುಕ್ತಿಕ ಕಾರ್ಯಾಚರಣೆಯ ಇದಿಷ್ಟು ವಿವರಗಳನ್ನು ಗಮನಿಸಿದರೆ ಅವರ ಪ್ರಯತ್ನ ಮತ್ತು ಪ್ರತಿಭೆಗಳ ಬಗ್ಗೆ ಗೌರವ ಮೂಡುತ್ತದೆ. ಕನ್ನಡ ದೇಸಿ, ಸಂಸ್ಕೃತ ಮಾರ್ಗ, ಸಸ್ಯಶಾಸ್ತ್ರೀಯ ನೆಲೆ, ಸೋದರ ಭಾಷಾ ನೆಲೆ, ಅನ್ಯ ಭಾಷಾ ನೆಲೆಗಳ ಕಡೆಯಿಂದ ಯಾವುದನ್ನೂ ನಿರ್ಲಕ್ಷಿಸದೆ, ಶ್ರಮ ಶ್ರದ್ಧೆಗಳಿಂದ ಆ ಎಲ್ಲ ಹೆಸರುಗಳನ್ನು ಕೊಟ್ಟಿರುವುದು ಮೆಚ್ಚುವಂತಿದೆ. ಎಪ್ಪತ್ತಕ್ಕೂ ಹೆಚ್ಚಿನ ಸಂ–ಖ್ಯೆಯ ಕನ್ನಡ ನಾಡಿನ ಗಿಡಮೂಲಿಕೆಗಳನ್ನು ಸ್ಥಳೀಯ ಭೂಗೋಳದ ಮೂಲಕವೇ ಪರಿಚಯಿಸುತ್ತಾ ಅವುಗಳನ್ನು ಹೇಗೆ ಬಳಸಬೇಕೆಂಬ ವಿವರಗಳನ್ನು ಗ್ರಾಮ್ಯ ಧರ್ಮ ಮತ್ತು ವನ್ಯ ಧರ್ಮಗಳನ್ನು ಅನುಸರಿಸಿ ಕೊಟ್ಟಿರುವುದು ಈ ಕೃತಿಯ ಅಗ್ಗಳಿಕೆಯಾಗಿದೆ.

ಚಾರಣ ಸಾಹಿತ್ಯವೆಂದರೆ, ಕಥನ ಸಾಹಿತ್ಯವೆಂದು ಮಾತ್ರ ತಿಳಿಯಬೇಕಾಗಿಲ್ಲ. ಇದರ ವ್ಯಾಪ್ತಿಗೆ ಶಿವರಾಮಕಾರಂತರ 'ಬಾಳ್ವೆಯೇ ಬೆಳಕು' ರೀತಿಯ ವಿಚಾರ ಸಾಹಿತ್ಯವೂ ಸೇರುತ್ತಿದೆಯೆಂಬುದನ್ನು ಭಾಗ ಒಂದರಲ್ಲಿ ಸವಿವರವಾಗಿ ನಿರೂಪಿಸಲಾಗಿದೆ. ಪ್ರಸ್ತುತ, ಎ.ಆರ್.ಎಂ. ಸಾಹೇಬ್ ಅವರ ಅಪೂರ್ವ ಗಿಡಮೂಲಿಕೆಗಳು ಹಾಗೂ ಸರಳ ಚಿಕಿತ್ಸೆಗಳು ಎಂಬ ಕೃತಿಯು ಆಗಲೇ ಹೇಳಿರುವಂತೆ ಚಾರಣ ಸಾಹಿತ್ಯದ ವೈದ್ಯಕೀಯ ಪ್ರಕಾರಕ್ಕೆ ಸೇರುತ್ತದೆ.

3. ಆರಣ್ಯಮಯ ಕೋಶ

ಚಾರಣ ಸಾಹಿತ್ಯವನ್ನು ಅರ್ಥೈಸಿಕೊಳ್ಳಲು ಬಹು ಉಪಯುಕ್ತವಾದ ನವೀನ ಪರಿಭಾಷೆಗಳಲ್ಲಿ ಅರಣ್ಯಮಯ ಕೋಶವೂ ಒಂದು. ಈ ಮಾತನ್ನು ಬಳಸಿದವರು ಕಾಡುಕವಿಯೆಂದೇ ಪ್ರಸಿದ್ಧರಾಗಿರುವ ಕುವೆಂಪು; ಅವರು ತಮ್ಮ ಕವಿತೆಯೊಂದರಲ್ಲಿ ಹೀಗೆಂದಿದ್ದಾರೆ.

ಅನ್ನಮಯದಾಚೆಯಲಿ ಪ್ರಾಣಮಯದೀಚೆಯಲಿ
ನನಗಿರುವೊದೊಂದಲ್ತೆ ಆರಣ್ಯಮಯ ಕೋಶ? (ಕದರಡಕೆ)

ಆರಣ್ಯಮಯ ಕೋಶಾವಸ್ಥೆಯಿಂದ ಮೂಡಿ ಬರುವ ಚಾರಣ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳಲು ಕಾಡುಗಳನ್ನು ಕುರಿತು ಬಿಂಬ ಜ್ಞಾನವೊಂದು ಅತ್ಯವಶ್ಯವಾದ ಸಂಗತಿಯಾಗಿದೆ. ಇಲ್ಲದಿದ್ದರೆ ಚಾರಣ ಸಾಹಿತ್ಯದ ಶಬ್ದ ಸರಣಿಗಳು ಓದುಗನಲ್ಲಿ ಸಚಿತ್ರ ಬಿಂಬಗಳಾಗಿ ಪರಿವರ್ತನೆಯಾಗದೆ, ಹೃದಯ ಸಂವಾದ ಅಸಾಧ್ಯವಾಗುತ್ತದೆ. ಕುವೆಂಪು ಸಾಹಿತ್ಯದ ವಿಶಿಷ್ಟತೆಯೇನೆಂಬುದನ್ನು ಡಾ. ಜಿ.ಎಸ್. ಶಿವರುದ್ರಪ್ಪನವರು ಬಹು ಸಮರ್ಪಕವಾಗಿ ವ್ಯಾಖ್ಯಾನಿಸಿದ್ದಾರೆ:

"ಕುವೆಂಪು ಮೂಲತಃ ಕಾಡಿನ ಕವಿ ಅನ್ನುವುದೇ ಅವರನ್ನು ಕನ್ನಡ ಸಾಹಿತ್ಯ ಸಂದರ್ಭದ ಇತರ ಬರೆಹಗಾರರಿಂದ ಬೇರ್ಪಡಿಸುವ ಮುಖ್ಯ ಲಕ್ಷಣವಾಗಿದೆ. ಅವರ ಮಹಾಕಾವ್ಯ, ಕಾದಂಬರಿ, ನಾಟಕ, ಕವಿತೆ ಎಲ್ಲ ಪ್ರಕಾರಗಳಲ್ಲೂ ಈ ಅರಣ್ಯಾನುಭವಗಳೇ ಮೂಲದ್ರವ್ಯದಂತೆ ಸರ್ವವ್ಯಾಪಿಯಾಗಿವೆ. ಅವರ ಬಹುತೇಕ ಎಲ್ಲ ಪಾತ್ರಗಳೂ ಈ ಅರಣ್ಯ ಸಂಸ್ಕೃತಿಯ ಪ್ರತೀಕಗಳೇ. ಇಷ್ಟರ ಮಟ್ಟಿಗೆ ಸಹ್ಯಾದ್ರಿಯ ಅರಣ್ಯಾನುಭವ ಎಂದೂ ಕನ್ನಡದಲ್ಲಿ ಈ ಪ್ರಮಾಣ ಹಾಗೂ ಸಾಚಾತನಗಳಲ್ಲಿ ಪ್ರಕಟವಾಗಿಲ್ಲ ಅನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ... ನಿಸರ್ಗದಿಂದ ವ್ಯಕ್ತಿತ್ವಕ್ಕೆ ಒದಗುವ ತುಷ್ಟಿ ಪುಷ್ಟಿಗಳು ವ್ಯಕ್ತಿತ್ವದ ಬೆಳವಣಿಗೆಗೆ ಎಷ್ಟು ಅಗತ್ಯ ಅನ್ನುವುದನ್ನು ಪರಿಸರನಾಶದ ತಲ್ಲಣದ ಇಂದಿನ ದಿನಗಳಲ್ಲಿ ನಾವು ಕ್ರಮೇಣ ಕಂಡು ಕೊಳ್ಳುತ್ತಿದ್ದೇವೆ."6

ಕಾಡು ಎಂದೊಡನೆ ನಿತ್ಯ ಹರಿದ್ವರ್ಣದ ಅರಣ್ಯವಲಯಗಳನ್ನು ಮಾತ್ರ ಮನಸ್ಸಿಗೆ ತಂದುಕೊಳ್ಳುವುದು

ISSN: 2320-9941
ಪ್ರತಿಸ್ಪಂದ । Prathispandha

ಸರಿಯಲ್ಲ. ಕಾಡಿನ ಅಪ್ರಮಾಣವನ್ನು ಗ್ರಹಿಸದೆ ಒಂದು ಪ್ರಮಾಣಕ್ಕೆ ತಂದುಕೊಳ್ಳುವ ಮನುಷ್ಯ ಸಹಜ ಚಪಲತೆಯಿಂದಾಗಿ ಕಾಡನ್ನು ಕುರಿತು ಸಂಕುಚಿತ ಕಲ್ಪನೆಯೊಂದು ವಿಶೇಷವಾಗಿ ನಾಗರಿಕರಲ್ಲಿ ಹುಟ್ಟಿಕೊಳ್ಳುತ್ತದೆ. ಸುವಿಶಾಲವಾದ ಹುಲ್ಲುಗಾವಲುಗಳು ಮೈದಾನ ಪ್ರದೇಶಗಳು, ಸರೋವರಗಳು, ಶಿಲಾ ಶ್ರೇಣಿಗಳು, ಗುಹಾಸರಣಿಗಳು, ಹಸಿರು ದಿಬ್ಬಗಳು, ಬೋಳು ಗುಡ್ಡಗಳು. ಬಯಲು ಸೀಮೆಗಳು, ಗಿರಿ ಕಂದರಗಳು, ಜೌಗು ಪ್ರದೇಶಗಳು, ನದಿ ಜಲಪಾತಗಳು, ಪರ್ವತಾರಣ್ಯಗಳು, ಮರುಭೂಮಿಗಳು, ಸಾಗರಗಳು, ತೀರ ಪ್ರದೇಶಗಳು, ಅಗ್ನಿ ಪರ್ವತಗಳು, ಹಿಮಗಿರಿಗಳು, ಧ್ರುವ ಪ್ರದೇಶಗಳು ಇವೆಲ್ಲವುಗಳ ನಡುವಣ ಅಗೋಚರ ಸರಪಳಿ ಸಂಬಂಧವನ್ನು ಬಿಂಬಿಸುವ ಸೃಷ್ಟಿ ರಚನೆಯ ಕುಶಲತೆ ಚಂದಗಳು, ಜಗದಚ್ಚರಿಯ ಅಂದದ ಒಪ್ಪಂದಗಳು, ಕಾಡಿನ ವ್ಯಾಪ್ತಿಗೊಳಪಡುತ್ತವೆ. ಕಾಡು ಎಂದರೆ ತಾನೂ ಬೆಳೆದು ಇತರ ಜೀವಿ ಸಂಕುಲಗಳೆಲ್ಲವನ್ನೂ ಬೆಳೆಸುವ ನೆಲಮನೆ, ಆದ್ದರಿಂದ ಇದು ಬೋಳು ಗುಡ್ಡ, ಇದು ದಟ್ಟ ಅರಣ್ಯವೆಂಬ ಕೃತಕ ವಿಭಜನೆಗೊಳಗಾಗುವುದು ಸಲ್ಲ. ಬೆಟ್ಟದ ಮೇಲಣ ನೆಲ್ಲಿಯಕಾಯಿ, ಸಮುದ್ರ ದೊಳಗಣ ಉಪ್ಪು ಎತ್ತಣಿಂದೆತ್ತಣ ಸಂಬಂಧವಯ್ಯ ಎಂಬ ಅಲ್ಲಮ ಪ್ರಭುಗಳ ವಚನದಲ್ಲಿ ಕಾಡಿನ ಅಗೋಚರ ಮತ್ತು ಅಪ್ರಮಾಣ ಸ್ವರೂಪದ ಚಿಂತನೆಗಳಿವೆ. ಇಂಥ ಚಿಂತನೆಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿರುವ ಪರಿಭಾಷೆಯನ್ನಾಗಿ 'ಅರಣ್ಯಮಯ ಕೋಶ'ವನ್ನು ಗ್ರಹಿಸಬೇಕು.

ಪ್ರಕೃತಿಯು ಸಂಸ್ಕೃತಿಗೆ ನೀಡುವ ಜೀವ ಚೈತನ್ಯ ಶಕ್ತಿಯೇ 'ಆರಣ್ಯಮಯ ಕೋಶ'. ಅನ್ನಮಯ–ಪ್ರಾಣಮಯ–ಮನೋಮಯ ಮುಂತಾದ ಪ್ರತಿಷ್ಠಿತ ತತ್ವಜ್ಞಾನದ ಸಾಲಿನಲ್ಲಿ ಕುವೆಂಪು ಅವರು ಅಪ್ರತಿಷ್ಠಿತವೆನ್ನಬಹುದಾದ ಆರಣ್ಯಮಯ ಕೋಶವೆಂಬ ಪರಿಕಲ್ಪನೆಯನ್ನಿಟ್ಟು ಹೊಸದಾಗಿ ಚಿಂತಿಸಲು ಪ್ರೇರಣೆ ನೀಡುತ್ತಾರೆ. ಪರಸ್ಪರ ವೈರುಧ್ಯಗಳು ಮತ್ತು ಸಂಘರ್ಷಗಳನ್ನೊಳಗೊಂಡಿರುವ ದಟ್ಟ ಜೀವನಾನುಭವಕ್ಕೆ ಕುವೆಂಪು ಪ್ರಾಮುಖ್ಯತೆ ಕೊಡುವುದರಿಂದ ಅವರಲ್ಲಿ ಏಕಪಕ್ಷೀಯ ನೆಲೆ ಕಂಡುಬರುವುದಿಲ್ಲ. ಕುವೆಂಪು ಮಂಡಿಸುವ ಪ್ರತಿಯೊಂದು ವಿಚಾರಕ್ಕೂ ತದ್ವಿರುದ್ಧವಾದ ಪ್ರಣಾಳಿಕೆಯೊಂದು ಕುವೆಂಪು ಸಾಹಿತ್ಯದಲ್ಲಿ ನಿರುದ್ವಿಗ್ನವಾಗಿ ಮಂಡಿತವಾಗಿದೆ. ಉದಾಹರಣೆಗೆ ದೈತ್ಯ ಪುಟ್ಟಣ್ಣನನ್ನು ಒಲಿಸಿಕೊಳ್ಳುತ್ತಲೇ ಅವನನ್ನು ಬದಲಿಸಲು ಯತ್ನಿಸುವ ಹೂವಯ್ಯನ ಆದರ್ಶ ಒಂದು ಕಡೆಗಿದ್ದರೆ, ಹೂವಯ್ಯನ ಮುಖಕ್ಕೆ ಉಗಿದು ಕೆಂಗಣ್ಣುಗಳಿಂದ ಗದರಿಸುವ ದೈತ್ಯ ಪುಟ್ಟಣ್ಣ ಇನ್ನೊಂದು ಕಡೆಗಿರುತ್ತಾನೆ. ಹಾಗೆಂದು ಹೂವಯ್ಯ ದೈತ್ಯ ಪುಟ್ಟಣ್ಣರನ್ನು ವಿರುದ್ಧ ಧ್ರುವಗಳೆಂದು ಕರೆಯಲಾಗದು. ಏಕೆಂದರೆ ಇಬ್ಬರಲ್ಲೂ ಆರಣ್ಯಕ ಜಗತ್ತು ಮೈದುಂಬಿಕೊಂಡಿದೆ.

'ಕನ್ನಡದಲ್ಲಿ ಬೇಟೆ ಸಾಹಿತ್ಯ' (ನರೇಂದ್ರ ರೈ ದೇರ್ಲ) ಎಂಬ ಎಂ.ಫಿಲ್ ಪದವಿಗೆ ಸಲ್ಲಿಸಿದ ಕೃತಿ ಪ್ರಕಟವಾಗಿದ್ದು, ಇದರಲ್ಲಿ ಶಿಕಾರಿ ಸಾಹಿತ್ಯ ಅಥವಾ ಮೃಗಯಾ ಸಾಹಿತ್ಯದ ಪರಿಶೀಲನೆಯಿದೆ. ಈ ನಿಟ್ಟಿನಲ್ಲಿ ಕೆದಂಬಾಡಿ ಜತ್ತಪ್ಪ ರೈ. ಬಿ.ಡಿ. ಸುಬ್ಬಯ್ಯ (ಕಾಕೆಮಾನಿ), ಬಡ್ಡಡ್ಕ ಅಪ್ಪಯ್ಯ ಗೌಡ, ಕೆ.ಎಸ್. ರಾಮಪ್ಪಗೌಡ, ಕೈಂತಜೆ ವಿಷ್ಣುಭಟ್ ಮೊದಲಾದವರ ಕೃತಿಗಳ ವಿಶ್ಲೇಷಣೆಯಿದೆ. ಈ ಸಾಲಿನಲ್ಲೇ ಜಿ. ವೆಂಕಟಯ್ಯನವರ ಬನದ ಸೆರಗು, ನಿಸರ್ಗದ ಮಡಿಲು ಕೃತಿಗಳೂ ಸೇರುತ್ತವೆ. 'ಶಿಕಾರಿ ಸಾಹಿತ್ಯ'ವೆಂಬ ಪ್ರಕಾರಕ್ಕೆ ಸೇರಿದ್ದರೂ ಈ ಎಲ್ಲ ಕೃತಿಗಳಲ್ಲಿ ಕಾಡಿನ ನೈಜ ದರ್ಶನವನ್ನು ತಂತಮ್ಮ ಸ್ಥಳೀಯ ಭೂಗೋಳದ ಮೂಲಕವೇ ಲೇಖಕರು ನೀಡಿರುವುದು ಬಹು ಮುಖ್ಯವೆನಿಸುತ್ತದೆ. ಕಾಡುಬೇಟೆಯ ಜೊತೆಗೆ ಕಾಡು ಬೇಟದ ವಿವರಗಳೂ ಇಲ್ಲಿವೆಯೆಂಬುದು ಮರೆಯುವಂತಿಲ್ಲ. ಜೊತೆಗೆ, ಬಗೆ ಬಗೆ–ಯ ಗ್ರಾಮ್ಯ ಧರ್ಮ ಮತ್ತು ವನ್ಯ ಧರ್ಮ ಪ್ರವೃತ್ತಿಗಳು, ಅರಣ್ಯಾಧಾರಿತ ಜನರ ಜೀವನ ಶೈಲಿ ಮುಂತಾದವುಗಳ ನಿರೂಪಣೆಯಿದ್ದು ಆಧುನಿಕತೆಗೆ ಮತ್ತು ನಾಗರಿಕತೆಗೆ ಆಗ ತಾನೆ ತೆರೆದುಕೊಳ್ಳುತ್ತಿದ್ದ ಕಾಡಿನ ಮಕ್ಕಳ ಮುಗ್ಧ ಚಿತ್ರಗಳು, ಕಲೆ ಮುಂತಾದ ಸಂಸ್ಕಾರಗಳು ಅಭಿವ್ಯಕ್ತಗೊಂಡಿವೆ. ಇವನ್ನೆಲ್ಲ ಆರಣ್ಯಮಯ ಕೋಶದ ವ್ಯಾಪ್ತಿಯಲ್ಲೇ ಚರ್ಚಿಸಬೇಕಾಗುತ್ತದೆ.

4. ಅನಿಕೇತನ ಪ್ರಜ್ಞೆ: ಚಾರಣ ಸಾಹಿತ್ಯದ ಮುಖ್ಯ ಸ್ಫೂರ್ತಿಯನ್ನು ನಿರ್ದೇಶಿಸುವ ಈ ಪರಿಭಾಷೆಯನ್ನು ಕುವೆಂಪು ಅವರ ಅನಿಕೇತನ ಎಂಬ ಕವನದಿಂದ ತೆಗೆದುಕೊಳ್ಳಲಾಗಿದೆ. ಹಿಂದಿನ ಕಾಲದಲ್ಲಿ ಧಾರ್ಮಿಕ ಸ್ಫೂರ್ತಿಯಿಂದ ಉತ್ತೇಜಿತರಾಗಿ ಕಾಲ್ನಡಿಗೆಯ ತಿರುಗಾಟಗಳನ್ನು ಮಾಡುತ್ತಿದ್ದು ಇವನ್ನು ತೀರ್ಥಯಾತ್ರೆಗಳು ಎಂದೇ ಕರೆಯುತ್ತಿದ್ದರು. ಈ ಪ್ರವೃತ್ತಿ ಆಧುನಿಕ ಕಾಲದಲ್ಲೂ ಪಾದಯಾತ್ರೆ, ಹೊರಳು ಸೇವೆ ಮುಂತಾದ ರೂಪಗಳಲ್ಲಿ ಇವೆಯಾದರೂ, ಇಲ್ಲಿ ಉದ್ದೇಶಿಸಿರುವ ಚಾರಣ ಸಾಹಿತ್ಯದ ಪ್ರಕಾರ ಧರ್ಮ ನಿರಪೇಕ್ಷವಾದ, ನಿಸರ್ಗವನ್ನು ಅಧ್ಯಯನ ಮಾಡುವ ವಿಶಿಷ್ಟ ಪ್ರಜ್ಞೆಯನ್ನೇ ಅನಿಕೇತನ ಪ್ರಜ್ಞೆಯೆಂದು ಕರೆಯಲಾಗಿದೆ. "ನೂರು ಮತದ ಹೊಟ್ಟ ತೂರಿ" ಎಲ್ಲ ತತ್ವದೆಲ್ಲೆ

ಮೀರಿ, ನಿರ್ದಿಗಂತವಾಗಿ ಏರಿ... ಎಂಬ ಕುವೆಂಪು ನುಡಿಗಳು, ಅನಿಕೇತನ ಪ್ರಜ್ಞೆಯ ಸಮರ್ಪಕ ವ್ಯಾಖ್ಯಾನವೆಂದು ಹೇಳಬಹುದು. ಸಾಂಸ್ಥಿಕ ಧರ್ಮಕ್ಕೆ ಪ್ರತಿದ್ವಂದ್ವಿಯಾಗಿ ನಿಸರ್ಗ ಧರ್ಮವೊಂದರ ಪ್ರತಿಪಾದನೆ ಚಾರಣ ಸಾಹಿತ್ಯದಲ್ಲಿ ಎದ್ದು ಕಾಣುತ್ತದೆ. ನಿಸರ್ಗವನ್ನು ಪ್ರೀತಿಸುವುದೆಂದರೆ, ಸಹ ಜೀವಿಗಳನ್ನು ಸಹಮಾನವರನ್ನು ಪ್ರೀತಿಸುವುದೆಂದೇ ಅರ್ಥ! ಕೋಮುವಾದ – ಭಯೋತ್ಪಾದನೆ – ವಿನಾಶಕ ಯುದ್ಧ ಮುಂತಾದ ಸಂಸ್ಕೃತಿಯ ಉತ್ಪಾತಗಳನ್ನು ಖಂಡಿಸುವ ಮತ್ತು ವಿಶ್ವಮಾನವ ಧರ್ಮ, ವಿಶ್ವ ಕೌಟುಂಬಿಕತೆಗಳನ್ನು ಮಂಡಿಸುವ ಮನೋಧರ್ಮ ಚಾರಣ ಸಾಹಿತ್ಯದಲ್ಲಿದೆ. ನಿಸರ್ಗವೆಂಬ ಪ್ರಿಸಂ ಮೂಲಕ ಸಂಸ್ಕೃತಿಯ ಸಮಸ್ತ ವಿದ್ಯಮಾನಗಳನ್ನು ವಿಮರ್ಶಿಸುವ, ಮಾನವನ ಮತಿ ವಿಕಾರಗಳನ್ನು ಬಯಲಿಗೆಳೆಯುವ ತೇಜಸ್ವಿ ಅವರ ಕಥನ ಸಾಹಿತ್ಯವನ್ನು ಪರಿಶೀಲಿಸಿದರೆ, ಚಾರಣ ಸಾಹಿತ್ಯವು ಹೊಂದಿರುವ ಘನತೆಯ ಆಯಾಮವೇನೆಂಬುದನ್ನು ಸುಸ್ಪಷ್ಟವಾಗಿ ಮನಗಾಣಬಹುದು. ಮಲೆಯ ನಾಡೆನೆಗೆ ತಾಯಿ ಮನೆ, ಕಾಡು ದೇವರ ಬೀಡು, ಗಿರಿಯ ಮುಡಿ ಶಿವನ ಗುಡಿ, ಬನವೆಣ್ಣೆ ಮೊದಲಿನ ಮನದನ್ನೆ – ಎಂಬ ಕುವೆಂಪು ನುಡಿಗಳಲ್ಲಿ ನಿಸರ್ಗ ಧರ್ಮದ ಗಟ್ಟಿ ಪ್ರತಿಪಾದನೆಯನ್ನು ಗುರುತಿಸಬಹುದು. ಲೋಕಗಮನವೇ ಆದರ್ಶವಾಗಿರುವ ಚಾರಣ ಸಾಹಿತ್ಯಕ್ಕೆ, ಮಾನವ ನಿರಿತ ಕಟ್ಟಳೆಗಳನ್ನು ಮೀರುವುದೊಂದು ಅನಿವಾರ್ಯ ಕರ್ಮವಾಗಿದೆ.

■■

ಆಕರ ಕೃತಿಗಳು:

1. ನೆಲದ ಮಾತು – ಎ.ಎಸ್. ಯಲ್ಲಪ್ಪರೆಡ್ಡಿ ಅಭಿನಂದನ ಗ್ರಂಥ., ಸಂ. ಶೂದ್ರ ಶ್ರೀನಿವಾಸ್ ಪು. 77–81, ಮೊದಲ ಮುದ್ರಣ 2002
2. ಆಯ್ದ ಪ್ರಬಂಧಗಳು., ಅನು : ಗೋಪಾಲ ಕೃಷ್ಣ ಅಡಿಗ ಪು. 55–67, ಜಗತ್ ಸಾಹಿತ್ಯ ಮಾಲೆ ಬೆಂಗಳೂರು 1981.
3. ಪ್ರಕೃತಿ ಚಿಕಿತ್ಸೆ., ಮೋ.ಕ. ಗಾಂಧಿ, ಅನು : ಯ.ನಾ. ಕೋಪರ್ಡೆ ಪು. 58–59 ಸಮಾಜ ಪುಸ್ತಕಾಲಯ, ಧಾರವಾಡ, ಮೂರನೆ ಮುದ್ರಣ 1993.
4. ನಾ ನಿಲ್ಲುವವಳಲ್ಲ., ವಿ. ಚಂದ್ರಶೇಖರ ನಂಗಲಿ. ಪು. 198., ಕ್ರೈಸ್ಟ್ ಕಾಲೇಜು, ಕನ್ನಡ ಸಂಘ, ಬೆಂಗಳೂರು 1998.
5. ಕಾರಂತ ಸಂಪುಟ–7., ಪು.220, ಮಂಗಳೂರು ವಿಶ್ವವಿದ್ಯಾಲಯ.
6. ಕುವೆಂಪು–90, ಪು. 79, ಶೂದ್ರ, ಪ್ರಕಟಣೆ 1995.

ISSN: 2320-9941
ಪ್ರತಿಸ್ಪಂದ । Prathispandha

ಕುವೆಂಪು ಹಸುರು

● **ನಾಡೋಜ ಡಾ. ಜಿ. ಕೃಷ್ಣಪ್ಪ**

ಕುವೆಂಪು ಜನಿಸಿದ್ದು ನಿತ್ಯ ಹರಿದ್ವರ್ಣದ ಮಲೆನಾಡಿನಲ್ಲಿ. ಅವರು ತಮ್ಮ ಕುಪ್ಪಳಿ ಮನೆಯನ್ನು 'ಕಾಡು ಮತ್ತು ಕೊಡುತಲಿರುವ/ಸೊಬಗುವೀಡು ನನ್ನ ಮನೆ' ಎಂದು ಆಹ್ಲಾದದಿಂದ ಬಣ್ಣಿಸಿದ್ದಾರೆ. ಸಸ್ಯ ಶ್ಯಾಮಲೆ ಸಹ್ಯಾದ್ರಿಯ ಸೌಂದರ್ಯಾನಂದದಲ್ಲಿ ಮಿಂದು ಬೆಳೆದ ಅವರು ಅಲ್ಲಿನ ಪ್ರಕೃತಿ ವೈಭವವನ್ನು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು' ಮಹಾಕಾದಂಬರಿಗಳಲ್ಲಿ, ಕವನಗಳಲ್ಲಿ, ಗದ್ಯಬರಹಗಳಲ್ಲಿ ಯಥೇಚ್ಛವಾಗಿ ವರ್ಣಿಸಿದ್ದಾರೆ.

ಒಂದು ಸಂದರ್ಶನದಲ್ಲಿ 'ನಿಮ್ಮ ನಿಸರ್ಗಪ್ರೇಮದ ಸ್ವರೂಪ ಎಂಥದು?' ಎಂಬ ದೇಜಗೌ ಅವರ ಪ್ರಶ್ನೆಗೆ ಕುವೆಂಪು ಹೀಗೆ ಉತ್ತರಿಸಿದ್ದಾರೆ:

'ನಾನು ಹುಟ್ಟಿದ್ದೇ ನಿಸರ್ಗದ ಗರ್ಭದಲ್ಲಿ. ನಿಸರ್ಗದ ಮಡಿಲೇ ನನ್ನ ಶೈಶವದ ತೊಟ್ಟಿಲು. ಪ್ರಕೃತಿ ಮಾತೆಯೇ ನನ್ನನ್ನು ಹೆತ್ತು ಹೊತ್ತು ಮುದ್ದಿಸಿ, ನನ್ನ ಜೀವದ ಜೀವವಾಗಿ ಬೆಳೆಸಿದಳೆಂದು ಹೇಳಬೇಕು. ನನ್ನ ಮತ್ತು ಪ್ರಕೃತಿಯ ಸಂಬಂಧ ಅವಿಭಾಜ್ಯವಾದದ್ದು; ಅನನ್ಯವಾದದ್ದು, ನನಗೂ ಪ್ರಕೃತಿಗೂ ಇರುವ ಸಂಬಂಧ ನೀರು ತಾವರೆಗಳ ಸಂಬಂಧ; ನನ್ನ ಕಾವ್ಯಕ್ಕೂ ಪ್ರಕೃತಿಗೂ ಇರುವ ಸಂಬಂಧ ಶ್ರೀಗಂಧಕ್ಕೂ ಅದರ ಪರಿಮಳಕ್ಕೂ ಇರುವ ಸಂಬಂಧ.' (ಕುವೆಂಪು ಸಮಗ್ರ ಗದ್ಯ ಸಂಪುಟ 2, ಪು 904)

ಕುವೆಂಪು ಅವರು ಸಸ್ಯಶ್ಯಾಮಲೆ ಮಲೆನಾಡಿನ ಹಸುರು ಸೊಂಪನ್ನು ಕಾವ್ಯದಲ್ಲಿ ಈ ಕೆಳಕಂಡಂತೆ ಅನನ್ಯವಾಗಿ ವರ್ಣಿಸಿದ್ದಾರೆ.

ಅವರ ಮೊದಲ ಕವನ ಸಂಕಲನ 'ಕೊಳಲು'ವಿನ ಪ್ರಾರಂಭದ ಕವಿತೆ 'ಗೊಲ್ಲನ ಬಿನ್ನಹ'. ಅದರಲ್ಲಿ ಅವರು 'ಕಾಡಿನ ಕೊಳಲಿದು, ಕಾಡ ಕವಿಯುನಾ, ನಾಡಿನ

ವಿಳಾಸ: ನಾಡೋಜ ಡಾ. ಜಿ. ಕೃಷ್ಣಪ್ಪ
ಹಿರಿಯ ಸಾಹಿತಿಗಳು
ಮತ್ತಿಕೆರೆ, ಬೆಂಗಳೂರು

ಜನರೊಲಿದಾಲಿಪುದು' ಎಂದು ಬಿನ್ನವಿಸಿಕೊಂಡಿದ್ದಾರೆ. ಆ ಕಾಡಿನ ಕವಿಗೆ ಹಸಿರೆ ಉಸಿರು ಆಗಿದ್ದು, ತಮ್ಮ ಹಾಡುಗಳನ್ನು ಕುರಿತು ಹಲವು ಬಗೆಯಲ್ಲಿ ವರ್ಣಿಸುತ್ತ ಹೀಗೆ ಹೇಳಿದ್ದಾರೆ.

'ಸುಗ್ಗಿಯ ಬನದಲಿ ಹಸುರಿನ ಮೇಲೆ
ಹೂವುಗಳಂದದಿ ಕೆಲವನು ಕೊಯ್ದೆ.'

ಕುವೆಂಪು ಅವರು ಸುಸಿಲು ಅರ್ಥಾತ್ ಉಷಃಕಾಲದಲ್ಲಿ ಎಳಬಿಸಿಲು ಹಸುರಿನ ಮೇಲೆ ಮಲಗಿರುವುದನ್ನು ಮೋಹನದ ಶಿಶುವಿಗೆ ಹೋಲಿಸಿ ಅದನ್ನು ಸಹೃದಯನಿಗೆ ಹೀಗೆ ತೋರಿಸಿದ್ದಾರೆ:

ನೋಡು ಎಂತಿದೆ ಸುಸಿಲು
ಹಸುರು ಮೇಲೆಳಬಿಸಿಲು
ಮಲಗಿಹುದು ಲೀಲೆಯಲಿ ಮೈಮರೆತ ಮೋಹನದ ಶಿಶುವಿನಂತೆ,
(ಮಲ್ಲಗೀತೆ – ಪಾಂಚಜನ್ಯ)

ಅದೇ ಬೆಳಗಿನ ಸಮಯ–ಸುಸಿಲುವಿನ ಕಿರಣಗಳ ಹನಿ ಹನಿ ರಾಶಿಯು ಹೊನ್ನ ಶೃಂಗಾರದಲ್ಲಿ ಧರೆಗಿಳಿದು ಬಂದು ಬನದ ತಳಿರಿಗೆ ಕುಂಕುಮದ ಬಣ್ಣ ಬಳಿಯುವುದನ್ನು ಮನೋಹರವಾಗಿ ಹೀಗೆ ರೇಖಿಸಿದ್ದಾರೆ:

ಹಸುರಿನಲಿ ಹೊಳೆವ ಹನಿ ರಾಶಿ ರಾಶಿಯ ಸೂಸಿ
ಹೊನ್ನ ಸಿಂಗಾರದಲಿ ಬಹುದು ಸುಸಿಲು;
ಬನದ ತಳಿರಿಗೆ ಬಳಿದು ಕುಂಕುಮದ ಬಣ್ಣವನೆ
ಮೋಹವನೆ ಚಿಮ್ಮುವುದು ಬೈಗು ಬಿಸಿಲು.
(ನಿನ್ನ ವಾಣಿ–ಕಲಾಸುಂದರಿ)

ಪ್ರಕೃತಿಯಾರಾಧನೆಯೆ ಪರಮನಾರಾಧನೆ

'ಪ್ರಕೃತಿಯಾರಾಧನೆಯಲ್ಲಿ ಪರಮನಾರಾಧನೆಯನ್ನು ಕಾಣುವ ಕವಿಗೆ ಪ್ರಕೃತಿ ಪರಮಾತ್ಮನ ರಸಾನಂದದ ಬೃಹತ್ ಪ್ರತಿಮೆಯಾಗುತ್ತದೆ. ಮಹತ್ ಪ್ರತಿಮೆಯಾಗುತ್ತದೆ. ಅಲ್ಲಿ ಸಕಲಾರಾಧನ ಸಾಧನ ಬೋಧನದ ರಸ ಸಿದ್ಧಿ ಲಭಿಸುತ್ತದೆ' ಎಂದು ಕುವೆಂಪು ಒಂದು ಸಂದರ್ಶನದಲ್ಲಿ ತಿಳಿಸಿದ್ದಾರೆ. (ಸಮಗ್ರ ಗದ್ಯ ಸಂಪುಟ 1, ಪು. 430)

ಅವರು 'ತುಂಗೆ' ಕವನದಲ್ಲಿ 'ನಿನ್ನೆದೆಯ ತೊಟ್ಟಿಲಲಿ ನಾನು ಬರಿ ಹಸುಳೆ!' ಎಂದು ಮಗುವಿನಂತೆ ನಲಿದಾಡಿ ತುಂಗಾನದಿಯನ್ನು ತಾಯಿಯಾಗಿ ಧ್ಯಾನಿಸಿದ್ದಾರೆ. ಅವರು ಅದರಿಂದಾದ ಪ್ರಕೃತಿಯನ್ನು ಆರಾಧಿಸುತ್ತ ಅದೇ ದೈವದ ಆರಾಧನೆ ಎಂದು, ಅದನ್ನು ಒಲಿದು ಒಂದಾಗುವುದೆ ಮುಕ್ತಿಯ ಆನಂದ ಸಾಧನೆಯ ಅನುಭಾವವೆಂದಿದ್ದಾರೆ.

'ಪ್ರಕೃತಿಯಾರಾಧನೆಯೆ ಪರಮನಾರಾಧನೆ;
ಪ್ರಕೃತಿಯೊಲ್ಮೆಯ ಮುಕ್ತಿಯಾನಂದ ಸಾಧನೆ.'

ಅವರು 'ವನಸುಂದರಿ' ಪ್ರಕೃತಿಯನ್ನು ಒಲ್ಮೆಯ ಹುಚ್ಚಿನಿಂದ ಕಂಡು ನಲಿದಾಡುತ್ತ ಹಲವು ಬಗೆಯಲ್ಲಿ ಬಣ್ಣಿಸುತ್ತ, ಕನ್ನಡ ಕಾವ್ಯದ ನಿಸರ್ಗಸಿರಿ ಹೆಚ್ಚಿಸಿದ ಮಹಾಕವಿ. ಅವರು ಆ ನಿಸರ್ಗವನ್ನು ಬಾಲ್ಯದಿಂದ ಸೂಕ್ಷ್ಮವಾಗಿ ತಿಳಿಯುತ್ತ ತಿಳಿಯಾಗಿ, ಪರಿಶುದ್ಧವಾಗಿ, ಪ್ರಸನ್ನ ಮನೋಭಾವಕ್ಕೆ ಒಳಗಾದುದನ್ನು ಹೀಗೆ ಅಭಿವ್ಯಕ್ತಿಸಿದ್ದಾರೆ:

ಸೌಂದರ್ಯಕ್ಕಿಂತಲೂ ಸೌಶೀಲ್ಯ ಹೆಚ್ಚು!
ತಿಳಿದು ತಿಳಿಯಾದುದೌನಲ್ಮೆ ಹುಚ್ಚು!'

ಅದೇ ಕವನದಲ್ಲಿ 'ಹ' ಕಾರದ ಒಳಪ್ರಾಸದಲ್ಲಿ ಹಸುರು, ಹಸುಳೆ ಬಿಸಲು, ಹಸನಾದ ವ್ಯಾಪ್ತಿಯ ಆಹ್ಲಾದವನ್ನು ಹೀಗೆ ಬಣ್ಣಿಸಿದ್ದಾರೆ:

'ಹಸುರು ಬನಗಳ ಮೇಲೆ ಹಸುಳೆ ಬಿಸಿಲಿನ ಲೀಲೆ ಹಸನಾಗಿ ಹಸರಿಸಿದೆ ನೋಡು, ಬಾಲೆ!'
(ವನಸುಂದರಿ–ಕಲಾಸುಂದರಿ)

ಕುವೆಂಪು ಅವರು ನಿಸರ್ಗಲಾಸ್ಯವನ್ನು ತಮ್ಮ ಕಲ್ಪನೆಯ ಮೂಸೆಯಲ್ಲಿ ಕಡೆದಿಟ್ಟು ಬಣ್ಣಿಸಿರುವ ರೀತಿ ಕನ್ನಡ ಸಾಹಿತ್ಯದಲ್ಲಿಯೆ ವಿಶಿಷ್ಟವಾಗಿದೆ. ಅರೆಬಿರಿದ (ಕುಟ್ಮಲಮಯ) ಬೆಟ್ಟ ಮಲ್ಲಿಗೆ (ಕುಟಜ) ಯಲ್ಲಿ ನಲಿದಾಡಿ ಸುಗಂಧವನ್ನು ಪಸರಿಸುವ ವಾಯುವನ್ನು 'ನಟಸಮೀರ' ಎಂದು ವ್ಯಕ್ತಿಯಂತೆ ಪರಿಭಾವಿಸಿ ವರ್ಣಿಸಿದ್ದಾರೆ. ಆ ಮಧುರ ಉಷಃ ಕಾಲದಲ್ಲಿಯ ಪುಟಾಣಿ ಮಂಜಿನ ಬಿಂದುವನ್ನು 'ಹನಿಯ ಹಸುಳೆ' ಎಂದು ಕರೆದು, ಅದು ಎಲೆಯ ಹಸುರ ತೊಟ್ಟಿಲಲ್ಲಿ ನಗುತ್ತಿದೆ ಎಂಬ ತಮ್ಮ ಕಲ್ಪನಾ ಶಿಶುವನ್ನು ಕಾವ್ಯದಲ್ಲಿ ಹೀಗೆ ತೂಗಾಡಿಸಿದ್ದಾರೆ;

'ಕುಟ್ಮಲಮಯ ಕುಟಜದಲ್ಲಿ

ISSN: 2320-9941

ನಟ ಸಮೀರನೈತರೆ,
ಎಲೆಯ ಹಸಿರು ತೊಟ್ಟಿಲಲ್ಲಿ,
ಹನಿಯ ಹಸುಳೆ ನಗುತಿರೆ'
(ಉಷೆಯು ನಿಶೆಯ ಚುಂಬಿಸೆ–ಕಲಾಸುಂದರಿ)

ಇಂತಹ ನಿಸರ್ಗನೇಹವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ ಅದರಲ್ಲಿರುವ ದೈವತ್ವ ಮತ್ತು ಅದರಿಂದೊದಗುವ ಆನಂದಾನುಭವ ಹೀಗೆ ತಿಳಿಸಿದ್ದಾರೆ. 'ಪ್ರಕೃತಿ ಮೈತ್ರಿಯು ನಮ್ಮಲ್ಲಿ ಸದ್ಯಕ್ಕೆ ಅವ್ಯಕ್ತವಾಗಿರುವ ದೇವತ್ವವನ್ನು ವ್ಯಕ್ತಪಡಿಸುತ್ತದೆ. ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ನಮ್ಮ ಅನಂತತ್ವವನ್ನು ಬೋಧೆಗೆ ತರುತ್ತದೆ. ಅಲ್ಲದೇ ನಮ್ಮ ಜೀವಮಾನವನ್ನೆಲ್ಲ ಆನಂದಮಯವಾಗಿ ಮಾಡುತ್ತದೆ. (ಕುಂ.ಸ.ಗ. ಸಂಪುಟ 1. ಪು. 580)

ಗಿರಿಯ ಕಾಯುತಿಹ ಹಸುರ ಕೋಟೆ

ಕುವೆಂಪು ಅವರು 'ಸಹ್ಯಾದ್ರಿ ಶೃಂಗದಲಿ' ಕವನದಲ್ಲಿ ಹಸುರು ಜೀವತಳೆದಂತೆ ತನಗೆ ಮುತ್ತಿಡುವುದನ್ನು ಆ ಶೃಂಗಾರ, ಸೌಂದರ್ಯ, ರಸಯೋಗಸುಖವನ್ನು ಹೀಗೆ ಚಿತ್ರಿಸಿದ್ದಾರೆ:

'ಎತ್ತ ನೋಡಿದರು ಸುತ್ತ ಹಸುರು ಕಡಲ್
ಒತ್ತಿ ಮುತ್ತಿಡುತಿಹುದಿಲ್ಲಿ;
ಇಲ್ಲಿ ಶೃಂಗಾರವಿಲ್ಲಿ ಸೌಂದರ್ಯ
ವಿಲ್ಲಿ ರಸಯೋಗ ಸುಖವಿಲ್ಲ'

ಅವರ ಆ ಹೆಮ್ಮೆಯ ಸಹ್ಯಾದ್ರಿ ಗಿರಿಯ ಸುರಕ್ಷತೆಗಾಗಿ ಹೆಮ್ಮರಗಳು ಸೃಷ್ಟಿಗೊಂಡು ಹಸುರು ಕೋಟೆಯಾಗಿ ಕಾಯುತ್ತಿವೆ ಎಂದು ಕಾವ್ಯ ರಚಿಸಿದ್ದಾರೆ. ಅದು ಎಷ್ಟು ಸತ್ಯವೆಂದರೆ ಆ ಮರಗಳ ನಾಶದಲ್ಲಿ ಸಹ್ಯಾದ್ರಿಯನ್ನು ಮನುಷ್ಯ ನಾಶಗೊಳಿಸುತ್ತಿದ್ದಾನೆ. ಅವನ ಹಣದ ದಾಹದಿಂದ ಕಾಡನ್ನು ಬೋಳಾಗಿಸಿ ಮೃಗ ಪಕ್ಷಿಗಳನ್ನು ಇಲ್ಲವಾಗಿಸಿ, ತನ್ನ ಸಂತತಿಗೆ ನೀರಿಲ್ಲದಂತೆ ಪರಿತಪಿಸಲು ಕಾರಣವಾದ ದಾನವನಾಗುತ್ತಿದ್ದಾನೆ.

ಗಿರಿಯ ಕಾಯುತಿಹ ಹಸುರು ಕೋಟೆಯೊಲು
ಸುತ್ತ ಹೆಮ್ಮರಗಳೆದ್ದಿಹವು;
ಶಾಂತಿ ವಿಶ್ರಾಂತಿ ನಿರತೆಯಾನಂದ
ಮೌನ ಮುಕ್ತಿಗಳಿಗಿದು ಬೀಡು.'

ಕವಿಯು ಈ ಧರೆಯು ನಾಕವಾಗಲು ಕಾರಣವಾದ ತೊರೆ, ನೊರೆ, ಹಸುರು ಬನದ ಐಸಿರಿ, ಅಲ್ಲಿ ಒರಗಿದ ಹೂ ಬಿಸಲ ಮೌನ ಪ್ರಕೃತಿಯನ್ನು ನುಡಿ ಸೊಬಗಿನಿಂದ ಹರಿದಾಡಿಸಿದ್ದಾರೆ.

ಮೊರೆ ಮೊರೆಯುತ ಓಡುವ ಈ ತೊರೆಯಿರೆ,
ಹಸುರು ಬನಗಳಲಿ ಹೂಬಿಸಿಲೊರಗಿದೆ
ಕೋಮಲ ರವಿಯಿರೆ, ನಾಕವು ಈ ಧರೆ!'
(ಸ್ವರ್ಗವೆ, ಭೂಮಿಯೊಳಿರದಿರೆ ನೀನು–ನವಲಿ)

ಪಸುರ ಸಿರಿಯ ಮೇಯುತ್ತಿತ್ತು ಕವಿಯ ಕಣ್ಣು

ಕಾಡಿನ ಕೂಸಾದ ಕುವೆಂಪು ಅವರು ಈ ಜಗವನ್ನು ಕಣ್ಣು ಬಿಟ್ಟು ನೋಡಿದಾಗಿನಿಂದ ಕಂಡಿದ್ದು ಹಸುರು. ಅವರಿಗೆ ಮಲೆನಾಡಿನ ಮಣ್ಣು ಸದಾ ಹಸುರು ಬಣ್ಣದ ರತ್ನ–ಪಚ್ಚೆಯಂತೆ ಶೋಭಿಸುವುದು. ಅವರ ಕಣ್ಣು ಯಾವಾಗಲೂ ಹಸುರಿನ ಮನೋಹರ ಜೀವಪೋಷಕ ಸಂಪತ್ತನ್ನು ಮೇಯುವುದು.

'ಪಚ್ಚೆಯಾಗಿ ಮೆರೆಯುತ್ತಿತ್ತು
ಬುವಿಯ ಮಣ್ಣು;
ಪಸುರ ಸಿರಿಯ ಮೇಯುತ್ತಿತ್ತು
ಕವಿಯ ಕಣ್ಣು .'
(ಭಾದ್ರಪದದ ಸುಪ್ರಭಾತ–ಪಕ್ಷಿಕಾಶಿ)
ಹಸುರಿನಲಿ ಬಿಸಿಲು ಸೆರೆ

ಕಾಡಿನ ಅಣುಗ ಕುವೆಂಪು ಅವರು ಹಸುರಿನಲ್ಲಿ ಸೆರೆಯಾಗಿರುವ ಬಿಸಿಲನ್ನು ಕಂಡು ಕುಣಿದ ತುಂಟ. ಅವರು ಆ ಸಹಜ ನಿಸರ್ಗದಾಟವನ್ನು ತಮ್ಮ ಮನೆಯ ಸಮೀಪವಿರುವ ಅಶೋಕವನದ ರಮಣೀಯತೆಯಲ್ಲಿ

ಹೀಗೆ ಅಭಿವ್ಯಕ್ತಿಸಿದ್ದಾರೆ:

'ಪಥರಹಿತ ವನರಾಜಿ, ತಣ್ಣೆಳಲು, ತಂಗಾಳಿ,
ನಿಶ್ಶಬ್ದ ಸ್ವಾತಂತ್ರ್ಯ ಸಾಮ್ರಾಜ್ಯವಿದೆ ನೋಡು!
ಹಸುರಿನಲಿ ಬಿಸಿಲು ಸೆರೆ, ಬನಗತ್ತಲೆಯ ಬೀಡು
ಮೌನವಾರಿಧಿಯೊಂದು ಮಡುವಿನಾಳವ ತಾಳಿ
ಗಂಭೀರವಾಗಿಹುದು.'
(ಅಶೋಕವನದಲ್ಲಿ–ಕೃತ್ತಿಕೆ)

ಹಸುರು ದುಡಿಮೆ

ರೈತರು ಹೊಲಗದ್ದೆಗಳಲ್ಲಿ ಸದಾ ದುಡಿದು ದವಸ ಧಾನ್ಯಗಳನ್ನು ಬೆಳೆಯುತ್ತಿರುತ್ತಾರೆ. ಅದು ಜಗತ್ತಿನ ಜನರಿಗೆ ಜೀವಪೋಷಕ ಅಮೂಲ್ಯ ನಿಧಿ. ಹಾಗಾಗಿ ಕವಿಯು ಅವರ ಕಾಯಕವನ್ನು 'ಹಸುರು ದುಡಿಮೆ' ಎಂಬ ರೂಪಕದಲ್ಲಿ ಬಣ್ಣಿಸಿದ್ದಾರೆ. ರೈತನ ದುಡಿಮೆಯ ಫಲವಾದ ಬತ್ತದ ಪೈರು ಕವಿಯ ದೃಷ್ಟಿಗೆ ಹಸಿರು ಬಣ್ಣದ ಪ್ರತಿಮೆ (ಪಡಿಮೆ) ಯಾಗಿ ಕಂಡಿದೆ.

'ಯಾವ ಕಾವ್ಯಕೇನು ಕಡಿಮೆ
ರೈತನ ಈ ಹಸುರು ದುಡಿಮೆ,
ಶಿಶುಪೈರಿನ ಪಚ್ಚೆ ಪಡಿಮೆ?
(ನಿತ್ಯಶಾಲಿಕ್ಷೇತ್ರ–ಕದರಡಕೆ)

ಕುವೆಂಪು ಅವರು 'ಮಲೆನಾಡಿಗೆ ಮನ ಓಡುವುದು' ಕವನದಲ್ಲಿ–ನಿಸರ್ಗದಲ್ಲಿ ಬೀಜ ಮೊಳೆತು ಚಿಮ್ಮಿ ಕಣ್ಣಿಗೆ ತಂಪು ನೀಡುವ ಮುದ್ದು ಹಸುರಾಗಿ ಹೊಮ್ಮುವುದನ್ನು ಚಿತ್ರಿಸಿದ್ದಾರೆ. ಆ ಹಸುರು ಇಡೀ ಮಲೆನಾಡನ್ನೆಲ್ಲ ವ್ಯಾಪಿಸಿ ಮಲೆನಾಡಿಗರ ಬಾಳನ್ನು ಹಸುರಾಗಿಸಿದ್ದನ್ನು ನೆನೆದು ಹರ್ಷಗೊಂಡು ಹೀಗೆ ಧ್ಯಾನಿಸಿದ್ದಾರೆ:

ಕಣ್ಣೊಡೆದೊಯ್ಯನೆ ಬೀಜದ ಹರುಷವು
ನೆಲದಿಂದೊಯ್ಯನೆ ಚಿಮ್ಮುವುದು;
ಮೊಳೆಯುತ, ಕಣ್ಣಿಗೆ ತಂಪನು ನೀಡುತ,
ಮುದ್ದು ಹಸುರು ಹೊರ ಹೊಮ್ಮುವುದು.
ಹಸುರು, ಹಸುರು, ಹಸುರೆಲ್ಲಿಯು ಹಸುರು!
ಮಲೆನಾಡಿನ ಬಾಳದು ಬರಿ ಹಸುರು!
ಹಸುರು ತುಂಬಿ ತುಳುಕಾಡುವುದು;
ಬಿಸಿಲು ಕೂಡ ಹಸುರಾಗುವುದು!'
(ಮಲೆನಾಡಿಗೆ ಮನ ಓಡುವುದು–ಕದರಡಕೆ)

ಹಸುರ್ಗಟ್ಟಿತೊ ಕವಿಯಾತ್ಮಂ

'ಆಶ್ವೀಜ ಮಾಸದಲ್ಲಿ 'ಕವಿಶೈಲ'ದ ನೆತ್ತಿಯಲ್ಲಿ ದೊರೆಕೊಂಡ ರಸಾನುಭೂತಿ' ಎಂಬ ಭಾವ ಸಂದರ್ಭವನ್ನು 'ಹಸುರು' ಕವನ ಹೊಂದಿದೆ. ಕವಿಗೆ ನವರಾತ್ರಿಯಲ್ಲಿ ಭೂಮಿಯು ಹೊಸತಾಗಿ ಕಂಡಿದೆ. ಆ ಕಡು ನೀಲವರ್ಣ–ಶ್ಯಾಮಲ ಸಮುದ್ರದ ರಸಪಾನ ಸ್ನಾನದಲ್ಲಿ ಕವಿಯಾತ್ಮವು ಹಸುರಾಯಿತು ಎಂದು ಹಸುರಿನ ಅನುಭಾವ ಕವನ ರಚಿಸಿದ್ದಾರೆ ಅವರಿಗೆ ಹಸುರು ಗದ್ದೆಯ ಬಯಲು ಹಸುರಿನ ಮಲೆ ಹಸುರು ಕಣಿವೆಯಲ್ಲಿ – ಆಕಾಶ, ಮುಗಿಲು, ಸಂಜೆಯ ಬಿಸಿಲು ಸಹ ಹಸುರಾಗಿದೆ. ಆ ಹಸುರನ್ನು ಹೊದ್ದ ಅವರ ಮೈ ಮನ ಹಸುರು ಕಾವ್ಯವನ್ನು ಹರಿಸಿದೆ!

ಅವರ ದೃಷ್ಟಿಯಲ್ಲಿ ಆಶ್ವೀಜದ ಬತ್ತದ ಗದ್ದೆಯು ಗಿಳಿ ಎದೆಯ ಬಣ್ಣದ ಹಸುರು ನೋಟವನ್ನು ಹೊಂದಿದೆ. ಅದರ ಬಳಿಯಲ್ಲಿಯೆ ಆ ಶಾಲಿವನದ ಅಂಚಿನಲ್ಲಿ ಹಸುರು ಗರಿಗಳಿಂದ ತೊನೆದಾಡುವ ಅಡಕೆಯ ತೋಟ ಅವರನ್ನು ಹಸುರು ಭಾವದಲ್ಲಿ ಓಲಾಡಿಸಿದೆ.

ಕುವೆಂಪು ಅವರಿಗೆ ಮಲೆನಾಡಿನ ಭೂಮಿಯ ಮೇಲೆ ಹಸುರು 'ಮಕಮಲ್ಲಿನ ಪೊಸಪಚ್ಚೆ ಜಮಖಾನೆ'ಯಂತೆ ಹರಡಿಕೊಂಡಿದೆ. ಅದು ಹಾಗೆ ತಿರೆಯ ಮೈ ಮುಚ್ಚಿರುವಾಗ ಅವರಿಗೆ ಹಸುರಲ್ಲದೆ ಬೇರೆ ಬಣ್ಣ ಕಾಣುತ್ತಿಲ್ಲ! ಆಗ

ISSN: 2320-9941
ಪ್ರತಿಸ್ಪಂದ । Prathispandha

ಸೂಸಿ ಬರುವ ಹೂವಿನ ಕಂಪು ಹಸುರಾಗಿದ್ದು, ಗಾಳಿಯ ತಂಪೂ ಹಸುರಾಗಿದೆ! ಹಾಗಾಗಿ ಅವರು ಈ ಭುವಿಯ ಮತ್ತು ಹಸುರಿನ ಬಾಂಧವ್ಯದಿಂದ ಸಕಲ ಜೀವರಾಶಿಗಳು ಉಸಿರಾಡಿ ಬದುಕುವ ವಾಸ್ತವವನ್ನು ಅರಿತು ಹೇಳಿದ್ದಾರೆ: 'ಹಸುರಿಳೆಯುಸಿರು'.

ಸುತ್ತ ಮುತ್ತಲೂ ಆವರಿಸಿರುವ ಆ ಹಸುರ ಸಮುದ್ರದಲ್ಲಿ ಕವಿಯ ಆತ್ಮ ಹಸುರುಗಟ್ಟಿದ್ದು, ಅವರ ಒಡಲಿನಲ್ಲಿ ಹಸುರು ನೆತ್ತರು ಹರಿದಾಡುತ್ತಿದೆ! ಅವರು ಹಸುರಾಗಿ ಹೋಗಿದ್ದಾರೆ.

'ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್ನೆತ್ತರ್ ಒಡಲಿನಲಿ!
(ಹಸುರು–ಪಕ್ಷಿಕಾಶಿ)

ಕುವೆಂಪು ಜೈವಿಕಧಾಮ

ಕರ್ನಾಟಕದ ಘನ ಸರ್ಕಾರವು ನಿಸರ್ಗ ಸೌಂದರ್ಯ ನೆಲೆ ಕುಪ್ಪಳಿಯ ಸುತ್ತಲಿನ 3500 ಎಕರೆ ಪ್ರದೇಶವನ್ನು ಕುವೆಂಪು ಜೈವಿಕ ಧಾಮ (Biosphere Reserve) ಎಂದು ಘೋಷಿಸಿದೆ. ಕುವೆಂಪು ಅವರ ಮಲೆನಾಡಿನ ಹಸುರು ಅರಣ್ಯವನ್ನು ಮುಂದಿನ ಪೀಳಿಗೆಗೆ ನಿತ್ಯ ಹರಿದ್ವರ್ಣದ ಕಾಡಾಗಿ ಉಳಿಸಿಟ್ಟಿದೆ.

■■

ISSN: 2320-9941
Prathispandha । ಪ್ರತಿಸ್ಪಂದ

ತೇಜಸ್ವಿ ಕಂಡ ಪರಿಸರ

● **ಡಾ. ರಮ್ಯ ಎಚ್. ಬಿ.**

ಕನ್ನಡದ ಪ್ರಮುಖ ಬರಹಗಾರ ಮತ್ತು ಕಾದಂಬರಿಕಾರ ಪೂರ್ಣಚಂದ್ರ ತೇಜಸ್ವಿಯವರು ಛಾಯಾಗ್ರಾಹಕ, ಪ್ರಕಾಶಕ, ವರ್ಣಚಿತ್ರಕಾರ, ನೈಸರ್ಗಿಕವಾದಿ ಮತ್ತು ಪರಿಸರವಾದಿಯಾಗಿಯೂ ಕಾರ್ಯನಿರ್ವಹಿಸಿದವರು. ಕನ್ನಡ ನವ್ಯಸಾಹಿತ್ಯದ ಪ್ರಮುಖ ಲೇಖಕ ಹಾಗೂ ಸ್ವತಂತ್ರ ಪ್ರವೃತ್ತಿಯ ಬರಹಗಾರರು. ನವ್ಯ ಸಾಹಿತ್ಯ ಕಾಲಘಟ್ಟದಲ್ಲಿ ಕೇಳಿ ಬಂದ ಹೆಸರು, ಅಬಚೂರಿನ ಪೋಸ್ಟಾಫೀಸು ಕಥಾಸಂಕಲನದ ಮೂಲಕ ಬಂಡಾಯ ಸಾಹಿತ್ಯವನ್ನು ಪ್ರಾರಂಭಿಸಿದವರು. ಕನ್ನಡದ ಸಾರ್ವಕಾಲಿಕ ಶ್ರೇಷ್ಠ ಪುಸ್ತಕಗಳಲ್ಲಿ ತೇಜಸ್ವಿಯವರ ಪರಿಸರದ ಕಥೆ– ಯೂ ಒಂದು ಎನ್ನಲು ಯಾವುದೇ ಹಿಂಜರಿಕೆ ಬೇಡ ಅನ್ನಿಸುತ್ತದೆ. ಕನ್ನಡ ಸಾಹಿತ್ಯದ ಯಾವುದೇ ಪ್ರಾಕಾರ ಅಥವಾ ಸ್ಪಷ್ಟ ವಿಭಜನೆಗೆ ಒಳಪಡದ ಕೃತಿ. ಪರಿಸರದ ಮೇಲೆ ಸ್ವಲ್ಪ ಆಸಕ್ತಿ ಇರುವವರಿಗಂತೂ ಈ ಪುಸ್ತಕವನ್ನು ಎಷ್ಟು ಬಾರಿ ಓದಿದರೂ ತೃಪ್ತಿ ಸಿಗಲಾರದು ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಪುಸ್ತಕದಲ್ಲಿ ತೇಜಸ್ವಿಯವರು ಗುರುತಿಸಿ ದಾಖಲಿಸಿರುವ ಪರಿಸರದ ವ್ಯಾಪಾರಗಳನ್ನು ಎಷ್ಟು ಬಾರಿ ಓದಿದರೂ ಬೇಸರವಾಗದು. ಬದಲಿಗೆ ಒಂದೊಂದು ಹೊಸ ಓದಿನಲ್ಲೂ ಹೊಸಹೊಸ ಅರ್ಥಗಳನ್ನು ಸ್ಫುರಿಸುವಂತಹ ಸಂದರ್ಭ ಈ ಪುಸ್ತಕದ ಓದಿನಲ್ಲಿ ಎದುರಾದೀತು. ತೇಜಸ್ವಿಯವರು ತಮ್ಮ ಬಾಲ್ಯದಿಂದಲೂ ಮತ್ತು ಕೃಷಿ ಆರಂಭಿಸಿದ ದಿನಗಳಲ್ಲೂ ತಮ್ಮ ಪರಿಸರದ ಬಗೆಗಿನ ಕುತೂಹಲ, ವಿಸ್ಮಯ, ಅನುಭವಗಳನ್ನು ಪುಸ್ತಕದ ಹದಿನಾಲ್ಕು ಅಧ್ಯಾಯಗಳಲ್ಲಿ ವಿವರಿಸುತ್ತಾರೆ. ಇದರಲ್ಲಿರುವ ಹದಿನಾಲ್ಕು ಅಧ್ಯಾಯಗಳು ಒಂದಕ್ಕಿಂತ ಒಂದು ಕುತೂಹಲಕಾರಿ. ಕಾಡಿಗೆ ನಾವು ಹೋಗಿ ನೋಡಿದರೂ ನಮಗೆ ಕಾಣಿಸದ ಹಲವಾರು ನೋಟಗಳನ್ನು, ಸೂಕ್ಷ್ಮ ವಿವರಗಳನ್ನು ಇದರಲ್ಲಿ

ವಿಳಾಸ: ಡಾ. ರಮ್ಯ ಎಚ್. ಬಿ.
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಚನ್ನಪಟ್ಟಣ–562160

ISSN: 2320-9941
ಪ್ರತಿಸ್ಪಂದ । Prathispandha

ದಾಖಲಿಸಿದ್ದಾರೆ. ತೇಜಸ್ವಿಯವರು ತಮ್ಮದೇ ಹಾಸ್ಯಭರಿತ ಶೈಲಿಯಲ್ಲಿ ಹಾಗೆಯೇ ತಮ್ಮ ಒಡನಾಟಕ್ಕೆ ಬಂದ ಮಾಸ್ತಿ, ಬೈರ, ಮಾರ, ಎಂಗ್ಟ, ಕಾಳಪ್ಪ, ಮೇಸ್ತ್ರಿ, ಸೀನಪ್ಪ ಹಾಗೂ ಇತರ ಹಳ್ಳಿಗರ ಚಿಂತನೆಗಳನ್ನು 'ಇದ್ದದ್ದು ಇದ್ದ ಹಾಗೆಯೇ' ಬರೆಯುವ ಮೂಲಕ ಮಾನವ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಬೇಕಾದ ಹೊಸ ದಾರಿಗಳನ್ನೂ ಇಲ್ಲಿ ತೋರಿಸಿದ್ದಾರೆ. ಅವರ ಸಾಕು ನಾಯಿ 'ಕಿವಿ' ಹಲವು ಅಧ್ಯಾಯಗಳಲ್ಲಿ ಒಂದು ಪಾತ್ರವೇ ಅಗಿದೆ. ಮೊದಲ ಅಧ್ಯಾಯದಲ್ಲಿ ಅದನ್ನು ತೇಜಸ್ವಿಯವರು ಪರಿಚಯಿಸಿರುವ ಪರಿ; ಕರ್ವಾಲೋ ಕಾದಂಬರಿಯಲ್ಲಿ ಬಂದಿರುವ ಕಿವಿ ಎನ್ನುವ ನಾಯಿ ಒಂದು ಕಾಲದಲ್ಲಿ ನನ್ನೊಡನೆ ಇದ್ದ ಅಸಾಧಾರಣ ಬುದ್ಧಿಯ ಶಿಕಾರಿ ನಾಯಿ. ಸ್ಪಾನಿಯಲ್ ಜಾತಿಯ ನಾಯಿ ಆದ ಕಾರಣ ಅದರ ಕಿವಿ ಸುಮಾರು ಅರ್ಧ ಅಡಿಗಿಂತ ಉದ್ದ ಇದ್ದು ತಲೆಯ ಪಕ್ಕದಲ್ಲಿ ವಿಸ್ತಾರವಾಗಿ ಇಳಿ ಬಿದ್ದಿತ್ತು. ಆದ್ದರಿಂದ ಇದಕ್ಕೆ ಕಿವಿ ಎನ್ನುವ ಹೆಸರು ಬಂದಿತ್ತೆಂದು ಕಿವಿಯ ಬಗ್ಗೆ ಪರಿಚಯಿಸುತ್ತಾರೆ. ಕಾಡು ಮೃಗಗಳನ್ನು ಜ್ಹೂಗಳಲ್ಲೂ, ಪುಸ್ತಕದ ಚಿತ್ರಗಳಲ್ಲೂ ಹೆಚ್ಚಾಗಿ ನೋಡಿದ್ದ ನನಗೆ ಮೊದಲ ಸಾರಿಗೆ ಅವು ಕಾಡಿನ ನಿಶ್ಚಲ ಮೌನದಲ್ಲಿ ಕಾಲ ಬಳಿಯ ಪೊದೆಗಳಿಂದಲೇ ಧಿಗ್ಗನೆ ಮಿಂಚಿ ಮಾಯವಾದಾಗ ಆದ ಅನುಭವ ಅಸಾಧಾರಣವಾದುದು. ಅವುಗಳ ಈ ಗೌಪ್ಯತೆಯೇ ನಮಗೆ ಅವುಗಳ ಬಗ್ಗೆ ಅಸಾಧಾರಣ ಕುತೂಹಲ ಹುಟ್ಟಿಸುತ್ತದೆ. ಹಾಗೆಯೇ ಮಾನಿಟರ್(ಉಡು) ಹಕ್ಕಿಮರಿಗಳು, ಹಾವು, ಕುಕ್ಕುಟ, ಕಪ್ಪೆ, ಆಮೆ, ಕಾಡುಹಂದಿ, ಮಂಗಗಳು ಇತ್ಯಾದಿ ಪ್ರಾಣಿಪಕ್ಷಿಗಳೂ ವಿವಿಧ ಅಧ್ಯಾಯಗಳಲ್ಲಿ ಪಾತ್ರಧಾರಿಗಳಾಗಿವೆ. 'ಮಾನಿಟರ್' ಅಧ್ಯಾಯದಲ್ಲಿ ನಾಯಿ 'ಕಿವಿ' ಒಂದು ಉಡುವನ್ನು ಕಂಡು ಬೊಗಳತೊಡಗುತ್ತದೆ. ತೇಜಸ್ವಿಯವರು ಅಂತೂ ಉಡುವನ್ನು ಕೈಯಿಂದ ಹಿಡಿದು ಎತ್ತಿ–ಕೊಂಡು ಮನೆಗೆ ತರುತ್ತಾರೆ. ಅದರ ಸೊಂಟಕ್ಕೆ ಹಗ್ಗ ಬಿಗಿದು ಅದನ್ನು ಭದ್ರವಾಗಿ ಮನೆ ಪಕ್ಕದ ವಾಟೆ ಮರಕ್ಕೆ ಕಟ್ಟಿ ಹಾಕುತ್ತಾರೆ. ಮರುದಿನ ಬೆಳಗ್ಗೆ ಉಡು ಪರಾರಿಯಾಗಿದೆ ಎಂದು ಪ್ಯಾರ ತಿಳಿಸುತ್ತಾನೆ. ಮುಂದೇನಾಯಿತೆಂಬುದನ್ನು ತೇಜಸ್ವಿಯವರ ಮಾತುಗಳಲ್ಲೆ ಓದಿ ತಿಳಿಯಬೇಕು.

ಮೂರನೆಯ ಅಧ್ಯಾಯ 'ಕಿವಿಯೊಡನೆ ಒಂದು ದಿನ'. ಇದು ತೇಜಸ್ವಿಯವರು ತಮ್ಮ ಒಬ್ಬ ಸ್ನೇಹಿತನೊಂದಿಗೆ ನಡೆಸಿದ ಶಿಕಾರಿಯ ಕಥೆ. ಶಿಕಾರಿ ಎಂದರೆ ಹುಲಿ ಅಥವಾ ಚಿರತೆಯ ಶಿಕಾರಿಯಲ್ಲ.ಒಂದು ಕಾಡುಹಂದಿಯ ಶಿಕಾರಿಯ ಕತೆ. 'ಅದರಲ್ಲೇನಿದೆ'? ಎಂದು ಯೋಚಿಸುವವರು; ಶಿಕಾರಿಯಲ್ಲಿ ಕಿವಿಯ ಪಾತ್ರವನ್ನೂ, ಬದುಕಿ ಉಳಿಯಲಿಕ್ಕಾಗಿ ಹಂದಿಯ ಪ್ರಯತ್ನಗಳನ್ನೂ, ಸ್ನೇಹಿತನ ಯೋಚನೆಯನ್ನೂ ಓದಿ ಆಸ್ವಾದಿಸಬೇಕು. ಗೆಳೆಯ ಶ್ರೀರಾಮನ ಮಾಂಸಹಾರ ಪ್ರಿಯತೆಯೇ ಅವರು ನನ್ನ ಜೊತೆ ಶಿಕಾರಿಗೆ ತೊಡಗಲು ಕಾರಣವೆಂದು ಸ್ಮರಿಸುತ್ತಾರೆ. ಶಿಕಾರಿಯ ಬಗ್ಗೆ ನನಗಿದ್ದ ಆನುಷಂಗಿಕ ಆಸಕ್ತಿ ಅವರಿಗೆ ಇರಲು ಸಾಧ್ಯವಿರಲಿಲ್ಲ. ಆದರೆ ನಮಗಿದ್ದ ಒಂದು ಮುಖ್ಯ ಆಸಕ್ತಿಯೆಂದರೆ ಮಾಂಸಹಾರ. ನಾಲ್ಕು ದಿನ ತಿಳಿಸಾರು ಅನ್ನ ಊಟ ಮಾಡಿದರೆ ಸಾಕು, ಜಾತಿಗೆಟ್ಟು ಹೋದವರಂತೆ ಮಾತನಾಡುತ್ತಿದ್ದೆವು. ಕೆಲವು ಪ್ರಾಣಿಗಳ ಮಾಂಸ ತಿನ್ನಲು ನನಗೆ ಒಳಗೊಳಗೆ ಅಸಹ್ಯವಾಗುತ್ತೆ. ಆದರೆ ಶ್ರೀರಾಮ ಹಾಗಲ್ಲ. ಅವರ ಮಟ್ಟಿಗೆ ಪ್ರಶ್ನೆ ಇರುವುದು ಮಾಂಸ ತಿನ್ನಬೇಕೋ ಬೇಡವೋ ಎನ್ನುವುದಷ್ಟೆ. ತಿನ್ನಬಹುದಾದದ್ದು ಎಂದಾದ ಮೇಲೆ ಸರ್ವ ಚರಾಚರ ವಸ್ತುಗಳಲ್ಲಿ ಯಾವುದಾದರೂ ಆಗಬಹುದು. ಮುಂದಿನ ಅಧ್ಯಾಯ "ಮಾಸ್ತಿ ಮತ್ತು ಬೈರ" ಕೂಡ ಹಂದಿ ಶಿಕಾರಿಯ ಕತೆ. ಇಲ್ಲಿ ಶಿಕಾರಿ ಆದದ್ದು ಹಂದಿಯಲ್ಲ; ಬದಲಾಗಿ ಬೈರನ ರಾಮ ಹೆಸರಿನ ಕಂತ್ರಿ ನಾಯಿ. ಬೈರನ ಹತ್ತಿರ ಒಂದು ಕಂತ್ರಿ ನಾಯಿ ಇತ್ತು. ಅದಕ್ಕೆ ರಾಮ ಎಂದು ಅವನು ಹೆಸರಿಟ್ಟಿದ್ದ. ಅದರ ಮೇಲೆ ಆಗಾಗ ದೆವ್ವ ಬರುತ್ತಿತ್ತಂತೆ. ಅದಕ್ಕೆ ಅವನು ಅದರ ಎರಡು ಕಿವಿಗಳನ್ನೂ ಬುಡಕ್ಕೆ ಕೊಯ್ದು ಚಿಕಿತ್ಸೆ ಮಾಡಿದ್ದ. ಅದೊಂದು ಅತ್ಯುತ್ತಮ ಶಿಕಾರಿ ನಾಯೆಂದೂ, ಅದರ ಶಿಕಾರಿ ಸಾಮರ್ಥ್ಯ ನೋಡಿದ ಅನೇಕರು ಅದಕ್ಕೆ ಎಷ್ಟು ಹಣ ಬೇಕಾದರೂ ಕೊಡುತ್ತೇವೆ ನಮಗೆ ಕೊಡು ಎಂದು ಕೇಳಿದರೆಂದೂ ತಾನು ಕೊಡಲಿಲ್ಲವೆಂದೂ ಹೇಳಿದ. ತೀರಾ ಬಡಕಲಾಗಿ ಬಾಲದ ಕೂದಲೆಲ್ಲ ಉದುರಿಹೋಗಿದ್ದ ಆ ನಾಯಿ ಪೇಟೆಯಲ್ಲಿ ವಾರಸುದಾರರಿಲ್ಲದೆ ಓಡಾಡಿಕೊಂಡಿರುವ ಸರ್ವೇ ಸಾಧಾರಣ ಕಂತ್ರಿ ನಾಯಿಯಂತೆಯೇ ನನಗೆ ಕಂಡಿತೆಂದು ಬೈರನ ನಾಯಿಯ ಪರಿಚಯ ಮಾಡಿಕೊಡುತ್ತಾರೆ. ಇದರ ಹನ್ನೊಂದು ಪುಟಗಳ ಓದು ಒಂದು ರಸಗವಳ. 'ಸುಸ್ಮಿತ ಮತ್ತು ಹಕ್ಕಿಮರಿ' ಅಧ್ಯಾಯದಲ್ಲಿ ತೇಜಸ್ವಿಯವರು ನವಿರಾದ ಭಾಷೆಯಲ್ಲಿ ಹಂಚಿಕೊಳ್ಳುವುದು ಹಕ್ಕಿ ಮರಿಗಳನ್ನು ಸಾಕಿ, ಅವುಗಳ ಫೋಟೋ ತೆಗೆಯುವ ತಮ್ಮ ಯೋಜನೆ ಕೈಗೂಡದೆ ಹೋದದ್ದನ್ನು ಜೊತೆಗೆ ಮಗಳು ಸುಸ್ಮಿತಳ ಮುಗ್ಧ ಪ್ರಶ್ನೆಗಳನ್ನೂ ಪ್ರಯತ್ನಗಳನ್ನೂ ತಿಳಿಸುತ್ತಾರೆ. ಹಕ್ಕಿಗಳನ್ನೆಲ್ಲಾ ಹೇಗಾದರೂ ನಾನೆ ಸಾಕಿ ಅವುಗಳ ಫೋಟೋ ತೆಗೆಯುವುದು ಅದಕ್ಕಿಂತ ನೂರುಪಟ್ಟು ಕಷ್ಟಕರವಾದುದು ಎಂದು ಬಹುಬೇಗ ಮನವರಿಕೆಯಾಯ್ತು. ಪೇಟೆಗಳಲ್ಲಿ ಗುಬ್ಬಚ್ಚಿಗಳು ಹೇಗೆ ಅಸಂಖ್ಯಾತವಾಗಿರುತ್ತವೆಯೋ ಹಾಗೆ ನಮ್ಮ ತೋಟದಲ್ಲಿ ಪಿಕಳಾರ ಅಥವಾ ಬುಲ್‌ಬುಲ್ ಹಕ್ಕಿಗಳು ಇದ್ದವು. ಬುಲ್‌ಬುಲ್‌ಗಳಲ್ಲಿ ನೂರಾರು ತರದ ಪ್ರಭೇಧಗಳಿದ್ದಾವೆ. ಜೊಟ್ಟಿ ಇರುವ ಬುಲ್‌ಬುಲ್, ಕೆಂಪು ಮೀಸೆ ಬುಲ್‌ಬುಲ್, ಹಳದಿ ಕಪಾಲದ ಬುಲ್‌ಬುಲ್, ಕೆಂಪುಗಲ್ಲದ ಹಳದಿ ಬುಲ್‌ಬುಲ್ ಬಿಳಿಯ ಕುತ್ತಿಗೆ–ಯ ಬುಲ್‌ಬುಲ್ ಹೀಗೆ ಅನೇಕ ತರ ಇವೆ. ಇವೆಲ್ಲ ಹಕ್ಕಿಗಳೂ ನಮ್ಮ ತೋಟದಲ್ಲಿ ಅಸಂಖ್ಯಾತವಾಗಿ ಇದ್ದುವು

ಎಂದು ಹಲವು ಪ್ರಬೇಧಗಳನ್ನು ಪರಿಚಯಿಸುತ್ತಾರೆ. 'ಎಂಗ್ಟನ ಪುಂಗಿ' ಹಾವುಗೊಲ್ಲರವನ ಕಥನ.ಅವನು ಸಂತೆ, ಜಾತ್ರೆಗಳಲ್ಲಿ ಹಾವುಗಳನ್ನು ಪ್ರದರ್ಶಿಸಿ ಜೀವನ ಸಾಗಿಸುವವನು. ಹಾವಿನ ಕಡಿತಕ್ಕೆ ಚಿಕಿತ್ಸೆಗಾಗಿ ನಾರು, ಬೇರು, ಮಣಿ ಇತ್ಯಾದಿ ಮಾರುವವನು. ಅದಲ್ಲದೆ ಎಲ್ಲಾದರೂ ಮನೆಯ ಹತ್ತಿರ ವಿಷದ ಹಾವು ಕಾಣಿಸಿದರೆ ಅದನ್ನು ಹಿಡಿದು ತನ್ನ ಶುಲ್ಕ ಪಡೆಯುವವನು.ಎಂತಹ ಪ್ರಶ್ನೆಗೂ ತನ್ನದೇ ರೀತಿಯಲ್ಲಿ ಉತ್ತರ ನೀಡುವವನು. ಅವನು ತಾನಾಗಿಯೇ ಮನೆಗಳ ಹತ್ತಿರ ಹಾವು ತಂದು ಬಿಟ್ಟು, ಅನಂತರ ಹಾವು ಹಿಡಿಯುವ ನಾಟಕ ಮಾಡುತ್ತಿದ್ದಾನೋ? ಎಂಬ ಅನುಮಾನ ಹಳ್ಳಿಗರಿಗೂ, ತೇಜಸ್ವಿಯವರಿಗೂ. ಎಂಗ್ಟ ಮಾತಿನಲ್ಲಿ ಚತುರ.ಅವನು ಹೇಳುವ ಹಾವು ಕತೆಗಳು ರೋಚಕ. 'ಸಂಬಳಕ್ಕೆ ಸಿಕ್ಕಿಕೊಂಡ ದೆವ್ವ' ಮಾರ ಗದ್ದೆ ಕಾಯಲು ಚೌಡಿಗೆ ಹರಕೆ ಹೊತ್ತ ಕತೆ. ಮಲೆನಾಡಿನ ಹಲವು ಹಳ್ಳಿಗಳಲ್ಲಿ ಚೌಡಿಯ ಬಗ್ಗೆ ಹಳ್ಳಿಗರಿಗೆ ಅಪಾರ ನಂಬಿಕೆ. ಇದನ್ನೆಲ್ಲ ನಂಬದ ತೇಜಸ್ವಿಯವರಿಂದ ಮುದುಕ ಮಾರ ಹಳ್ಳಿಗರ ನಂಬಿಕೆಯನ್ನು ಹೇಗೆ ದುಡಿಸಿಕೊಂಡ ಎಂಬುದರ ನವಿರಾದ ವರ್ಣನೆಯೇ ಈ ಅಧ್ಯಾಯದ ಹೂರಣ. 'ಕುಕ್ಕುಟ ಪಿಶಾಚ' ಅಧ್ಯಾಯದಲ್ಲಿ ಮೊಟ್ಟೆಯಿಟ್ಟ ಅಥವಾ ಗೂಡಿನಲ್ಲಿ ಮರಿಗಳನ್ನು ಸಲಹುವ ಕೆಲವು ಹಕ್ಕಿಗಳ ವಿಚಿತ್ರ ವರ್ತನೆಯ ಬಗ್ಗೆ ಹಳ್ಳಿಗರ ಮೂಢನಂಬಿಕೆಗಳು ಮತ್ತು ತೇಜಸ್ವಿಯವರ ವೈಜ್ಞಾನಿಕ ವಿವರಣೆಗಳು. ಮುಂದಿನ ಅಧ್ಯಾಯ 'ಕಾಳಪ್ಪನ ಕೋಬ್ರ' ಒಂದು ನಾಗರ ಹಾವಿನಿಂದಾದ ಫಜೀತಿಗಳ ವರ್ಣನೆ. 'ಗಾಡ್ಲಿ' ಅದೇ ಹೆಸರಿನ ಕಾಫಿತೋಟದ ಮ್ಯಾನೇಜರ್ ಒಬ್ಬನ ಫಜೀತಿಗಳ ಕತೆ. ಮಂಗಗಳ ಕಾಟ ತಾಳಲಾಗದೆ, ಆತ ಪಂಜರ ತರಿಸಿ ಅವುಗಳೊಳಗೆ ಸಿಕ್ಕಿ ಬಿದ್ದ ಮಂಗಗಳನ್ನು ಬೇರೊಂದು ಕಾಡಿನಲ್ಲಿ ಬಿಟ್ಟು ಬರಲು ಹೊದಾಗ ತಾನೇ ಪಂಜರದಲ್ಲಿ ಸಿಕ್ಕಿ ಬಿದ್ದು,ಎರಡು ದಿನ ಅನ್ನ ನೀರಿಲ್ಲದೆ ಒದ್ದಾಡಿದ್ದನ್ನು ನಂಬಲಾದೀತೇ?. 'ಮೂಲಿಕೆ ಬಳ್ಳಿಯ ಸುತ್ತ' ದಲ್ಲಿ ಲೇಖಕರು ಅಚ್ಚರಿಯಿಂದ ದಾಖಲಿಸುವ ವಿವರಗಳು, ಆ ಬಳ್ಳಿಯ ರಹಸ್ಯಮಯ ಅಸ್ತಿತ್ವವನ್ನು ಮತ್ತು ಹಳ್ಳಿಯವರು ಆ ಬಳ್ಳಿಯ ಸುತ್ತಲೂ ಹಬ್ಬಿಸಿರುವ ಊಹಾಪೋಹಗಳ ಕೋಟೆಯನ್ನೆ ಬಿಚ್ಚಿಟುತ್ತದೆ. ವೈದ್ಯರು ವಾಸಿಮಾಡಲಾಗದ ರೋಗಗಳನ್ನು ಮೂಲಿಕೆ ಬಳ್ಳಿ ವಾಸಿ ಮಾಡುತ್ತದೆಮಬ ಹಳ್ಳಿ ಜನರ ಮೂಢನಂಬಿಕೆಯೋ, ನಂಬಿಕೆಯೋ ಒಂದೆಡೆಯಾದರೆ, ಮೂಲಿಕೆ ಬಳ್ಳಿಯಿಂದ ಹಲವು ರೋಗಗಳು ನಿಜಕ್ಕೂ ವಾಸಿಯಾಗುವ ವಾಸ್ತವಗಳು ಇನ್ನೊಂದೆಡೆ! ಅದರ ಗಡ್ಡೆಯ ಚೂರನ್ನು ಕುತೂಹಲಕ್ಕೆಂದು ಲೇಖಕರು ತಿಂದರಂತೆ. ಅದರಿಂದ ಆದ ಪರಿಣಾಮ ಅವರಿಗೇ ಅಚ್ಚರಿ ತಂದಿತು. 'ನನಗೆ ಬಲಗಾಲು ಹಿಮ್ಮಡಿ ಅನೇಕ ದಿನಗಳಿಂದ ನೋಯುತ್ತಿತ್ತು. ಹೆಚ್ಚಿಗೆ ದೂರ ನಡೆದರೆ ಸಾಕು,ಕುಂಟಿಕೊಂಡೇ ನಡೆಯಬೇಕಿತ್ತು.ಇದರೊಡನೆ, ಈಚೆಗೆ ಹಿಮ್ಮಡಿ ಎಲುಬಿನ ಪಕ್ಕ ಒಂದು ದಪ್ಪ ಗಡ್ಡೆ ಎದ್ದಿತ್ತು.ಡಾಕ್ಟರು ಅದನ್ನು ಶಸ್ತ್ರ ಚಿಕಿತ್ಸೆ ಮಾಡಿ ತೆಗೆಯಬೇಕೆಂದು ಹೇಳಿದ್ದರು.ಆ ಗಡ್ಡೆ ಚೂರು ತಗೊಂಡು ತಿಂದ ಮೇಲೆ ಎರಡು ದಿನಕ್ಕೆ ನೋಡುತ್ತೇನೆ ಆ ಗಡ್ಡೆ ಎಲ್ಲಿತ್ತೆಂದೇ ಪತ್ತೆ ಮಾಡಲಾಗದಂತೆ ಮಂಗ ಮಾಯವಾಗಿತ್ತು. ಪರಿಸರದ ಬಗ್ಗೆ ಬರೆಯಬೇಕು ಎಂಬ ಆಸಕ್ತಿ ಇರುವ ಎಲ್ಲರೂ ಓದಲೇಬೇಕಾದ ಅಧ್ಯಾಯ 'ಕೆರೆಯ ದಡದಲ್ಲಿ'. ಅಲ್ಲಿ ಏನೇನು ನಡೆಯುತ್ತದೆ ಎಂಬುದನ್ನು ತೇಜಸ್ವಿಯವರು ಬಣ್ಣಿಸುವ ಪರಿ ಅನನ್ಯ. ಮುಖ್ಯವಾಗಿ ಒಂದು ಕಪ್ಪೆ, ಒಂದು ಆಮೆ ಮತ್ತು ಒಂದು ಕಾಡು ಹಂದಿ ಮರಿಯ ಆತ್ಮ ರಕ್ಷಣಾ ತಂತ್ರಗಳನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. ಅವರ ಸೂಕ್ಷ್ಮ ವೀಕ್ಷಣೆ, ಕಾಡುಪ್ರಾಣಿಗಳ ಬಗೆಗಿನ ಅಪಾರ ಆಸಕ್ತಿ. ಕಾಡಿನ ವಿದ್ಯಮಾನಗಳನ್ನು ತಿಳಿಯಲು ಗಂಟೆಗಟ್ಟಲೆ ಕಾಯುವ ತಾಳ್ಮೆ, ಪರಿಣಾಮಕಾರಿ ವಿಶ್ಲೇಷಣೆಯಿಂದಾಗಿ ದಕ್ಕುವ ಒಳನೋಟಗಳು ಮತ್ತು ಯಾವುದೇ ಅತಿರೇಕವಿಲ್ಲದೆ ಕಂಡದ್ದನ್ನು ಕಂಡಂತೆ ಬರಹಕ್ಕಿಳಿಸುವ ಶೈಲಿ ಇವೆಲ್ಲವೂ ಸೇರಿದಾಗ ಎಂತಹ ರಸಪಾಕ ಸಿದ್ದವಾಗುತ್ತದೆ ಎಂಬುದಕ್ಕೊಂದು ಅಪರೂಪದ ಉದಾಹರಣೆ ಈ ಅಧ್ಯಾಯ. ಕೊನೆಯ ಅಧ್ಯಾಯ 'ಅವಾಂತರದ ಸೀನಪ್ಪ'. ಗಾರೆ ಕೆಲಸ ಮಾಡುವವನೊಬ್ಬ ಸೃಷ್ಟಿಸುವ ಅವಾಂತರಗಳನ್ನು ತೆರೆದಿಡುತ್ತದೆ. ನಾವು 'ಹಳ್ಳಿ ಗುಗ್ಗುಗಳು' ಎಂದು ಭಾವಿಸುವ ಹಳ್ಳಿ ಜನರಲ್ಲಿರುವ ಚಾಲಾಕಿತನ ಶಾಲಾ ಕಾಲೇಜುಗಳಲ್ಲಿ ಕಲಿತು ಬಂದವರನ್ನೂ ಅವರು ಬೇಸ್ತು ಬೀಳಿಸುವ ಪರಿ; ಇವನು ಮೋಸ ಮಾಡುತ್ತಾನೆ ಎಂದು ತಿಳಿದವರನ್ನೂ ಮತ್ತೆ ಅವನ ವಂಚನೆಯ ಜಾಲದಲ್ಲಿ ಸಿಲುಕಿಸುವ ನಮೂನೆ ಇವನ್ನೆಲ್ಲ ಕಣ್ಣೆದುರೇ ನಡೆದಂತೆ ವಿವರಿಸುವ ಅಧ್ಯಾಯ ಇದು.ನಾವೆಲ್ಲ ನೋಡಿದರೂ ಕಾಣದ ನಮ್ಮ ಸುತ್ತಲಿನ ಬದುಕು– ಪರಿಸರದಲ್ಲೇ ಸೂಕ್ಷ್ಮ ವಿವರಗಳನ್ನು ಕಾಣುವ, ಅದರ ಮೂಲಕ ಅರಿವಿನ ಮಿಂಚನ್ನು ತೋರಿಸುವ ತೇಜಸ್ವಿಯವರ ಈ ಕತೆಗಳು ಕನ್ನಡಕ್ಕೆ ಹೊಸದು.

■■

ಪರಾಮರ್ಶನ ಗ್ರಂಥ

1. ಪರಿಸರದ ಕತೆ – ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ISSN: 2320-9941
ಪ್ರತಿಸ್ಪಂದ । Prathispandha

ಜೀವ ಸಂಭ್ರಮದ ನಡೆಗಳು: ಆಧುನಿಕೋತ್ತರ ಮಹಿಳಾ ಕಾದಂಬರಿಗಳ ವಿಶ್ಲೇಷಣೆ

● ಸರಸ್ವತಿ ಕೆ. ಬಿ.

ಮಾನವರ ಬದುಕಿನ ಬಗೆಬಗೆಯ ಸನ್ನಿವೇಶಗಳನ್ನು ಆಯ್ಕೆ ಅನುಸಾರ ಜೋಡಿಸಿ ನೋಡುವ ಕ್ರಮವು ಕಾದಂಬರಿಗಳ ಲಕ್ಷಣಗಳಾಗಿರುತ್ತವೆ. ಈ ಕ್ರಮದ ನೆಲೆಯಿಂದ ಸೃಷ್ಟಿಯಾಗುವ ಬದುಕಿನಂತಹ ಭ್ರಮೆಯು ಓದುಗರಲ್ಲಿ ಯಾವ ತರಹದ ಚಲನೆಯನ್ನು ತರಬಹುದೆಂಬ ಆಧಾರವನ್ನು ಅವಲಂಬಿಸಿ ಕೆಲವು ಕಾದಂಬರಿಗಳನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಕಾದಂಬರಿ ಪ್ರಕಾರವು ಪಾಶ್ಚಾತ್ಯರ ಕೊಡುಗೆ–ಯಾಗಿದೆ. ಇದು ಭಾರತೀಯರ ಕಥಾನಕಗಳಂತಲ್ಲ. ಮೌಖಿಕ ಕಥಾನಕಗಳಾಗಲಿ, ಪೌರಾಣಿಕ ಕಥಾನಕಗಳಾಗಲಿ, ಮಾನವರ ಭಾವ ಪ್ರಪಂಚಕ್ಕೆ, ಚಂಚಲ ಮನಸ್ಸಿನ ಭಾವ–ಆವೇಗಗಳ ವಿಪರೀತಗಳಿಗೆ ಮಾನ್ಯತೆ ನೀಡಿರುವುದಿಲ್ಲ. ಕಥಾನಕಗಳಿಗೂ, ಕಾದಂಬರಿಗಳಿಗೂ ಇರುವ ವ್ಯತ್ಯಾಸಗಳನ್ನು ಅನ್ವೇಷಿಸುವುದೆಂದರೆ ನಮ್ಮ ಸಾಹಿತ್ಯ ಅಭಿವ್ಯಕ್ತಿಗಳಲ್ಲಿ ಮಾನಸಿಕ ತುಮುಲಗಳಿಂದ ಆಗುವ ಚಿತ್ತ ಪ್ರವೃತ್ತಿಗಳ ಹರಿವನ್ನು ಎಷ್ಟರಮಟ್ಟಿಗೆ ದಾಖಲಿಸುವ ಪರಿಪಾಠ ಬೆಳೆದಿದೆ ಎಂದು ಗಮನಿಸುವುದಾಗಿದೆ.

ಈ ಚಂಚಲ ಚಿತ್ತ ಪ್ರವೃತ್ತಿಗಳನ್ನು ಜೀವ ಸಂಭ್ರಮಗಳೆಂದು ಭ್ರಮಿಸಲಾಗದು. ಕಥಾನಕಗಳು ಸನ್ನಿವೇಶಗಳನ್ನು ಹಾಗು ಅದನ್ನು ಉಂಟುಮಾಡುವ ಕಾರ್ಯ–ಕಾರಣಗಳನಷ್ಟೇ ಮುಂದಿಡುತ್ತಾ ಓದುವವರ/ಕೇಳುವವರ/ನೋಡುವವರ ಕಲ್ಪನೆಯ ವಿಸ್ತಾರ–ಕ್ಕೆ ಅನಿಯಮಿತ ಅವಕಾಶಗಳನ್ನು ಕಲ್ಪಸುತ್ತವೆ. ಕಾಲ–ದೇಶಗಳ ವ್ಯಾಪ್ತಿಯನ್ನು ಮೀರಿ, ಸಾರ್ವತ್ರಿಕವಾಗಿ ನಿಲ್ಲುವ ಸತ್ಯಗಳನ್ನು ಕಲ್ಪನೆಯ ಆಚೆಗೂ ನೂಕುತ್ತವೆ. ಮಹಾಕಾವ್ಯಗಳಿಗೆ ದಕ್ಕುವ ಈ ಸಬ್ಲಿಮಿಟಿ ಕಾದಂಬರಿಗಳಿಗೆ ಒದಗಲಾರದು. ಕಾದಂಬರಿ ಪ್ರಕಾರವು ಕಾರ್ಯ–

ವಿಳಾಸ: ಸರಸ್ವತಿ ಕೆ.ಬಿ
ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು

ಕಾರಣ–ಸನ್ನಿವೇಶಗಳನ್ನು ಚಿಂತನೆಯ ಮೂಸೆಯಲ್ಲಿ ವಿಶ್ಲೇಷಿಸಿ, ವಿವಿಧ ಬಗೆಯ ಐಡಿಯಾಲಜಿಗಳ ದೃಷ್ಟಿಕೋನದಿಂದ ತೀರ್ಮಾನಕ್ಕೆ ಬರುತ್ತವೆ. ಈ ಕಾರಣದಿಂದಾಗಿಯೇ ಓದುಗನ ಕಾಲ್ಪನಿಕ ವಿಸ್ತಾರಕ್ಕೆ ಅಡ್ಡಿಯಾಗುವುದಲ್ಲದೆ, ಅರ್ಥ ಮಿತಿಯು ಸೀಮಿತವಾಗುತ್ತದೆ.

ಸಾಮಾನ್ಯರ ವ್ಯಥೆ–ಕತೆಗಳಿಗೆ ಬೆಲೆಯಿಲ್ಲವೆಂದಲ್ಲ. ಆದರೆ ನಮ್ಮೆಲ್ಲಾ ಕತೆ–ವ್ಯಥೆಗಳಿಗೆ ಭಾವನಾತ್ಮಕವಾಗಿ ಉತ್ಪ್ರೇಕ್ಷಿತ ಚಿಂತನೆಗಳಿಂದ ಸ್ಪಂದಿಸುವುದರಿಂದ ಸಮಸ್ಯೆ ಬಗೆಹರಿಯಲಾರದು.. ನಾವು ಮಾಡುವ ಕಾಯಕದಲ್ಲಿನ ತನ್ಮಯತೆಯ ಸ್ಥಿತಿಗೆ ನೋವು–ನಲಿವಿನ ಸೋಂಕಿರುವುದಿಲ್ಲ. ಇಂತಹ ಜೀವ ನಿಷ್ಠೆಯನ್ನು, ಸ್ವಯಂ ಭಾಗವಹಿಸುವ ತನ್ಮಯತೆಯಲ್ಲಿರುವ ಸಾರ್ಥಕತೆಯನ್ನು ಆವಾಹಿಸಿಕೊಂಡಿರುವ ಪಾತ್ರಗಳು, ಅವರನ್ನು ಆವರಿಸಿರುವ ಸನ್ನಿವೇಶಗಳನ್ನು ದಾಖಲಿಸುವ ಪ್ರಯತ್ನಗಳು ಸಹಜವಾಗಿಯೇ ಅರಿಮೆಯನ್ನು, ಮನೋಲಾಸವನ್ನು ನೀಡುತ್ತವೆ.

ಸ್ತ್ರೀ ಸಾಹಿತ್ಯ ಪರಂಪರೆಯ ಕಾಲಘಟ್ಟದಲ್ಲಿ ಬರುವ ಹಂತಗಳನ್ನು ಅನುಕ್ರಮವಾಗಿ ರ‍್ಯಾಡಿಕಲ್ ಹಂತ, ಪ್ರತಿನಿಧಿಕರಣ, ಪ್ರತಿರೋಧ ಮತ್ತು ಸಶಕ್ತೀಕರಣ ಹಂತಗಳೆಂದು ಅಧ್ಯಯನ ಕ್ರಮಕ್ಕಾಗಿ ವಿಂಗಡಿಸಿಕೊಂಡು ಸಾಹಿತ್ಯಕೃತಿಗಳನ್ನು ವಿಶ್ಲೇಷಿಸುವ ಪರಿಯನ್ನು ಪಕ್ಕಕಿಟ್ಟು ಅವುಗಳನ್ನು ಕೇವಲ ಜೀವಶಕ್ತಿಯನ್ನು ಪ್ರತಿಫಲಿಸುವ ನೆಲೆಗಳನ್ನಾಗಿ ನೋಡುವ ಕ್ರಮವು ಆಧುನಿಕೋತ್ತರ ಹಂತದಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ.

ಪ್ರಸ್ತುತ ಕಾಲಘಟ್ಟದ ಮಹಿಳೆಯರ ಮೇಲೆ ನಡೆಯುತ್ತಿರುವ ಅಮಾನವೀಯ ಕ್ರೌರ್ಯದ ಹಿನ್ನಲೆಯಲ್ಲಿ ಕಾದಂಬರಿಗಳ ಮುಖಾಂತರ ಅಭಿವ್ಯಕ್ತವಾಗುತ್ತಿರುವ ಲೇಖಕಿಯರ ಮನಸ್ತಿತಿಗಳನ್ನು ಮತ್ತು ಸಾಹಿತ್ಯಾಭಿವ್ಯಕ್ತಿಯು ವಾಸ್ತವವನ್ನು ಅರ್ಥೈಸಿಕೊಳ್ಳುತ್ತಿರುವ ಪರಿಯನ್ನು ಅರಿಯುವ ಕ್ರಮವಾಗಿ 2000 ರಿಂದ 2020ರ ದಶಕದ ಅವಧಿಯಲ್ಲಿ ರಚಿತವಾಗಿರುವ ವಿವಿಧ ಲೇಖಕಿಯರ 20ಕ್ಕೂ ಹೆಚ್ಚು ಕಾದಂಬರಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಸ್ತ್ರೀ ತತ್ವ ಮತ್ತು ಲೈಂಗಿಕತೆಯನ್ನು ಇದಿರು ಗಾಣುವ ಮತ್ತು ಅವುಗಳ ಸಂಘರ್ಷವನ್ನು ಎದುರಿಸುವ ಕ್ರಮಗಳನ್ನು ಪ್ರಾಚೀನ ಬದುಕಿನಲ್ಲಿ, ರಾಮಾಯಣ, ಮಹಾಭಾರತದ ಮುಖ್ಯ ಪಾತ್ರಗಳಲ್ಲಿ ಹುಡುಕುವಂತಿರುವ ಈ ಪ್ರಯತ್ನಗಳು ಏನನ್ನು ಹೇಳುತ್ತಿವೆ?

ಸ್ತ್ರೀ ಸ್ವ–ತಂತ್ರಗಳನ್ನು ಅನ್ವೇಷಿಸುವ ಭಿನ್ನ ಕ್ರಮಗಳನ್ನು ಹುಡುಕುವ ಪ್ರಯತ್ನವಾಗಿ ಈ ಕಾದಂಬರಿಗಳನ್ನು ಓದಲಾಗಿದೆ. ಆಧುನಿಕ ಬದುಕಿನಲ್ಲಿ ತನ್ನ ಸ್ವಯತ್ತತೆಯನ್ನು ಗುರುತಿಸಲು, ತನ್ನ ಅಸ್ಮಿತೆಯನ್ನು ಬಲಪಡಿಸಿಕೊಳ್ಳಲು ಗತದ ಮಹಿಳೆಯರ ಬದುಕುಗಳ ಆಸರೆಯನ್ನು ಬಯಸುವ ಈ ಯತ್ನಗಳು ಯಾಕೆ?

ಅತಿಯಾದ ಮಾನವ ಕೇಂದ್ರಿತ ಬದುಕು, ಮಾನಸಿಕ ಚಿಂತೆಗಳನ್ನಾಧರಿಸಿದ ನೋಡುವ ಕ್ರಮ, ಪ್ರಾಪಂಚಿಕ ವ್ಯವಹಾರಗಳನ್ನೇ ಜೀವನ ಕ್ರಮಗಳೆಂದು ಭ್ರಮಿಸುವ ಕತೆಗಳಿಗಿಂತ ಭಿನ್ನವಾದ ಜೀವ ಆವಾಹನೆಯ ವ್ಯವಸ್ಥೆಗಳಿವೆ ಮತ್ತು ಅವು ಸೃಷ್ಟಿ ಕಾರ್ಯದ ಸಂಭ್ರಮದಲ್ಲಿ ಸದಾ ಹಸಿರಾಗಿವೆ ಎಂಬುದನ್ನು ಗ್ರಹಿಸಲು ನಮಗೆ ಸಾಧ್ಯವಾಗುತ್ತಿಲ್ಲ.

ಆಧುನಿಕೋತ್ತರ ಘಟ್ಟದಲ್ಲಿ ಬದುಕಿನ ಎಲ್ಲಾ ಆಯಾಮಗಳನ್ನೂ ಅನುಭವಿಸಿ ಅರಿಯಬೇಕೆಂಬ ಕುತೂಹಲ ಹೆಚ್ಚಾದಂತೆಲ್ಲಾ ಕಾದಂಬರಿಯ ವಸ್ತುಗಳೂ ಸಹ ವಿಭಿನ್ನತೆಯನ್ನು ಪಡೆದುಕೊಂಡಿದೆ. ಸಲಿಂಗಿಗಳ ಮನೋಭಿಲಾಷೆಗಳು(ಪುನರಪಿ), ಭಯೋತ್ಪಾದಕರ ಕೃತ್ಯದಿಂದ ಹತ್ತಿರದವರನ್ನು ಕಳೆದುಕೊಂಡ ವಿಧವೆಯ ಅಳಲು, ಸಾಂಗತ್ಯಕ್ಕಾಗಿ ಹಾತೊರೆಯುವ ಕಾಮರಹಿತ ಆಕರ್ಷಣೆ (ದ್ವಿತ್ವ), ಪ್ರಜ್ಞಾಪ್ರವಾಹದ ದಾಖಲೆಯಂತಹ ನವೀನ ಪ್ರಯೋಗಗಳು ಮಹಿಳಾ ಕಾದಂಬರಿಯ ವ್ಯಾಪ್ತಿಯನ್ನು ಹಿಗ್ಗಿಸಿವೆ. ಅಂತೆಯೇ ಮರೆಯಾಗುತ್ತಿರುವ ಸಂಪ್ರದಾಯಿಕ ಆಚರಣೆಗಳನ್ನು ಅವಿರುವಂತೆಯೇ ಉಳಿಸಿಕೊಳ್ಳಲು ಬಲವಾದ ಕಾರಣ ಗೊತ್ತಿಲ್ಲದೆ, ಅವುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಮರು–ಸಂರಚನೆ ಮಾಡಿ ಹೊಸ ಪೀಳಿಗೆಗೆ ಅನ್ವಯಿಸಬಹುದಾದ ಕಲೆಗಾರಿಕೆ ಅಥವಾ ಜೀವನ ಅನುಭವದ ಕೊರತೆಯನ್ನೂ ನಾವು ಕೃಷ್ಣ ಮುದ್ರಿಕೆಯಂತಹ ಕಾದಂಬರಿಗಳಲ್ಲಿ ಗಮನಿಸಬಹುದಾಗಿದೆ. ಸಾಂಸ್ಕೃತಿಕ ಬೇರುಗಳ ಹರಿವಿನ ಜೊತೆಗೆ ಸಾಗಿ ಸತ್ಯಾಸತ್ಯಾತೆಗಳ ಅನ್ವೇಷಣೆಗಳಾಗದೆ, ಕೇವಲ ರೂಪಕಗಳ ಹಂತದಲ್ಲಿಯೇ ನಿಂತುಬಿಡುವುದು ಬಾಲಿಶವೆನ್ನಿಸುತ್ತದೆ.

ಅಸ್ಮಿತೆಯು ಕೇವಲ ಸಬಲೀಕರಣದಿಂದ ದೊರೆಯಲಾರದು. ಅಸ್ಮಿತೆಗಾಗಿ ಮಾತ್ರವೇ ನಡೆಯುವ ಮಹಿಳಾ ಹೋರಾಟಗಳು ಬಹಳ ದೂರ ಸಾಗಲಾರವು. ವಾಸ್ತವದ ಸಂಘರ್ಷಗಳನ್ನು ಅಷ್ಟೇ ಅಲ್ಲದೆ, ಅಸ್ತಿತ್ವವಾದಿ ಸಂಘರ್ಷಗಳನ್ನು ಎದುರಾಗಿಸಿಕೊಂಡಾಗ ಮಾತ್ರವೇ ಸ್ತ್ರೀ ತತ್ವದ ರೂಪುರೇಷೆಗಳ ಸ್ಪಷ್ಟ ಚಿತ್ರಣ ದೊರೆಯುವುದು. ನಾಗವೇಣಿಯವರ “ಗಾಂಧಿ ಬಂದ” ಕೃತಿಯಲ್ಲಿನ ಬದುಕಿನ ಸನ್ನಿವೇಶಗಳ ವೈವಿಧ್ಯತೆ, ಗಂಡು–ಹೆಣ್ಣುಗಳು ಸಮಾನ ನೆಲೆಯಲ್ಲಿ ವ್ಯವಹರಿಸುವ ಪರಿ, ಸಂಬಂಧಿತ ಸಂಸ್ಕೃತಿಗೆ ನಿಖರವಾಗಿ ಅನ್ವಯವಾಗುವ ಆಚರಣೆಗಳ

ಅನಾವರಣ, ಕಥನ ಶೈಲಿಯನ್ನು ಗಟ್ಟಿಗೊಳಿಸುವುದಲ್ಲದೆ, ಸ್ತ್ರೀ–ತನವೆಂಬುದು ಕಾದಂಬರಿಯ ಒಳಗೆಲ್ಲಾ ಹದವಾಗಿ ಮಿಳಿತವಾಗಿದೆ. ಈ ತರಹ ಸ್ತ್ರೀ–ತನವೆಂಬುದು ಬದುಕಿನ ಹದ ಆಗುವ ಸಂದರ್ಭಗಳು ಕೇವಲ ಕೆಲವರ ಸಾಹಿತ್ಯದಲ್ಲಿ ಅಭಿವ್ಯಕ್ತವಾಗುವುದನ್ನು ಕಾಣಬಹುದು. ಪರಂಪರೆ, ಪುರುಷಪ್ರಧಾನತೆ, ಆಧುನಿಕ ಜೀವನಶೈಲಿ, ವಿವಾಹೇತರ ಸಂಬಂಧಗಳನ್ನು ನಿಭಾಯಿಸುವ ಕ್ಲಿಷ್ಟತೆ, ವೃತ್ತಿಕಾರಣ ಶೋಷಣೆಗಳು, ಅಸ್ಮಿತೆಗಾಗಿ ಹೋರಾಟಗಳು, ಆರ್ಥಿಕ ಸಬಲತೆಯಂತಹ ಕಥಾವಸ್ತುಗಳನ್ನೊಳಗೊಂಡ ಅನೇಕ ಕಾದಂಬರಿಗಳು ನಮ್ಮ ನಡುವೆ ಇವೆ. ಮೊದಮೊದಲಿಗೆ ಇವೆಲ್ಲವೂ ಮಹಿಳೆಯರ ವಿಮೋಚನೆಗಾಗಿಯೇ ಇವೆ ಎಂಬಂತೆ ಕಂಡರೂ, ಕಾಲಘಟ್ಟದಲ್ಲಿ ಅವೇ ಸನ್ನಿವೇಶಗಳು ವಿಷಜಾಲಗಳಾಗಿ, ಕೌರ್ಯದ ಕೂಪವಾಗಿ ಬದಲಾಗುವುದನ್ನು ಗಮನಿಸಿದ್ದೇವೆ. ಆಯ್ಕೆಯ ಅವಕಾಶಗಳೇ ಮಾರಣಾಂತಿಕವೆನ್ನಿಸಿವೆ. ತನ್ನ ಸ್ತ್ರೀ–ತನವನ್ನು ತನ್ನದೇ ಸ್ವ–ತಂತ್ರವಾಗಿ ಬಳಸಿಕೊಳ್ಳುವ, ಪ್ರಸ್ತುತಪಡಿಸುವ, ಜೀವದ ಹರಿವೇ ತಾವಾಗುವ ಸ್ವ–ಇಚ್ಛೆ ಮತ್ತು ವೈಯಕ್ತಿಕತೆಯನ್ನು ಉಳಿಸಿಕೊಳ್ಳುವ ಪಾತ್ರಗಳು ಮತ್ತು ಸನ್ನಿವೇಶಗಳು ಮಾತ್ರವೇ ಜೀವ ವಿವೇಕವನ್ನು ಉದಾಹರಿಸಬಲ್ಲವು. ಇದನ್ನು ತಕ್ಕಮಟ್ಟಿಗೆ ವಚನಕಾರ್ತಿಯರು ಸಾಧಿಸಿದರು. ಹಾಗಾಗಿಯೇ ಅಲ್ಲಿ ನೋವಿದ್ದರೂ ನರಳಿಕೆಯಿಲ್ಲ; ದುಖಃವಿದ್ದರೂ ಹತಾಶೆಯಿಲ್ಲ; ವ್ಯವಸ್ಥೆಯ ಕೌರ್ಯವನ್ನು ಮೀರಿ ಜೀವ ಪ್ರಭೆ ಬೆಳಗಲು ಸಾಧ್ಯವಾಯಿತು.

ರ್‍ಯಾಡಿಕಲ್ ಸ್ತ್ರೀವಾದವನ್ನೂ ಒಳಗೊಂಡಂತೆ ಭಿನ್ನ ಭಿನ್ನ ಸ್ತ್ರೀವಾದಗಳು ಮುಂದಿಡುವ ವಿಮೋಚನೆಯು ಅಸ್ತಿತ್ವದ ನೆಲೆಗಳನ್ನು ನಿಭಾಯಿಸುವ ಪರಿಹಾರಗಳನ್ನು ನೀಡಿರುವುದಿಲ್ಲ. ಪ್ರಸ್ತುತ ದಶಕಗಳ ಕಾದಂಬರಿಗಳು ವೇದಕಾಲೀನ ಮಹಿಳೆಯರ ಸನ್ನಿವೇಶಗಳನ್ನು ಮನಃಶಾಸ್ತ್ರೀಯವಾಗಿ ಪರಾಮರ್ಶಿಸಿ, ಇಂದಿನ ಸಮಸ್ಯೆಗಳಿಗೆ ಈ ಕ್ರಮದಲ್ಲಿ ಪರಿಹಾರವನ್ನು ಹುಡುಕುತ್ತಿರುವುದು ಎಷ್ಟರಮಟ್ಟಿಗೆ ಸಮಂಜಸವೆಂಬುದನ್ನು ನಾನರಿಯೆ. ಯಶೋದರೆಯ ಸಮಸ್ಯೆಯನ್ನು ಆಧುನಿಕ ಭಾರತೀಯ ಮಹಿಳೆಯ ಸಮಸ್ಯೆಯೊಂದಿಗೆ ಸಮೀಕರಿಸುವುದು ಥಿಟಣಜಥಣಣ–ಚಿಟ ಟಚಿಳಿಢ ಯಿಂದ ಆಗುವ ಲೋಪಗಳಿಗೆ ಈಡಾಗುತ್ತದೆ. ಮೇಲುನೋಟಕ್ಕೆ ಯಶೋಧರೆಯು ಸಿದಾರ್ಥನ ಸಾಂಗತ್ಯ ಮತ್ತು ಗಂಡನಾಗಿ ನಿಭಾಯಿಸಬೇಕಾದ ಜವಾಬ್ದಾರಿಯಿಂದ ಹೊರಮುಖನಾದನೆಂದು ತೋರಿದರೂ, ಅಸ್ತಿತ್ವದ ಸತ್ಯಗಳನ್ನು ಅನ್ವೇಷಿಸುವ ಮೂಲಕ ಸ್ತ್ರೀ ಸಹಜವಾದ ಜೀವಂತಿಕೆಯೇ ತಾನಾಗಬೇಕೆಂದು ಹೊರಟವನನ್ನು ಯಾವ ಸ್ತ್ರೀ ತಾನೆ ಹೋಗಗೊಡಲಾರಳು ಎನಿಸುತ್ತದೆ. ಇಂತಹ ತ್ಯಾಗದ ಸ್ವರೂಪವನ್ನು, ಮಾನವತೆಗೆ ಅದರಿಂದ ಆಗುವ ಉಪಯುಕ್ತತೆಯ ಲಕ್ಷಣಗಳನ್ನು ನಾವು ಮರೆಯಲಾಗದು. ಯಶೋಧರೆ ಬುದ್ಧನ ಬಳಿಗೆ ಸೇರುವ ವೇಳೆಗೆ ಅವಳ ರಾಜ್ಯ ತೀವ್ರವಾದ ಅಂತರಿಕ ಕಲಹಗಳಿಂದ ಭಾದಿತವಾಗಿತ್ತು. ಇಂತಹ ವ್ಯವಸ್ಥೆಯು ತರುವ ನೋವನ್ನು ನಿಭಾಯಿಸುವ ರಹಸ್ಯ ಅರಿತ ಬುದ್ಧನ ತಿಳುವಳಿಕೆ ಸ್ತ್ರೀ–ತನದ ಲಕ್ಷಣವೇ ಆಗಿದೆ.

ರೇಖಾ ಕಾಖಂಡಕಿ ಅವರ **“ವೈವಸ್ವತ”** ಕಾದಂಬರಿಯಲ್ಲಿ ಬರುವ ಮೂರು ತಲೆಮಾರುಗಳ ಕತೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಹೇಗೆ ಕುಲ ಮೂಲದ ಸಾರವಾಗಿದ್ದ ಸಾಧ್ಯತೆಗಳು ಕ್ರಮೇಣ ಅವನತಿ ಹೊಂದಿ, ಕೇವಲ ಭೋಗಾಸಕ್ತ ಜೀವನವನ್ನೇ ಬದುಕಿನ ಕ್ರಮವಾಗಿ ಕಟ್ಟಿಕೊಳ್ಳುವ ಸ್ಥಿತಿ ಬಂದಿರುವುದಕ್ಕೆ ಸ್ತ್ರೀ ಅಸ್ತಿತ್ವದ ನೆಲೆಯಲ್ಲಿ ಆಗುತ್ತಿರುವ ಪಲ್ಲಟಗಳೇ ಕಾರಣ ಎಂದು ಅರ್ಥೈಸಬಹುದು. ಸತ್ಯಪ್ಪ ನಂತಹ ಅರಿವಿನ ಜೀವಗಳು ಸಾಮಾಜಿಕ ವಲಯಗಳಿಂದ ಕಣ್ಮರೆಯಾಗುವುದಕ್ಕೂ ಸಮುದಾಯಗಳು ಮಾನವ–ಮಾನವರ ನಡುವಿನ ಸಂಬಂಧಗಳನ್ನು ನಿಭಾಯಿಸಲು ಲೂಟಿ, ಹಗೆತನ, ಸೇಡು, ಲೋಲುಪತೆ, ಕೊಲೆ, ಅತ್ಯಾಚಾರದಂತಹ ಪ್ರವೃತ್ತಿಗಳನ್ನು ಆಧಾರವಾಗಿಸಿಕೊಂಡಿರುವುದಕ್ಕೂ ಸಂಬಂಧ ಜೋಡಿಸಬಹುದು. ಪರಕೀಯ ಆಕ್ರಮಣಕಾರರ ಮತ್ತು ಬ್ರಿಟಿಷರ ಆಳ್ವಿಕೆಯಲ್ಲಿ ಸಮುದಾಯಗಳ ಮೇಲೆ ಆಗುವ ದಬ್ಬಾಳಿಕೆಗಳು ಉಂಟುಮಾಡಿದ ಅಸ್ತಿರತೆಗಳು ಹಾಗು ಅಸುರಕ್ಷತೆಗಳು ಭಾರತೀಯರ ಸುಪ್ತಪ್ರಜ್ಞೆಯಲ್ಲಿ ನಿರಾಯಾಸವಾಗಿ ನೆಲೆನಿಂತಂತೆ ಕಾಣುತ್ತವೆ. ಇದಕ್ಕೆ ಪೂರಕವಾಗಿ ಭಾರತೀಯ ಸಮಾಜದ ಭಾಗವೇ ಆಗಿಹೋಗಿರುವ ಬಡತನ, ಜಾತಿ ಸಂಬಂಧಿತ ದುರುಪಯೋಗಗಳು, ಸ್ತ್ರೀ–ತನದ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಲಾರವು. ನಾಗರೀಕತೆಗಳ ವಿಕಸನವೆಂಬುದು ಜೈವಿಕ ಪ್ರಕ್ರಿಯೆ; ಮಾನವ ಸಂಬಂಧಗಳನ್ನು ನಿಭಾಯಿಸಲು ಬೇಕಾದ ತಾಳ್ಮೆ ಮತ್ತು ಸೃಜನಶೀಲತೆಯ ಅವನತಿಯೊಂದಿಗೆ ಈ ಜೈವಿಕ ಬೆಳವಣಿಗೆಯು ಅವಸಾನವಾಗುತ್ತದೆ.

ಜಗತ್ತಿನಲ್ಲಿರುವ ನೋವನ್ನು ನಿಭಾಯಿಸಲು ಬೇಕಾದ ಮಾನಸಿಕ ಸಿದ್ಧತೆಗಳನ್ನು ತಕ್ಕಮಟ್ಟಿಗೆ ಜನಪದರ ಹಾಡು–ಹಸೆಗಳಲ್ಲಿ, ದಿನದಿನದ ಬದುಕಿನ ತನ್ಮಯತೆಯಲ್ಲಿ, ಕಾಣಬಹುದು. ಈ ಒಳಗೊಳ್ಳುವಿಕೆ ಮತ್ತು ತನ್ಮಯತೆಯು ಗ್ರಾಮೀಣ ಜೀವಲಯವೇ ಆಗಿದೆ. ಈ ಸತ್ಯವನ್ನು ಅನ್ವೇಷಿಸುವ ಯಾವುದೇ ಹೆಜ್ಜೆಯನ್ನು ಆಧುನಿಕ ಕಾದಂಬರಿಗಳು

ಗಮನಿಸದೇ ಇರುವುದು ಸಮಂಜಸವಲ್ಲ. ಆರ್ ಸುನಂದಮ್ಮ ಅವರ "ದ್ವಿತ್ವ" ಕಾದಂಬರಿಯಲ್ಲಿ ರೈತಾಪಿ ಮಹಿಳೆಯರು ತಮ್ಮೆಲ್ಲಾ ಸಾಂಸ್ಕೃತಿಕ ಜೀವ ಸೆಲೆಯನ್ನು, ಹಾಡು–ಹಸೆಗಳನ್ನು ಕಳೆದುಕೊಂಡಂತೆ ಬರಡಾಗಿದ್ದಾರೆ.

ನೇಮಿಚಂದ್ರರ "ಯಾದ್‌ವಶೇಮ್" ಕಾದಂಬರಿಯು ಹುಡುಕಾಟವನ್ನು ತನ್ನ ಕಥಾನಕದ ತಂತ್ರವನ್ನಾಗಿಸಿಕೊಂಡಿದೆ. ಜೀವಜಗತ್ತಿನ ಏಳು–ಬೀಳಿನಂತೆಯೇ ಕಾದಂಬರಿಯಲ್ಲಿ ಕಳೆದುಹೋದ ಸಂಬಂಧದ ಹುಡುಕಾಟವು ವಾಸ್ತವದ ನೆಲೆಯಲ್ಲಿರುವುದರಿಂದ ಸಂಭ್ರಮವು ಜೀವಂತವಾಗಿದೆ. ಹಿಟ್ಲರ್ ನ ಕ್ರೌರ್ಯ ಮತ್ತು ಸಾವಿನ ನೆರಳು ಹೆಜ್ಜೆ ಹೆಜ್ಜೆಗೆ ಬೀಳುತಿದ್ದರೂ ಸಹ, ಜೀವದ ಬಯಕೆ ಬಿರುಸಾಗಿರುವುದರಿಂದ, ನೆನಪಿನ ಹಂಬಲ ಸತ್ಯವಾಗಿದೆ. ಬದುಕು–ಸಾವಿನ ನಿರರ್ಥಕತೆಯ ನಡುವೆಯೂ ಪ್ರಶ್ನೆಗಳೊಂದಿಗೆ ಬದುಕುವ ಕ್ರಮವು ನಿಧನಗತಿಯಲ್ಲಿ ನೋವಿನ ಸ್ವರೂಪವನ್ನು ಅರಿಯುವ ಮತ್ತು ಅದರೊಂದಿಗೆ ಸಹಬಾಳ್ವೆ ಮಾಡುವ ತಂತ್ರಗಾರಿಕೆಯನ್ನು ಕಲಿಸಿಕೊಡುವುದಲ್ಲದೆ, ಜೀವವಿರೋಧಿ ವ್ಯವಸ್ಥೆಗಳನ್ನು ಹೇಗೆಲ್ಲಾ ನಿಭಾಯಿಸಬಹುದೆಂಬ ಪ್ರಯೋಗವಾಗಿರುವುದರಿಂದ ಆಶಾದಾಯಕವೆನ್ನಿಸುತ್ತದೆ. ಬರವಣಿಗೆಯ/ ಸೃಜನಶೀಲತೆಯಲ್ಲಿನ ಜೀವಸತ್ವವನ್ನು ಬಿಂಬಿಸಲು ಯಶಸ್ವಿಯಾಗಿದೆ. ಸಾವು–ಬದುಕಿನ ಸತ್ಯಗಳಿಗೆ ಉತ್ತರಗಳಿರುವುದಿಲ್ಲ; ಆದರೆ ಅವುಗಳೊಂದಿಗೆ, ಅದರೆಲ್ಲಾ ನೋವು–ನಲಿವಿನೊಂದಿಗೆ ಸಹಚರಿಸಲು ಬಯಸುವ ಆಯ್ಕೆ ನಮ್ಮದೇ ಆಗಿರಬೇಕು ಅಷ್ಟೇ.

ಈ ಅಧ್ಯಯನದಲ್ಲಿ ಉಲ್ಲೇಖಿಸಿರುವ ಕಾದಂಬರಿಗಳು 2000ರಿಂದ 2020ರ ನಡುವೆ ಪ್ರಕಟಗೊಂಡಿವೆ:

ಯು.ವಿ ತಾರಿಣಿರಾವ್ ಅವರ ಕರ್ಣನ ಜೀವನ ವೃತಾಂತವನ್ನು ನಿರೂಪಿಸುವ "ಕಾನೀನ", ದ್ರೌಪದಿಯ ಜೀವನ ಕತೆಯನ್ನೊಳಗೊಂಡ ಎಂ ಎಸ್ ವೇದ ಅವರ "ಜಯ", ಸಿದಾರ್ಥ ಬುದ್ಧನ ಅಗಲಿಕೆಯಿಂದ ಕಂಗೆಟ್ಟ ಪತ್ನಿ ಯಶೋಧರೆಯ ತ್ಯಾಗ ಮತ್ತು ಪ್ರಕ್ಷುಬ್ಧತೆಯನ್ನು ವಿವರಿಸುವ ಎಸ್.ವಿ ಪ್ರಭಾವತಿ ಅವರ "ಯಶೋಧರಾ", ಹೆಣ್ಣಿನ ಫಲವಂತಿಕೆಯನ್ನು ಶೋಷಿಸುವ ಎಂ ಎಸ್ ವೇದ ಅವರ "ಕಪ್ಪು ಕಿವಿಯ ಬಿಳಿ ಕುದುರೆಗಳು", ಕಲಿಕೆಯಿಂದ ಸಬಲರಾಗುವ ಮಹಿಳೆಯರ ವಸ್ತುವಿರುವ ಸ. ಉಷಾ ರಚಿತ "ಕಸೂತಿ", ಸಲಿಂಗ ಪ್ರೇಮಿಗಳ ಪ್ರೇಮ ಕಥನ, ಕಾವ್ಯ ಕಡಮೆ ನಾಗರಕಟ್ಟೆ ಅವರ "ಪುನರಪಿ", ರೇಖಾ ಕಾಖಂಡಕಿ ಅವರ ಸ್ವತಂತ್ರಪೂರ್ವ ಭಾರತದ ವಿವಿಧ ಆಳ್ವಿಕೆಗಳ ಹಿನ್ನಲೆಯಲ್ಲಿ ಮೂರು ತಲೆಮಾರುಗಳ ಬದುಕಿನ ಏಳು–ಬೀಳನ್ನು ಚಿತ್ರಿಸುವ "ವೈವಸ್ವತ" ಮತ್ತು ಆಧುನಿಕ ನಗರ ಜೀವನದಲ್ಲಿನ ಸಂಬಂಧಗಳನ್ನು ಚಿತ್ರಿಸುವ "ತ್ರಸ್ಥ", ಸುನಂದ ಪ್ರಕಾಶ ಕಡಮೆ ಅವರ ಮಹಿಳೆಯರ ಹೊಂದಾಣಿಕೆಯ ಮಹತ್ವವನ್ನು ಸಾರುವ "ಬರೀ ಎರಡು ರೆಕ್ಕೆ", ಹದಿಹರೆಯದ ಹುಡುಗಿಯರ ಲೈಂಗಿಕ ಬೆಳವಣಿಗೆಯ ಹಂತದಲ್ಲಿನ ಎಡರು–ತೊಡರುಗಳನ್ನು ಅನ್ವೇಷಿಸುವ ಜಾನಕಿ ಸುಂದರೇಶ್ ಅವರ "ಗೌರಿ", ತನಿಷ್ಟದ ಹುಡುಗನ ಆಯ್ಕೆಯ ಶಹನಾಝ್ ಎಂ ಅವರ "ಆಸರೆ", ಮಮ್ತಾಜ್ ಬೇಗಮ್ ಅ ರ ಪ್ರೇಮ ಕಥನ "ವರ್ತುಲ", ಸಂಬಂಧಗಳ ಅಸ್ಥಿರತೆ ಮತ್ತು ದಮನ ಪ್ರವೃತ್ತಿಗಳಿಂದ ಉಂಟಾಗುವ ಮಾನಸಿಕ ಅಸ್ವಸ್ಥತೆಯನ್ನು ಬಿಂಬಿಸುವ ಮಿತ್ರಾ ವೆಂಕಟ್ರಾಜ ಅವರ "ಪಾಚಿ ಕಟ್ಟಿದ ಪಾಗಾರ", ಸಂಬಂಧಗಳ ಬೇರುಗಳನ್ನು ಹುಡುಕುತ್ತಲೇ ಮಾನವ ಕ್ರೌರ್ಯದ ಕೇಡುಗಳನ್ನು ಅನಾವರಣ ಗೊಳಿಸುವ ನೇಮಿಚಂದ್ರರ "ಯಾದ್ ವಶೇಮ್", ವಿವಾಹೇತರ ಸಂಬಂಧಗಳ ಗೋಜಲುಗಳನ್ನು ಬಿಡಿಸಿಕೊಳ್ಳುವ ಪ್ರಯತ್ನಿಸುವ ಸುನಂದ ಪ್ರಕಾಶ್ ಕಡಮೆ ಅವರ "ದೋಣಿ ನಡೆಸೋ ಹುಟ್ಟು", ಕಾಡುಗೊಲ್ಲ ಸಮಾಜದ ಏಳು–ಬೀಳು, ಸಶಕ್ತತೆಯ ಸಾಧ್ಯತೆಗಳನ್ನು ಚಿತ್ರಿಸುವ ಮಂಗಳ ಸಿ ಅವರ "ಕೃಷ್ಣ ಮುದ್ರಿಕಾ", ಜಮೀನ್ದಾರರ ಲೈಂಗಿಕ ಶೋಷಣೆ, ದಲಿತ ಮಹಿಳೆಯರ ಮೇಲಾಗುವ ಜಾತಿ ಶೋಷಣೆಗಳನ್ನು ಬಿಂಬಿಸುವ ಗೀತಾ ನಾಗಭೂಷಣರ "ಬದುಕು", ನಾಗವೇಣಿ ಹೆಚ್ ಅವರ "ಗಾಂಧಿ ಬಂದ", ಭಯೋತ್ಪಾದನೆಯಿಂದ ಕುಟುಂಬಗಳು ಅನುಭವಿಸುವ ಸಂಕಷ್ಟಗಳನ್ನು ಪರಿಚಯಿಸುವ "ತ್ರಿವೇಣಿ", ರೈತಾಪಿ ಶೂದ್ರ ಕುಟುಂಬಗಳ ವೇದನೆ, ಬವಣೆಗಳನ್ನು ಪ್ರತಿಫಲಿಸುವ ಆರ್ ಸುನಂದಮ್ಮ ಅವರ "ದ್ವಿತ್ವ", ರೈತ ಮಹಿಳೆ ಮತ್ತು ಜಮೀನು ಮಾಡುವ ತಕರಾರುಗಳನ್ನು ಪ್ರತಿನಿಧಿಸುವ ಎಂ ಎಸ್ ವೇದ ಅವರ "ಜಮೀನು", ಕೌಟುಂಬಿಕ ಹಿಂಸೆಗಳನ್ನು ಮೀರಿ ಆರ್ಥಿಕ ಸಬಲತೆಯಿಂದ ವ್ಯಕ್ತಿತ್ವದ ಘನತೆಯನ್ನು ಉಳಿಸಿಕೊಳ್ಳುವ ಕಥಾವಸ್ತುವಿರುವ ಗೀತಾ ಬಿ ಯು ಅವರ "ತಮಸೋಮ ಜ್ಯೋತಿರ್ಗಮಯ" ಕಾದಂಬರಿಗಳು ಪ್ರಸ್ತುತದ 21ನೇ ಶತಮಾನದಲ್ಲಿನ ಸ್ತ್ರೀವಾದಿ ಚಿಂತನೆಗಳ ರೂಪುರೇಷೆಗಳನ್ನು ಅಖಂಡವಾಗಿ ಪರಿಚಯಿಸುತ್ತವೆ.

ಆರ್ಥಿಕ ಸಬಲೀಕರಣ, ನಿರ್ವಾಹಣಾ ಸಬಲೀಕರಣ, ಸಂಬಂಧಗಳನ್ನು ನಿಭಾಯಿಸುವುದು, ವ್ಯವಸ್ಥೆಯ ಮರುರಚನೆ, ಪಿತೃತ್ವ ಐಡಿಯಾಲಜಿಗಳ ಮುರಿದು ಕಟ್ಟುವಿಕೆ, ಹೆಣ್ಣನ್ನು ಗೃಹಿಣಿಯಾಗಿ, ತಾಯಿಯಾಗಿ, ಹೆಣ್ಣಾಗಿ ಮಾತ್ರವೇ ನೋಡುವ ಸಿದ್ಧಮಾದರಿಗಳನ್ನು ಪ್ರಶ್ನಿಸುವುದು, ಸ್ತ್ರೀ ಸಂಬಂಧಿತ ಸೌಂದರ್ಯ ಮಿಥ್ಯೆಗಳು, ನಡವಳಿಕೆಯ

ISSN: 2320-9941

ಮಿಥ್ಯೆಗಳನ್ನು ಎದುರಾಗುವುದು, ಕುಲಸ್ಥಾಪನೆಯ ಹೊಣೆ, ಕುಟುಂಬ ನಿರ್ವಹಣೆಯ ಅನಿವಾರ್ಯತೆ, ಸಂಕುಚಿತ ಮನೋಭಾವಗಳ ಇಕ್ಕಟ್ಟುಗಳು, ಲಿಂಗ ಭೇದ, ಅಧಿಕಾರ ದುರುಪಯೋಗ, ಜಾತಿ ಶೋಷಣೆಯಂತಹ ಅತಿರೇಕಗಳನ್ನು ವಿಶ್ಲೇಷಿಸುವ ಒಳನೋಟಗಳನ್ನು ಈ ಕಾದಂಬರಿಗಳು ನೀಡುವಲ್ಲಿ ಯಶಸ್ಸು ಪಡೆದಿವೆ.

ಮಾನವ ನಡವಳಿಕೆಯಲ್ಲಿನ ದೋಷಗಳಿಗೆ, ನಮ್ಮ ಪ್ರಜ್ಞಾ ವಿಸ್ತಾರದಲ್ಲಿರುವ ಲೋಪಗಳೇ ಕಾರಣವಾಗಿವೆ. ಈ ಪ್ರಜ್ಞೆಯು ಸ್ತ್ರೀ/ಪುರುಷ ಎಂಬ ವಿಭಜನೆಯಿಂದ ಹೊರತಾದದ್ದು. ಮಾನವರಿಗೇ ವಿಶೇಷವಾದ ಈ ಪ್ರಜ್ಞೆಯನ್ನು ಜತನದಿಂದ ಸಮುದಾಯಗಳು ಕಾದುಕೊಂಡು ಬಂದಿರುವುದರಿಂದಲೇ ನಾಗರೀಕತೆಗಳು ಹೆಚ್ಚು ಹೆಚ್ಚು ಮಾನವೀಯತೆ ಮತ್ತು ಜೀವ ಪೋಷಕತೆಯನ್ನು ಉಳಿಸಿಕೊಂಡಿವೆ. ಗಂಡು ಹೆಣ್ಣಿನ ನಡುವೆ ಇರುವ ಭಿನ್ನ ಭೇದಗಳು, ಅಸಮತೆಗಳು ನಮ್ಮ ಕಲಿಕೆ ಹಾಗು ಆಚರಣೆಯ ನಿರ್ಮಿತಿಗಳು.

ಸ್ತ್ರೀ ಚೇತನವೆಂಬುದು ಮಾನವ ನಿರ್ಮಿತ ಸಮಾಜಗಳೊಳಗೆ, ಅಧಿಕಾರದ ಹಂಚಿಕೆಯ ಆಟದಲ್ಲಿ ಸಲ್ಲದೆ ಇರುವ ಒಂದು ಆಯಾಮ. ಎಲ್ಲಾ ಮಾನವರನ್ನೂ, ತಮ್ಮ ಅಧಿಕಾರದ ವ್ಯಾಪ್ತಿಗೆ ಬರುವ ಎಲ್ಲಾ ಸನ್ನಿವೇಶಗಳನ್ನೂ, ಅಧಿಕಾರದ ಮೇಲು-ಕೆಳಗಿನ ಆಟದ ಅನ್ವಯ ಸರಿತೂಗಿಸುವ ಪ್ರಯತ್ನಗಳನ್ನು ರಾಜಕೀಯದ ಹೆಸರಲ್ಲಿ, ನಾಗರೀಕತೆಯ ಉತ್ತಮಿಕೆಯ ಹೆಸರಿನಲ್ಲಿ ಮುನ್ನೆಲೆಗೆ ತರುವ ಪ್ರಯತ್ನಗಳು ಸ್ತ್ರೀ ಸಹಜತೆಯನ್ನು, ಆತ್ಮವಿಶ್ವಾಸವನ್ನು ವ್ಯವಹಾರಿಕವಲ್ಲವೆಂದು ನಿಕೃಷ್ಟವಾಗಿಸುವ ಮತ್ತು ಅನಗತ್ಯವೆಂದು ಪಕ್ಕಕ್ಕೆ ಸರಿಸಿರುವ ಉದಾಹರಣೆಗಳನ್ನು ಇತಿಹಾಸದುದ್ದಕ್ಕೂ ಕಾಣಬಹುದು.

ಚಳುವಳಿಗಳಾಗಲೀ, ಚಿಭಿಣುತುಟ ಗಳಾಗಲೀ, ಮೀಸಲಾತಿಗಳಾಗಲೀ, ಸ್ವಲ್ಪಮಟ್ಟಿಗೆ ಮಾತ್ರವೇ ಮಹಿಳಾ ಸಬಲತೆಯನ್ನು ಅನುಸಂಧಾನ ಮಾಡಬಲ್ಲವು. ಸ್ತ್ರೀ ಚೇತನವು ಪರಿಪೂರ್ಣವಾಗಿ ಸೃಜನಶೀಲವಾದ ಸ್ತ್ರೀ ಸಹಜತೆಯನ್ನು ತನ್ನದಾಗಿಸಿಕೊಳ್ಳಬೇಕೆಂದರೆ, ತನ್ನ ಉಳಿಯುವಿಕೆ ಅಥವಾ ಉನ್ನತಿಯು ಕೇವಲ ತನ್ನಿಂದಲೇ ಆಗುವಂತಹದ್ದು, ಮತ್ತು ಇದಕ್ಕಾಗಿ ತನ್ನ ದೇಹ, ತನ್ನ ಹುಟ್ಟು, ತನ್ನ ಜಾತಿ, ತನ್ನ ಸಾಮಾಜೀಕರಣ ಅಥವಾ ತನಗಾಗಿ ಸಮಾಜವು ಕಟ್ಟಿಕೊಟ್ಟಿರುವ ಯಾವುದೇ ಆಯ್ಕೆಗಳು ಅಡ್ಡಿಯಾಗಲಾರವು ಎಂಬ ಅಖಂಡವಾದ ಜವಾಬ್ದಾರಿ, ವಿಶ್ವಾಸ ಮತ್ತು ಕಾರ್ಯೋನ್ಮುಖವಾಗುವ ತನ್ಮಯತೆಯಿಂದ ಸಾಧ್ಯವಾಗುವಂತಹದ್ದು. ಹಾಗೆಯೇ ಇದು ನಾಯಕರಿಲ್ಲದ ಹಾದಿ; ಪ್ರತಿಯೊಬ್ಬರೂ ತನಗಾಗಿಯೇ ತನ್ನ ಚಲನೆಯನ್ನು ತಾನೇ ನಿಭಾಯಿಸುವ ಮತ್ತು ಮುಂದುವರೆಸಬೇಕಾದ ಅಗತ್ಯ ಹೊಣೆಗಾರಿಕೆ.

ಇದಕ್ಕೆ ಬೇಕಾದ ಸಾಧನಗಳನ್ನು, ಅಭ್ಯಾಸಕ್ಕೆ ಬೇಕಾದ ಮಾನಸಿಕ ತಯಾರಿಯನ್ನು ಉದಾಹರಣೆಗಳ ಮೂಲಕ ರೂಪಿಸುವುದು ಕಾದಂಬರಿಗಳ ಆದ್ಯತೆಯಾಗಬೇಕು. ಹಾಗೆಯೆ ಪ್ರತಿಯೊಂದು ಜೀವಿಗೂ ಣಾಟುಡಣಾಜ ಆದ ಕಲಿಕಾ ಕೌಶಲ್ಯಗಳನ್ನು, ಕ್ರಮಗಳನ್ನು, ಕ್ರಿಯಾತ್ಮಕತೆಯನ್ನು ಗೌರವಿಸುತ್ತಲೇ ನಮ್ಮ ಅವಕಾಶಗಳನ್ನು ನಾವೇ ಸೃಷ್ಟಿಸಿಕೊಳ್ಳಬಹುದಾದ ಜಾಣ್ಮೆ, ತಿಳುವಳಿಕೆ, ಇಚ್ಛೆಗೆ ತಕ್ಕ ಅವಕಾಶ ಮತ್ತು ಒಳಗೊಳ್ಳುವ ತನ್ಮಯತೆಯನ್ನು ಉದಾಹರಿಸುವ ಕಥಾವಸ್ತುಗಳನ್ನು ಒಳಗೊಂಡ ಕಾದಂಬರಿಗಳು ಸಹಜವಾಗಿಯೇ ಜೀವಪರವಾಗಿರುತ್ತವೆ. ಇಂತಹ ಜಾಣ್ಮೆಯನ್ನು ಕರತಾಲಮಲಕ ಮಾಡಿಕೊಂಡಿರುವ ಪಾತ್ರಗಳು ಸ್ತ್ರೀ ಸಹಜತೆಯನ್ನು, ಸ್ತ್ರೀತನವನ್ನು ಬಿಂಬಿಸುತ್ತವೆ.

ಇಂತಹ ಒಂದು ವ್ಯಕ್ತಿತ್ವದ ವಿಸ್ತಾರಕ್ಕೆ ಗಂಡು-ಹೆಣ್ಣು ಗಳೆಂಬ ಕಟ್ಟುಗಳೇನಿಲ್ಲ. ಇಂತಹ ಧೋರಣೆಗಳನ್ನು ನಿಲುಕದ ಅಸಾಧ್ಯಗಳನ್ನಾಗಿಸಿ ಅಥವಾ ಯುಟೋಪಿಯನ್ ಆದರ್ಶಗಳೆಂದು ನಿರ್ಲಕ್ಷಿಸಲಾಗಿರುವುದು, ಬೇಜವಾಬ್ದಾರಿಯ ಪರಾಕಾಷ್ಠೆ. ಶರಣ ಸತಿ-ಲಿಂಗ ಪತಿ ಎಂಬುದು ಕಲ್ಪನೆಯಲ್ಲ; ಅದು ಶರಣರಿಗೆ ನಿಲುಕಿದ್ದ ಬದುಕಿನ ಒಂದು ಕ್ರಮ.

ಅಂಬಿಗರ ಚೌಡಯ್ಯನವರ ಈ ವಚನವನ್ನು ಗಮನಿಸಿ:

"ಶರಣಸತಿ ಲಿಂಗಪತಿ ಎಂಬರು
ಶರಣ ಹೆಣ್ಣಾದ ಪರಿಯಿನ್ನೆಂತು?
ಲಿಂಗ ಗಂಡಾದ ಪರಿಯಿನ್ನೆಂತು?
ನೀರು, ನೀರು ಕೂಡಿ ಬೆರೆದಲ್ಲಿ
ಭೇದಿಸಿ ಬೇರೆ ಮಾಡಬಹುದೆ?
ಗಂಡು ಹೆಣ್ಣು ಯೋಗವಾದಲ್ಲಿ
ಆತುರ ಹಿಂಗೆ ಘಟ ಬೇರಾಯಿತ್ತು!
ಇದ ಕಾರಣ

ಶರಣಸತಿ ಲಿಂಗಪತಿ ಎಂಬ ಮಾತು ಮೊದಲಿಂಗೆ ಮೋಸ
ಲಾಭಕ್ಕಧೀನವುಂಟೆ ಎಂದನಂಬಿಗರ ಚೌಡಯ್ಯ"

ಜೈವಿಕ ಭಿನ್ನತೆಗಳನ್ನು ಹೊರತುಪಡಿಸಿ ಗಂಡು, ಹೆಣ್ಣು ಎಂಬ ಬೇಧವನ್ನರಿಯುವುದೇ ದೋಷ ಪೂರ್ಣವಾದ ಗ್ರಾಹ್ಯ, ಯಾಕೆಂದರೆ ನೀರು, ನೀರು ಕೂಡಿ ಬೆರೆದಲ್ಲಿ ಬೇಧವೆಲ್ಲಿಯದು? ಒಳಗಿನ ಸತ್ವ ಒಂದೆ; ಘಟವಷ್ಟೇ ಬೇ–ರೆಯದು. ಈ ಲಿಂಗ ವಿಭಜನೆಗೆ ಅದೀನರಾಗುವುದು ಸತ್ಯಕ್ಕೆ ವಿರೋಧವಾದದ್ದು. ವ್ಯವಹಾರಕ್ಕಾಗಿ ಮಾಡಿಕೊಂಡ ವಿಭಜನೆಗಳನ್ನೇ ಆಧರಿಸಿ ಭಾಷೆಯಲ್ಲಿ, ಆಚರಣೆಗಳಲ್ಲಿ, ಸಾಮಾಜಿಕ ಸ್ಥಾನಮಾನಗಳಲ್ಲಿ, ಉಡುಗೆ–ತೊಡುಗೆಗಳಲ್ಲಿ, ನಡೆ–ನುಡಿಯಲ್ಲಿ ಭಿನ್ನತೆಯನ್ನು ಗ್ರಹಿಸುವುದರಿಂದ ದಾರಿತಪ್ಪುವುದು. ಇದು ಮಹಿಳಾ ಸಬಲೀಕರಣದ ಹಾದಿಯಲ್ಲ.

ಇದನ್ನು ಮಾರ್ಕ್ಸ ಮತ್ತು ಏಂಜಲ್ಸ್ ಅವರು ಸಹ ಗಮನಿಸಿರುತ್ತಾರೆ. ತಾತ್ಕಾಲಿಕವಾದ ಈ ವ್ಯವಸ್ಥೆಯನ್ನು ಕ್ರಮೇಣ, ಕ್ರಮೇಣ ವಿವಿಧ ಐಡಿಯಾಲಜಿಗಳ ನೆರವಿನಿಂದ, ದಬ್ಬಾಳಿಕೆಯ ಮನಃಸ್ಥಿತಿಯಿಂದ, ಅಧಿಕಾರ ಸ್ಥಾಪಿಸುವ ಲಾಲಸೆಯಿಂದ, ಭೋಗದ ಆಮಿಷಗಳಿಂದ ನಿರಂತರವಾದ ಗುಲಾಮಿತನವನ್ನು ಮಹಿಳೆಯ ಮೇಲೆ ಹೇರಲಾಗಿದೆ. ಸ್ವ–ಪ್ರಯತ್ನವಲ್ಲದೆ, ಸಮುದಾಯದ ನೈತಿಕ ಶಕ್ತಿ ಮತ್ತು ರಾಜಕೀಯದ ಇಚ್ಛಾ ಬಲದಿಂದ ಮಾತ್ರವೇ ಅಲ್ಲದೆ ಸಹಜ ಸ್ತ್ರೀ ಲಕ್ಷಣಗಳನ್ನು ಅರ್ಥೈಸಿಕೊಳ್ಳುವುದರ ಮೂಲಕವೂ ಮಹಿಳೆ ತನ್ನ ಸ್ತ್ರೀ–ತನವನ್ನು ಶೋಧಿಸಲು ಶಕ್ತಳಾಗುತ್ತಾಳೆ.

ಈ ಸಂಭ್ರಮದ ನಡೆಗೆ ಅಡ್ಡಿಯಾಗಿರುವ ಕಾರಣಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮೇಲ್ಕಾಣಿಸಿದ ಬಹುತೇಕ ಎಲ್ಲಾ ಕಾದಂಬರಿಗಳು ಮಾಡುತ್ತವೆ. ಪ್ರಾತಿನಿಧಿಕವಾಗಿ ಗೀತಾ ನಾಗಭೂಷಣರ "ಬದುಕು" ಕಾದಂಬರಿಯನ್ನು ಸ್ವಲ್ಪ ಮಟ್ಟಿಗೆ ವಿಸ್ತರಿಸಿ ನೋಡಲು ಪ್ರಯತ್ನಿಸುತ್ತೇನೆ:

ಗೀತಾ ನಾಗಭೂಷಣರು ಈ ಕಾದಂಬರಿಯನ್ನು ಜಾತಿ, ಲಿಂಗ ಹಾಗು ವರ್ಗ ಏಣಿಶ್ರೇಣಿಯ ಅನ್ವಯ ಶೋಷಿತರಾಗಿರುವ ಬಹುಸಂಖ್ಯಾತ ದಲಿತ, ಶೂದ್ರ, ಕೊಳಗೇರಿ ಮಹಿಳಾ ಸಮುದಾಯಕ್ಕೆ ಅರ್ಪಿಸಿರುತ್ತಾರೆ. ರಾಜಕೀಯ ಮತ್ತು ಸಾಮಾಜಿಕ ಸಂಸ್ಥೆಗಳಿಂದ ಶೋಷಿತರಾಗಿರುವ ಈ ಪಾಪದ ಮಹಿಳೆಯರ ಸ್ಥಿತಿ–ಗತಿಯನ್ನು "ಬದುಕು" ಕಾದಂಬರಿ ವಿಶ್ಲೇಷಿಸುತ್ತದೆ.

ಮೂರು ತಲೆಮಾರಿನ ಕತೆ ಇದು. ಶಿವಳ್ಳಿಯ ಜಮೀನುದಾರ ಮಲ್ಲಪ್ಪ ಮತ್ತು ಮಲ್ಲಮ್ಮನವರ ಸುಖೀ ಸಂಸಾರದ ಕತೆಯಿಂದ ಕಾದಂಬರಿ ಪ್ರಾರಂಭವಾಗುತ್ತದೆ. ಮರ್ಯಾದಸ್ತರಾದ ಇವರಿಗೆ ಸಣ್ಣಮ್ಮ, ಕಾಶಮ್ಮ ಮತ್ತು ಮಗ ಕಲ್ಯಾಣಿ ಜೀವದ ಭಾಗವಾಗಿರುತ್ತಾರೆ. ಹಳ್ಳಿಯ ಮೇಲ್ಜಾತಿ ಶ್ರೀಮಂತ ಗುರುಲಿಂಗಪ್ಪನ ಮಗ ಲಿಂಗರಾಜನನ್ನು ಕಾಶಮ್ಮ ಪ್ರೀತಿಸಿ, ಊರಲ್ಲಿ ಜನ ಮಾತಾಡುವ ಹಾಗೆ ಆದಾಗ ಮರ್ಯಾದೆಗೆ ಅಂಜಿ ಮಲ್ಲಪ್ಪ ಹೊಳೆಗೆ ಹಾರಿ ಪ್ರಾಣ ಬಿಡುತ್ತಾನೆ. ನರಳಿ ನರಳಿ ಮಲ್ಲಮ್ಮ ಸಾಯುತ್ತಾಳೆ. ತಂಗಿಯ ಬಗ್ಗೆ ಅವಹೇಳನವಾಗಿ ಮಾತಾಡಿದ ಜಂಬಗಿ ಮುಕುದಪ್ಪನನ್ನು ಸಿಟ್ಟಿನಲ್ಲಿ ಕಲ್ಯಾಣಿ ಸಾಯಿಸಿ 14 ವರ್ಷ ಜೈಲಿಗೆ ಹೋಗುತ್ತಾನೆ. ಸಣ್ಣಮ್ಮನ ಮಗಳು ಬೆಳ್ಳಿ, ಗಂಡ ಕಲ್ಯಾಣಿಯ ನೆನಪಿನಲ್ಲಿ ಸೊರಗಿ ಸುಣ್ಣವಾಗುತ್ತಾಳೆ. ಮದುವೆಯಾದ ಗಂಡ ಮಾರ್ತಾಂಡನನ್ನು ಬಿಟ್ಟು ಬಂದ ಕಾಶಮ್ಮ ಮದುವೆಯ ಮಾನ್ಯತೆ ಕೊಡದೆ, ಲಿಂಗರಾಜನ ಇಟ್ಟುಕೊಂಡವಳಾಗಿ ಕುಟುಂಬದ ಸರ್ವನಾಶಕ್ಕೆ ಮೂಲವಾಗುತ್ತಾಳೆ. ಗಂಡ ಮಾರ್ತಂಡ ಕೊನೆಯ ಬಾರಿ ಹೆಂಡತಿಯ ಮುಖ ನೋಡಿ ಸಾಯುತ್ತಾನೆ. ಬೆಳ್ಳಿ ಮತ್ತು ಕಲ್ಯಾಣಿ ಶ್ರೀಶೈಲಕ್ಕೆ ಹೋಗುವಾಗ ರಸ್ತೆ ದುರಂತಕ್ಕೆ ಸಿಕ್ಕಿ ಮರಣಹೊಂದುತ್ತಾರೆ.

ಈ ದುರಂತ ಕತೆಯ ಮತ್ತೊಂದು ಆಯಾಮ ಹೈದರಾಬಾದ್ ಕರ್ನಾಟಕದ ಭಾಗದ ಜನರ ಬದುಕಿನ ವಿಧಿ–ಆಚರಣೆಗಳು, ಶೋಷಿತ ವರ್ಗದ ಮಹಿಳೆಯರಿಗೆ ಮಾರಕವಾಗಿರುವ ಬೆತ್ತಲೆ ಸೇವೆ, ಮಾಪುರ ತಾಯಿ ಸೇವೆಗೆ ಬಿಟ್ಟ ಚಿಕ್ಕ ವಯಸ್ಸಿನ ಜೋಗತಿಯರು ಮತ್ತು ಪರಂಪರೆಯ ಹೆಸರಿನಲ್ಲಿ ಮೇಲು ಜಾತಿಯವರಿಂದ ಅವರ ಮೇಲೆ ನಡೆಯುವ ಶೋಷಣೆಗಳು.

ಸಮಾಜವು ಒಪ್ಪಿ ಪಾಲಿಸುವ ನಿಬಂಧನೆಗಳನ್ನು ಧಿಕ್ಕರಿಸುವ ಕಾಶಿ–ಲಿಂಗರಾಜ ತೀವ್ರವಾಗಿ ನರಳುತ್ತಾರೆ. ಗಂಡಸಿನ ದರ್ಪ– ಅಧಿಕಾರ ಚಲಾಯಿಸದ ಮಾರ್ತಂಡ ನರಳುತ್ತಾನೆ. ಲೈಂಗಿಕತೆಯ ಮೇಲಿನ ಹತೋಟಿ ತಪ್ಪಿದ ಕಾರಣಕ್ಕಾಗಿ ಕಳೆದುಕೊಂಡ ಕುಟುಂಬದ ಮರ್ಯಾದೆ ಜೀವ ಬಲಿ ಬೇಡುತ್ತದೆ. ಹೆಣ್ಣು ಹೆಣ್ಣಾಗಿಲ್ಲದಿದ್ದರೆ, ಗಂಡು ಗಂಡಸಿನಂತೆ ಇಲ್ಲದಿದ್ದರೆ ದುರಂತ ಅನಿವಾರ್ಯವಾಗುತ್ತದೆ. ಹೆಣ್ಣು ಮತ್ತು ಗಂಡ ದೇಹಗಳು ಸಮಾಜ ಹೇರಿರುವ ನಿಯಮಗಳ ವಾಹಕವಾಗುತ್ತವೆ.

ದೇವರ ಕುರಿತಾದ ಭಯ ಮತ್ತು ನಕಾರಾತ್ಮಕ ಸ್ತ್ರೀ ಸಂರಚನೆಗಳು ಮಹಿಳೆಯ ಮೇಲಿನ ಹೊರೆಯನ್ನು ಮತ್ತಷ್ಟು ದಟ್ಟವಾಗಿಸುತ್ತವೆ. ಅವಳ ಲೈಂಗಿಕತೆಯು ಗಂಡು ದಿಕ್ಕಿಲ್ಲದಿದ್ದರೆ ಸುರಕ್ಷಿತವಲ್ಲ ಎಂದು ಮತ್ತೆ ಮತ್ತೆ ಸಾಬೀತಾಗುತ್ತದೆ.

ISSN: 2320-9941

ಇದಕ್ಕೆ ವ್ಯತಿರಿಕ್ತವಾಗಿ ಬೆಳ್ಳಿ ಮತ್ತು ತುಲಜವ್ವನಂತಹ ಪಾತ್ರಗಳು ಸ್ಥಾಪಿತ ಲೈಂಗಿಕತೆಯನ್ನು ಧಿಕ್ಕರಿಸುತ್ತವೆ. ಮಹಿಳಾ ಸಂವೇದನೆಯೆಂಬುದು ಅವಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಯ ಪ್ರತಿಫಲನವಾಗಿರುತ್ತದೆ. ಇಲ್ಲಿ ಬದುಕು ಮುಖ್ಯವೇ ಹೊರತು ಸಾಮಾಜಿಕ ಮೌಲ್ಯಗಳಲ್ಲ. ಇದು ಮೇಲ್ಜಾತಿಯ ಮಹಿಳೆಯರಿಗಿಂತ ಶೋಷಿತರ ಜೀವ ಚಹರೆಯಾಗಿದೆ.

ಅಂತೆಯೇ ಕನ್ನಡದಲ್ಲಿ 20ನೇ ಶತಮಾನದ ಆದಿಯಲ್ಲಿ ರಚಿತವಾಗಿರುವ ಕಾದಂಬರಿಗಳು ಮಹಿಳೆಯರ ವೈವಿಧ್ಯಮಯವಾದ ಮಗ್ಗಲುಗಳನ್ನು ಪರಿಚಯಿಸುವುದಷ್ಟೇ ಅಲ್ಲದೆ ಸಾಮಾಜಿಕ ಸಂರಚನೆಗಳ ಕಾರಣದಿಂದ ಬದುಕು ಹೇಗೆ ಜೀವರಸವಿಲ್ಲದೆ ನೀರಸವಾಗುತ್ತದೆ ಎಂದು ಉದಾಹರಣೆಗಳ ಮೂಲಕ ತಿಳಿಸುತ್ತವೆ.

ಮುಗಿಸುವ ಮುನ್ನ.......

ಸಂರಚನೆಯೆಂಬ ಕಣ್ಕಟ್ಟಿನ ಮಾಯಾಲೋಕ:

ಇಂದು ನಮ್ಮನ್ನು ಬಲವಾಗಿ ಬಂಧಿಸಿರುವುದು ಸಂರಚನೆಗಳೆಂಬ ಕಣ್ಕಟ್ಟುಗಳು. ಒಳ್ಳೆಯ ಸಂರಚನೆಗಳು/ ಕೆಟ್ಟ ಸಂರಚನೆಗಳೆಂಬವು ಇರುವುದಿಲ್ಲ. ಅಧಿಕಾರ, ಅಸ್ಮಿತೆ, ಪ್ರತಿನಿಧೀಕರಣವೆಂಬ ಸಂರಚನೆಗಳು ನಮ್ಮನಿಂದು ಆವಾಹಿಸಿಕೊಂಡಿವೆ. ವಾಸ್ತವವನ್ನು ಅದು ಹೇಗಿದೆಯೋ ಹಾಗೆಯೇ ಯಥಾವತ್ತಾಗಿ ನೋಡುವ ಕ್ರಮಗಳು ಹೆಚ್ಚು ಹೆಚ್ಚಾಗಿ ಬೇಕಿವೆ. ನಮ್ಮ ದಿನನಿತ್ಯದ ಜೀವನದಲ್ಲಿ ಬಂದು ಹೋಗುವ ಹಾಸ್ಯ, ವ್ಯಂಗ್ಯ, ವಿಡಂಬನೆ, ಕುಚೇಷ್ಟೆ, ಹಗುರಾದ ಸರಸ, ನಿಷ್ಕಾಮ ಪೋಲಿತನಗಳು ನಮ್ಮಲ್ಲಿ ಉಲ್ಲಾಸವನ್ನು ಹೆಚ್ಚಿಸಬಲ್ಲವು. ಸಮುದಾಯಗಳಲ್ಲಿ, ಕೊಳಗೇರಿಗಳಲ್ಲಿ, ಹಟ್ಟಿಗಳಲ್ಲಿ, ಲೇಔಟ್‌ಗಳಲ್ಲಿ, ಅಪಾರ್ಟಮೆಂಟ್ ಗಳಲ್ಲಿ, ಯಾವುದೇ ಊರಲ್ಲಿ, ಸನ್ನಿವೇಶದಲ್ಲಿ, ಪ್ರತಿಯೊಬ್ಬ ಸ್ತ್ರೀಯೂ ತನ್ನದೇ ಆದ ಬಾಳುವಿಕೆಗೆ ಬೇಕಾದ ಸ್ವ–ತಂತ್ರಗಳನ್ನು ಅನ್ವೇಷಿಸಿ, ಬಳಕೆಗೆ ಅನುವಾಗುವಂತೆ ಎಂಥಹ ಭಿನ್ನ ಸನ್ನಿವೇಶಗಳಲ್ಲಿಯೂ, ಎಷ್ಟೇ ಕಠಿಣವಾಗಿದ್ದರೂ ಸಂಭ್ರಮದಿಂದ, ನಗುನಗುತಾ, ಬದುಕಿನ ವೇದನೆಗಳೇ ನಾಚುವಂತೆ ನಗಣ್ಯಗೊಳಿಸಿ ಸಾಗುತ್ತಿರುವ ಕತೆಗಳು ಹೆಚ್ಚು ಹೆಚ್ಚು ಬರಬೇಕಿವೆ.

ತನ್ನ ಒಳ ಉಡುಪುಗಳನ್ನು ಉರಿಸಿ ನಗರದ ಚೌಕದಲ್ಲಿ ಪುರುಷಾಧಿಕಾರದ ಅಹಂಕಾರವನ್ನು ಧಿಕ್ಕರಿಸಿದ ರ್‍ಯಾಡಿಕಲ್ ಸ್ತ್ರೀವಾದದ ನಂತರ ಮಹಿಳಾ ಹೋರಾಟದ ಸ್ವರೂಪವು ತೀವ್ರತರನಾಗಿ ಬದಲಾಗಿದೆ. ಎಲ್ಲಾ ಮಹಿಳೆಯರು ಕೇವಲ ಪ್ರಶ್ನೆಗಳನಷ್ಟೇ ಕೇಳುತ್ತಾ, ಯಾರಿಂದಲೋ ಸಮಾನತೆ ಬಯಸುತ್ತಾ, ಹಕ್ಕೊತ್ತಾಯ ಮಾಡುತ್ತಾ ನಿರಾಸಾವಾದಿಗಳಾಗಿಲ್ಲ. ಜೆಂಡರ್ ವಿಭಾಜಕಗಳನ್ನೂ ಮೀರಿ ಸ್ತ್ರೀವಾದವೆಂಬುದು ಒಂದು ಜುಟಜಟಿುಠಟಿ ಆಗಿ ಹೊರಹೊಮ್ಮುತ್ತಿದೆ. ಇಡೀ ವ್ಯೋಮವನ್ನು ಆವಾಹಿಸಿಕೊಂಡಿರುವ ಈ ಅಗಾಧ ಸೃಜನಶೀಲ ಶಕ್ತಿ ಸ್ವರೂಪವು ಕಣಕಣದಲ್ಲೂ ಎಲ್ಲರ, ಎಲ್ಲದರ ಪ್ರಜ್ಞಾಪ್ರವಾಹದಲ್ಲಿ ಹರಿಯುತ್ತಿರುವುದಾಗಿ ವಿಜ್ಞಾನವೇ ಸಾಬೀತುಪಡಿಸಿದೆ. ಎಲ್ಲವೂ ತಾನೇ ಆಗಿರುವ ಈ ಸ್ತ್ರೀ ಸ್ವರೂಪವು ಯಾರಿಂದ, ಯಾಕಾಗಿ ಎನನ್ನಾದರೂ ಕೇಳಿಪಡೆಯಬೇಕು? ಇದು ಹಾಸ್ಯಾಸ್ಪದ. ಕಾದಂಬರಿಯ ಒಳಗಿನ ಲೋಕವು ಈ ಸಹಜ ಪ್ರಕ್ರಿಯೆಗೆ ಕಿವಿಯಾಗಬೇಕು. ಚರಾಚರಗಳಲ್ಲಿ ತಾನೇ ತಾನಾಗಿರುವ ಈ ಚಲನಶೀಲ ಚೇತನವು ನಮ್ಮ ಜೀವ ವಾಸ್ತವವೇ ಆದಾಗ ಅವಳ ಸೃಷ್ಟಿ ಲೀಲೆಯನ್ನು ಸಂಭ್ರಮಿಸುವುದನ್ನು ಬಿಟ್ಟು ಬೇರೇನು ಉಳಿದಿದೆ?

■■

ವಚನಕಾರರ ಪ್ರಕೃತಿ ಪ್ರೇಮ

● ಡಾ. ಗೋವಿಂದರಾಯ ಎಂ.

ಹನ್ನೆರಡನೆಯ ಶತಮಾನದ ವಚನಕಾರರು ಮತ್ತು ಅವರ ವಚನಗಳ ಸಾಂದರ್ಭಿಕತೆ ಇಂದಿಗೂ ಔಚಿತ್ಯಪೂರ್ಣವಾದದ್ದು. ಪ್ರಕೃತಿಯೊಂದಿಗೆ ಅವರು ನಡೆಸಿದ ಅನುಸಂಧಾನ, ಸೃಷ್ಟಿಯಲ್ಲಿ ದೇವರನ್ನು ಕಂಡ ಪರಿ, ಪ್ರಕೃತಿ ಸಂವೇದನಾ ವಚನಗಳ ಮೂಲಕ ಗಮನಿಸಬಹುದಾಗಿದೆ. ಪ್ರಕೃತಿಯೊಂದಿಗಿನ ಹೋಲಿಕೆ, ಉಪಮೆ, ಪ್ರಾಣಿ – ಪಕ್ಷಿಗಳನ್ನು ಮನುಷ್ಯ ಜೀವನದ ಅನೇಕ ಸಂಗತಿಗಳೊಂದಿಗೆ ಅರ್ಥಪೂರ್ಣವಾಗಿ ಹೋಲಿಸಿದ್ದಾರೆ. ಪ್ರಕೃತಿಯಲ್ಲಿ ನೆಲ, ಜಲ, ಗಾಳಿ, ಬೆಳಕು, ಆಕಾಶ, ಹಣ್ಣಿನ ಗಿಡಗಳು, ಆಹಾರ ಧಾನ್ಯಗಳು, ಹೂಬಳ್ಳಿಗಳು, ಪ್ರಾಣಿ ಪಕ್ಷಿಗಳ ಅನಂತತೆಯನ್ನು, ಉತ್ತಮ ಗುಣಗಳನ್ನು ಮನಸಾರೆ ಶ್ಲಾಘಿಸಿದ್ದಾರೆ. ಪ್ರಕೃತಿಯ ಪಶು–ಪಕ್ಷಿ–ಪ್ರಾಣಿ, ಗಿಡ–ಮರಗಳ ಬಗ್ಗೆ ಅವರಿಗಿರುವ ಪ್ರೇಮ ಮತ್ತು ವಿಶ್ವಾಸ ಅತ್ಯಂತ ಕುತೂಹಲದಾಯಕ ಸಂಗತಿಯಾಗಿದೆ. ಮನುಷ್ಯನಿಗಿಂತ ಸೃಷ್ಟಿಯಲ್ಲಿಯ ಗಿಡಮರಗಳು, ಪಶುಪಕ್ಷಿಗಳು ಹೆಚ್ಚು ವಿಶ್ವಾಸಾರ್ಹವೆಂಬುದನ್ನು ಹಲವಾರು ವಚನಕಾರರು ತಮ್ಮ ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಲೋಕದ ಬದುಕು, ದೇಹದ ಪ್ರಾಧಾನ್ಯ ಮತ್ತು ದೇಹದ ಬದುಕನ್ನು ಸುಧಾರಿಸಲು ಬೇಕಾದ ನೈತಿಕ ಮೌಲ್ಯಗಳ ಜೊತೆಗೆ ಪ್ರಾಕೃತಿಕ ವೈವಿಧ್ಯತೆಯನ್ನು ಆಧ್ಯಾತ್ಮಿಕ ಸಾಧನೆಯಲ್ಲಿ ಬಳಸಿಕೊಳ್ಳುವ ಮೂಲಕ ಮನುಷ್ಯ ಅತ್ಯುನ್ನತ ಸ್ಥಾನ ಪಡೆಯಬಹುದೆಂಬುದನ್ನು ಅನೇಕ ವಚನಕಾರರು ತಮ್ಮ ಪ್ರಕೃತಿ ಸಂವೇದನ ವಚನಗಳ ಮೂಲಕ ಅನಾವರಣ ಮಾಡಿದ್ದಾರೆ. ಪ್ರಕೃತಿಯ ಭಾಗವಾದ ಮನುಷ್ಯನನ್ನು ವಚನಕಾರರು, ಜನಪದಕಾರರು ಹಾಗೂ ನವೋದಯ ಕವಿಗಳು ಅತ್ಯಂತ ಭಾವ ತುಂಬಿ ವಾಸ್ತವಿಕತೆ ಎಡೆಗೆ ನಮ್ಮನ್ನು ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ. ಪ್ರಕೃತಿಯು ಮನುಷ್ಯನ ಪಾಲಿಗೆ ವರವಾಗಿದ್ದು ಪ್ರಾಕೃತಿಕ ಸಂಪನ್ಮೂಲಗಳನ್ನು ಸಮತೋಲನದಿಂದ

ವಿಳಾಸ: ಡಾ. ಗೋವಿಂದರಾಯ ಎಂ
ಕನ್ನಡ ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕುಣಿಗಲ್ – 572130

ಕಾಯ್ದುಕೊಂಡಲ್ಲಿ ಮನುಷ್ಯನ ಜೀವನ ಅರ್ಥಪೂರ್ಣವಾಗಿ ಸಾಗುತ್ತದೆ ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ನೀಡಿದ್ದಾರೆ. ಪ್ರಕೃತಿಯಲ್ಲಿ ಪರಮಾತ್ಮನನ್ನು ಕಾಣುವ, ಭಗವಂತನ ಅನುಸಂಧಾನದ ಮೂಲಕ ಜೀವನದ ಶ್ರೇಷ್ಠತೆಯನ್ನು ಕಂಡುಕೊಳ್ಳುವ ಪರಿಯನ್ನು ಅವರು ಅರಿತಿದ್ದರು ಎಂಬುದಕ್ಕೆ ಅವರ ಅನೇಕ ವಚನಗಳನ್ನು ಗಮನಿಸಬಹುದಾಗಿದೆ.

ಆದ್ಯ ವಚನಕಾರ ದೇವರ ದಾಸಿಮಯ್ಯನು ತನ್ನ ವಚನವೊಂದರಲ್ಲಿ ಸೃಷ್ಟಿಯಲ್ಲಿ ಅಡಗಿರುವ ಚಮತ್ಕಾರವನ್ನು ಹೀಗೆ ಹೇಳುತ್ತಾರೆ.

ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ,
ಅಂಬರಕ್ಕೆ ಗದ್ದುಗೆ ಬೊದಗೆ ಇಲ್ಲದಂತಿರಿಸುದೆ,
ಏಕೆ ಮೃಡನೆ ನೀನಲ್ಲದೆ
ಉಳಿದ ದೈವಂಗಳಿಗಹುದೆ ರಾಮನಾಥ

ಈ ಭೂಮಿ ಎಷ್ಟೊಂದು ವಿಶಿಷ್ಟತೆಯಿಂದ ಕೂಡಿದೆ ಎಂದರೆ ಸಪ್ತ ಮಹಾಸಾಗರಗಳನ್ನು ಒಳಗೊಂಡಿದೆ, ಆದರೂ ಈ ಭೂಮಿಯು ಕರಗುತ್ತಿಲ್ಲ. ಆಕಾಶಕ್ಕೆ ಕಂಬಗಳಾಗಲಿ ಬೊದಗೆಗಳಾಗಲಿ ಇಲ್ಲದಿದ್ದರೂ ಅದನ್ನು ಮೇಲ್ಛಾವಣಿಯಂತೆ ನಮ್ಮ ಮೇಲೆ ಇಡಲಾಗಿದೆ. ದೈವದ ಈ ಕಾರ್ಯವು ಭಗವಂತನ ಚಮತ್ಕಾರವನ್ನು ಸಾಕ್ಷಿ ರೂಪವಾಗಿ ನಮ್ಮೆಲ್ಲರಿಗೆ ತೋರಿಸಿದೆ ಎನ್ನುತ್ತಾರೆ.

ತಮ್ಮ ಮತ್ತೊಂದು ವಚನದಲ್ಲಿ
ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ
ಸುಳಿದು ಬೀಸುವ ಗಾಳಿ ಅದು ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥ.

ಎಂದು ಹೇಳುವಲ್ಲಿ ಪ್ರಕೃತಿಯ ಪಂಚಭೂತಗಳು ಮನುಷ್ಯನಿಗೆ ವರವಾಗಿದ್ದು ಅದನ್ನು ಪ್ರಕೃತಿಯ ಶಿಶುವಾದ ಅಥವಾ ಒಂದು ಭಾಗವಾದ ಮನುಷ್ಯನಿಂದಲೇ ಎಲ್ಲವನ್ನೂ ಪಡೆದಿದ್ದೇವೆ ಎನ್ನುವುದು ಅರ್ಥವಿಲ್ಲದ್ದು ಎಂಬ ಸ್ಪಷ್ಟತೆಯನ್ನು ನೀಡಿದ್ದಾನೆ.

ಪ್ರಕೃತಿ ಸಂವೇದನಾ ವಚನ ಕುರಿತಾಗಿ ಅಕ್ಕಮಹಾದೇವಿಯ ವಚನವನ್ನು ಉಲ್ಲೇಖಿಸುವುದಾದರೆ..

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದೊಡೆಂತಯ್ಯಾ? ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ? ಚೆನ್ನಮಲ್ಲಿಕಾರ್ಜುನದೇವ, ಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಪ್ರಕೃತಿಯಲ್ಲಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕುತ್ತಾ ಹೊರಟ ಅಕ್ಕಮಹಾದೇವಿ ಪ್ರಕೃತಿಯೊಂದಿಗೆ ಸಂವೇದಿಸುತ್ತ ಲೋಕದಲ್ಲಿನ ವಿಚಿತ್ರಗಳನ್ನು ಲೋಕಾನುಭವವನ್ನು ಕಂಡು ಈ ರೀತಿ ಪ್ರತಿಕ್ರಿಯಿಸಿದ್ದಾಳೆ. ಬೆಟ್ಟದ ಮೇಲೆ ಮನೆಯನ್ನು ಮಾಡಿಕೊಂಡು ವಾಸ ಮಾಡುವ ಮನುಷ್ಯರು, ಅಲ್ಲಿನ ಖಗ–ಮೃಗ, ಪ್ರಾಣಿಗಳು, ದಾಳಿ ಇಟ್ಟರೆ ಹೇಗೆ ಎಂದು ಹೆದರಿ ಕುಳಿತುಕೊಳ್ಳದೆ, ಯಾವುದೇ ಕಷ್ಟಕಾರ್ಪಣ್ಯಗಳು ಬಂದರೂ ಅಂಜದೆ ಬದುಕನ್ನು ನಿರ್ವಹಿಸಬೇಕು. ಸಮುದ್ರದ ತೀರದಲ್ಲಿ ಮನೆಯನ್ನು ಮಾಡಿಕೊಂಡಿದ್ದು ನೊರೆ ತೆರೆಗಳು ಬರುವುದು ಸಹಜ. ಅವುಗಳಿಗೆ ಹೆದರಿ ಬೆನ್ನು ತೋರಿಸುವುದು ನಿಜವಾದ ಜೀವನದ ಲಕ್ಷಣವಲ್ಲ. ಸಂತೆಯಲ್ಲಿ ಮನೆ ಮಾಡಿಕೊಂಡಿದ್ದಾಗ ಹಲವಾರು ಜನರ ಸೇರುವಿಕೆಯಿಂದ ಶಬ್ದ ಸಹಜವಾಗಿ ಆಗುತ್ತದೆ, ಅದಕ್ಕೆ ನಾವು ಧೃತಿಗೆಡಬಾರದು. ಲೋಕದ ಜನರ ಮಧ್ಯೆ ಬದುಕುವಾಗ ಅನೇಕ ಸ್ತುತಿ ನಿಂದೆಗಳು ಬರುವುದು ಸಹಜವಾಗಿದ್ದು, ಮನಸ್ಸಿನಲ್ಲಿ ಕೋಪವನ್ನು ತಾಳದೆ ಸಮಾಧಾನ ಚಿತ್ತದಿಂದ, ಸಮಚಿತ್ತ ಭಾವವನ್ನು ಹೊಂದಿರಬೇಕೆಂದು ಅಕ್ಕ ಸೂಚಿಸುತ್ತಾಳೆ. ಯಾರಾದರೂ ನಮ್ಮನ್ನು ನಿಂದಿಸಿದಾಗ ನಮಗೆ ಕೋಪ ಬರುವುದು ಸಹಜವಾದರೂ, ಅದನ್ನು ಆರೋಗ್ಯದ ದೃಷ್ಟಿಯಿಂದ ಹೊಗಳಿದಾಗಲೂ, ತೆಗಳಿದಾಗಲೂ ಸಮಚಿತ್ತ ಭಾವದಿಂದ ಇರಬೇಕೆಂದು ಪ್ರಕೃತಿಯ ಉದಾಹರಣೆಯ ಮೂಲಕ ಬದುಕಿನ ಜೀವಂತಿಕೆಯನ್ನು ಚಿತ್ರಿಸಿದ್ದಾಳೆ.

ಅಕ್ಕಮಹಾದೇವಿಯು ದೇವರನ್ನು ಕೇವಲ ದೇವಸ್ಥಾನಗಳಲ್ಲಿ, ತೀರ್ಥಕ್ಷೇತ್ರಗಳಲ್ಲಿ ಹುಡುಕದೆ ಆತನು ಸರ್ವಾಂತರ್ಯಾಮಿಯಾಗಿದ್ದು ಸಕಲ ಸೃಷ್ಟಿಯಲ್ಲೂ ವ್ಯಾಪಿಸಿದ್ದಾನೆ, ಸೃಷ್ಟಿಯಲ್ಲಿ ನೆಲೆಸಿದ್ದಾನೆ. ಆದ್ದರಿಂದ ದೇವರನ್ನು ಪ್ರಕೃತಿಯಲ್ಲಿಯೇ, ನಿಸರ್ಗದಲ್ಲಿಯೇ ಹುಡುಕುತ್ತಾ ಸ್ಥಾವರವಾಗಿದ್ದ ದೇವರನ್ನು ಬಿಡುಗೊಳಿಸಿ ಜಂಗಮವಾಗಿಸಲು ಪ್ರಯತ್ನಿಸುತ್ತಾಳೆ.

ಅಳಿ ಸಂಕುಲವೆ, ಮಾಮರವೆ,
ಬೆಳುದಿಂಗಳೆ, ಕೋಗಿಲೆಯೆ
ನಿಮ್ಮೆಲ್ಲರನೂ ಒಂದು ಬೇಡುವೆನು,
ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡಡೆ ಕರೆದು ತೋರಿರೆ.

ಈ ವಚನದಲ್ಲಿ ಪ್ರಕೃತಿಯಲ್ಲಿನ ಮರ ಗಿಡ ಬಳ್ಳಿಗಳನ್ನು, ಬೆಳದಿಂಗಳನ್ನು, ಕೋಗಿಲೆ ಕಾಜಾಣಗಳನ್ನು ತನ್ನ ದೈವದ ಬಗ್ಗೆ ವಿಚಾರಿಸುತ್ತಾ ನಿಮ್ಮ ಕಣ್ಣಿಗೆ ಬಿದ್ದರೆ ಕರೆದು ತೋರಿಸಿರೆಂದು ಧನ್ಯ ಭಾವದಿಂದ ಬೇಡಿಕೊಳ್ಳುತ್ತಾಳೆ. ಪ್ರಕೃತಿಯಲ್ಲಿರುವ ಗಿಡಮರಗಳು, ಪಶುಪಕ್ಷಿಗಳು ಮನುಷ್ಯನಿಗಿಂತಲೂ ಹೆಚ್ಚು ವಿಶ್ವಾಸಾರ್ಹವೆಂಬುದನ್ನು ಅಕ್ಕಮಹಾದೇವಿ ಅರಿತಿರುವಂತೆ ಈ ವಚನ ತೋರುತ್ತದೆ.

ಈಳೆ ನಿಂಬು ಮಾವು ಮಾದಲಕ್ಕೆ
ಹುಳಿನೀರನೆರೆದವರಾರಯ್ಯಾ?
ಕಬ್ಬು, ಬಾಳೆ,ಹಲಸು ನಾರಿವಾಳಕ್ಕೆ ಸಿಹಿ ನೀರನೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ, ಮಲ್ಲಿಗೆ, ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತಿ ಜಲವು ಒಂದೆ, ನೆಲನು ಒಂದೆ, ಆಕಾಶವು ಒಂದೆ,
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿ ಬೇರಾಗಿಹ ಹಾಗೆ,
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿ ಬೇರೆ.

ಅಕ್ಕಮಹಾದೇವಿ ಪ್ರಕೃತಿಯಲ್ಲಿ ನೆಲ ಜಲ, ಗಾಳಿ, ಆಕಾಶವು ಒಂದೇ ಆಗಿದ್ದು ಹುಳಿಹಣ್ಣಿನ ಗಿಡಗಳು, ಸಿಹಿ ಹಣ್ಣಿನ ಗಿಡಗಳು, ಆಹಾರ ಧಾನ್ಯಗಳು, ಪರಿಮಳ ಸೂಸುವ ಹೂ ಬಳ್ಳಿಗಳು ಬೆಳೆದು ಕುತೂಹಲದ ಸಂಗತಿಯಾಗಿ ಕಾಣುತ್ತಿದೆ. ಈ ಜಲವು ತನ್ನ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡು ಹೋಗುವಾಗ ತನ್ನ ದೇವನಾದ ಮಲ್ಲಿಕಾರ್ಜುನನು ಸೃಷ್ಟಿಯ ಸಕಲ ಜೀವರಾಶಿಗಳಲ್ಲಿ ವ್ಯಾಪಿಸಿದ್ದರೂ, ಅವನು ಜಲದಂತೆ ತನ್ನತನವನ್ನು ಹೊಂದಿರುತ್ತಾನೆ ಎಂದು ಅಕ್ಕ ಈ ವಚನದಲ್ಲಿ ತಿಳಿಸಿದ್ದಾಳೆ.

ಚರಾಚರವೆಲ್ಲವೂ ಜೀವಜಾಲದಲ್ಲಿದೆ ಎಂದು ಹೇಳುವ ಭಕ್ತಿ ಭಂಡಾರಿ ಬಸವಣ್ಣನವರು ಪ್ರಪಂಚದ ಪ್ರತಿ ಜೀವಿಗಳಲ್ಲೂ ಪರಮಾತ್ಮನ ಸ್ವರೂಪವನ್ನು ಕಾಣಬಹುದು ಎಂದು ವಿಚಾರ ಮಾಡಿದ್ದಾರೆ.

ಮರ ಗಿಡ ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು
ಪ್ರಾಣವಕೊಂದುಂಡು ಶರೀರ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ?

ಎಂಬ ವಚನದಲ್ಲಿ ಜೀವ ಚೈತನ್ಯವಾದ ಪರಿಸರದ ಪ್ರತಿ ಸಸ್ಯಕ್ಕೂ ಜೀವವಿದೆಯಾದುದರಿಂದ ಸಸ್ಯ ಆಹಾರ ಸೇವನೆ ಮಾಡುವುದು ಹಿಂಸೆ ಎನ್ನುವ ರೀತಿಯಲ್ಲಿ ಬಸವಣ್ಣನವರು ಅಭಿಪ್ರಾಯಪಟ್ಟಿದ್ದಾರೆ. ಹಾಗಾಗಿ ಸ್ವೀಕರಿಸುವ ಪ್ರತಿ ಆಹಾರವನ್ನು ನಿತ್ಯ ಲಿಂಗಕ್ಕೆ ಅರ್ಪಿಸಿ ಪ್ರಸಾದವ ಕೊಂಡು ಬದುಕಬೇಕೆಂಬುದು ಅವರ ಚಿಂತನೆ. ಪ್ರಕೃತಿಯ ಶಿಶುವಾದ ಮನುಷ್ಯನು ಪ್ರಕೃತಿಯಲ್ಲಿ ಸಿಗುವ ಸಂಪನ್ಮೂಲಗಳನ್ನು ಯಥೇಚ್ಚವಾಗಿ ಬಳಸಿಕೊಂಡು ಬರಿದು ಮಾಡುತ್ತಿರುವ ಇಂದಿನ ಸನ್ನಿವೇಶದಲ್ಲಿ ಪ್ರತಿ ಸಸ್ಯಕ್ಕೂ ಜೀವವಿದೆ ಎಂಬ ಅಂಶವನ್ನು ತಿಳಿಸಿದ್ದಾರೆ.

ಮರಕ್ಕೆ ಬೇರು ಬಾಯಿಯೆಂದು ತಳಯಿಂಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವನೀವನು

ISSN: 2320-9941
ಪ್ರತಿಸ್ಪಂದ । Prathispandha

ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದಡರ
ನರಕ ತಪ್ಪದು, ಕಾಣಾ ಕೂಡಲಸಂಗಮದೇವಾ.

ಮರದ ಉದಾಹರಣೆಯನ್ನು ತೆಗೆದುಕೊಂಡು ಸಮಾಜದಲ್ಲಿ ಮನುಷ್ಯರೆಲ್ಲರೂ ಹೊಂದಿಕೊಂಡು ಬಾಳುವ ಬಗೆಯನ್ನು ಬಸವಣ್ಣನವರು ಈ ವಚನದಲ್ಲಿ ತಿಳಿಸುತ್ತಾರೆ. ಸಮಾಜದಲ್ಲಿ ಬಾಳುವ ನಾವೆಲ್ಲರೂ ಒಬ್ಬರಿಗೊಬ್ಬರಲ್ಲಿ ಅನುಕಂಪ, ಪ್ರೀತಿ, ನಂಬಿಕೆಯಿಂದ ಬದುಕಬೇಕು. ಹೇಗೆ ಮರದ ಬೇರು ಮಣ್ಣೊಳಗಿದೆ ಎಂದು ನೀರೆರೆದಾಗ ಅದು ಹಣ್ಣುಗಳೊಂದಿಗೆ ನೆರಳನ್ನು ನೀಡುತ್ತದೆಯೋ, ಹಾಗೆಯೇ ಲಿಂಗ ಪೂಜೆಯೊಂದಿಗೆ ಮನೆಗೆ ಬಂದ ಜಂಗಮರಾಗಿರಬಹುದು ಅಥವಾ ಹಸಿವಿನಿಂದ ಬಂದ ಪ್ರಾಣಿ ಪಕ್ಷಿಗಳಾಗಿರಬಹುದು, ಅವುಗಳಿಗೂ ಇರುವಷ್ಟರಲ್ಲಿಯೇ ಸ್ವಲ್ಪ ಅರ್ಪಿಸಿದಾಗ ಮಾನವ ಜನ್ಮ ಸಾರ್ಥಕ ರೂಪ ಪಡೆಯುತ್ತದೆ. ಮನೆಗೆ ಬಂದ ಅತಿಥಿಗಳ ಸತ್ಕಾರ ಮಾಡಿದರೆ ನಿಜವಾಗಿಯೂ ದೇವರ ಪೂಜೆ ಮಾಡಿದಷ್ಟೇ ಪುಣ್ಯಪ್ರಾಪ್ತಿ ಆಗುತ್ತದೆ ಎಂಬ ನಿಲುವು ಬಸವಣ್ಣನವರದ್ದಾಗಿದೆ.

ಪ್ರಕೃತಿಯ ವಿಸ್ಮಯ ಮತ್ತು ತನ್ನೊಳಗೆ ಅಡಗಿಸಿಕೊಂಡಿರುವ ಶ್ರೇಷ್ಠ ರತ್ನವನ್ನು ಕುರಿತು ಬಸವಣ್ಣನವರು ತಮ್ಮ ಮತ್ತೊಂದು ವಚನದಲ್ಲಿ...

ಕೆರೆ ಹಳ್ಳ ಬಾವಿಗಳು ಮೈದೆಗೆದರೆ ಗುಳ್ಳೆ ಗೊರಚಿ ಚಿಪ್ಪುಗಳ ಕಾಣಬಹುದು
ವಾರಿಧಿ ಮೈದೆಗೆದರೆ
ರತ್ನಂಗಳ ಕಾಣಬಹುದು
ನಮ್ಮ ಕೂಡಲಸಂಗನ ಶರಣರು ಮನದೆರೆದು
ಮಾತನಾಡಿದರೆ ಲಿಂಗವ ಕಾಣಬಹುದು ಎಂದಿದ್ದಾರೆ.

ಅತ್ಯಂತ ಸರಳವಾದ ವಚನದಲ್ಲಿ ಜಾಗತೀಕರಣದ ವಿಷ ವರ್ತುಲದೊಳಗೆ ದಿನೇ ದಿನೇ ಬಂಧಿಯಾಗುತ್ತಿರುವ ಈ ಸಂಕ್ರಮಣದ ಕಾಲದಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾದ ಅಗತ್ಯವನ್ನು ಬಸವಣ್ಣನವರು ಪ್ರತಿಪಾದಿಸುತ್ತಾರೆ. ಪ್ರಕೃತಿಯಲ್ಲಿರುವ, ಸಮುದ್ರ– ಭೂಮಿಯಲ್ಲಿರುವ ಮುಖ್ಯ ಶ್ರೇಷ್ಠ ಖನಿಜ ಸಂಪತ್ತನ್ನು ನಾವು ಹಾಳು ಮಾಡುವುದರಿಂದ ಬೇಗನೆ ಬರಿದು ಮಾಡುತ್ತಿರುವುದರಿಂದ ಮುಂದೆ ನಮಗೆ ತೊಂದರೆ ಕಟ್ಟಿಟ್ಟ ಬುತ್ತಿ ಎಂಬ ಎಚ್ಚರಿಕೆಯನ್ನೂ ನೀಡುತ್ತಾರೆ.

ಅದಕ್ಕಾಗಿಯೇ ಬಸವಣ್ಣನವರು ಹೇಳುತ್ತಾರೆ..
ಹಾಲ ತೊರೆಗೆ ಬೆಲ್ಲದ ಕೆಸರು
ಸಕ್ಕರೆಯ ಮಳಲು ತವರಾಜದ
ನೊರೆ ತೆರೆಯಂತೆ ಆದ್ಯರ ವಚನವಿರಲು
ಬೇರೆ ಬಾವಿಯ ತೋಡಿ ಉಪ್ಪನೀರುಂಬುವನ ವಿಧಿಯಂತೆ
ಆಯಿತೆನ್ನ ಮತಿ ಕೂಡಲಸಂಗಮದೇವಾ.

ಆಗಬೇಕಾದ ಕೆಲಸ, ಮಾಡಬೇಕಾದ ರೀತಿ, ಮುಂದೆ ನಮಗೆ ಸಿಗುವ ಸತ್ಫಲವನ್ನು ಕುರಿತು ಬಸವಣ್ಣನವರು ಪ್ರಕೃತಿಯ ಅಂಶಗಳನ್ನೆ ಉದಾಹರಣೆಯಾಗಿ ಇಲ್ಲಿ ತಿಳಿಸುತ್ತಾರೆ.

ಜಗದಗಲ ಮುಗಿಲಗಲ ಮಿಗೆಯಗಲ
ನಿಮ್ಮಗಲ ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತಗತ್ತತ್ತ ನಿಮ್ಮ ಶ್ರೀಮುಕುಟ
ಆಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲ ಸಂಗಮದೇವಯ್ಯ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ.

ನಮ್ಮ ಎದೆಯ ಮೇಲೆ ಹೃದಯಸ್ಥನಾಗಿ ಲಿಂಗದೇವನು ಶರಣ ಸತಿಗೆ ಲಿಂಗಪತಿಯಾಗಿ ನೆಲೆಗೊಳ್ಳುವ ದೃಷ್ಟಿ ಯೋಗವನ್ನು ಇಲ್ಲಿ ಪ್ರಸ್ತಾಪಿಸುವ ಇಷ್ಟಲಿಂಗದ ವೈಜ್ಞಾನಿಕ ಕಲ್ಪನೆ ಬಸವಣ್ಣನವರಿಗಾಗಿದೆ. ಜಗದಗಲ, ಮುಗಿಲಗಲ, ಮಿಗೆಯಗಲ ಇರುವ ಆಗಮ್ಯ, ಅಗೋಚರ, ಅಪ್ರತಿಮ ಲಿಂಗವನ್ನು ಕರಸ್ಥಲದಲ್ಲಿ ಇಟ್ಟುಕೊಂಡಿರುವ ಪ್ರಕೃತಿಯ ವಿಸ್ಮಯವನ್ನು ಕಂಡು ಬೆರಗಾಗಿದ್ದಾರೆ.

ಕಾಯಕಯೋಗಿ ಬಸವೇಶ್ವರರು ಶಿವನ ಅದ್ಭುತ ಲೀಲೆಯನ್ನು ಸಾದೃಶವಾದ ಶಕ್ತಿಯಿಂದ ಕಾಣಬಹುದಾದ ರೀತಿಯನ್ನು ಈ ವಚನದಲ್ಲಿ ಹೇಳಿದ್ದಾರೆ.

ಭೂಮಿಯೊಳಗೆ ನಿಧಾನವಿದ್ದುದ

ಅಂಜನವುಳ್ಳವರು ತೋರಿರಯ್ಯಾ
ಅಂಜಲು ಬೇಡ ಕಂಡ ಮನದಲ್ಲಿ
ಸಂದೇಹವ ಮಾಡದಿರಾ,
ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು
ನಂಬುಗೆಯುಳ್ಳದೆ ತೋರುವ ಕೂಡಲಸಂಗಯ್ಯ.

ಭೂಮಿಯಲ್ಲಿರುವ ವಿಸ್ಮಯವನ್ನು ಕಾಣಬೇಕಾದರೆ ಚಕ್ಷುಗಳಿಗೆ ಅಂಜನವನ್ನು ಹಚ್ಚಿಕೊಂಡಾಗ ಮಾತ್ರ ಭೂದೇವಿಯ ಒಡಲಿನಲ್ಲಿರುವ ಸಂಪತ್ತು ಕಾಣಲು ಸಾಧ್ಯವಾಗುತ್ತದೆ. ಅದರಂತೆ ಅಂಜದೆ ಅಳುಕದೆ ದಿಟ್ಟ ಸಂಕಲ್ಪದಿಂದ ತನು ಮತ್ತು ಮನವನ್ನು ಜಂಗಮನಲ್ಲಿ ಭಕ್ತಿಯನ್ನು ತೊಡಗಿಸಿದಾಗ ಲಿಂಗೈಕ್ಯ ಸ್ವರೂಪನಾದ ಪರಮಾತ್ಮನಿದ್ದಾನೆ ಎಂದು ಪ್ರಕೃತಿಯ ಸಾದೃಶ್ಯದೊಂದಿಗೆ ಪ್ರಕೃತಿಯಲ್ಲಿರುವ ವಿಸ್ಮಯವನ್ನು ಕಾಣುವ ಬಗೆಯನ್ನು ಬಸವಣ್ಣನವರು ತಿಳಿಸುತ್ತಾರೆ.

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣಾಯಿತ್ತು
ನಿಷ್ಪತ್ತಿ ಎಂಬ ಹಣ್ಣು ತೊಟ್ಟು
ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.

ಪ್ರಕೃತಿಯ ಸೃಷ್ಟಿ ಹೇಗೆ ಸಾರ್ಥಕತೆ ಪಡೆಯುತ್ತದೆಂಬುದನ್ನು ಮನುಷ್ಯನ ಜೀವನದೊಂದಿಗೆ ಸಮೀಕರಿಸಿ ಬಸವಣ್ಣನವರು ಅತ್ಯಂತ ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ.

ಅಲ್ಲಮ ಪ್ರಭುದೇವರು ತಮ್ಮ ಬೆಡಗಿನ ವಚನದಲ್ಲಿ ಅಂತರಂಗದ ಕೃಷಿಯ ಬಗ್ಗೆ ಅತ್ಯಂತ ಮಾರ್ಮಿಕವಾಗಿ ತಿಳಿಸುತ್ತಾರೆ.

ತನುವ ತೋಂಟವ ಮಾಡಿ ಮನವ ಗುದ್ದಲಿ ಮಾಡಿ,
ಅಗೆದು ಕಳೆದೆನಯ್ಯಾ ಭ್ರಾಂತಿನ ಬೇರೊಡೆದು
ಸಂಸಾರದ ಹೆಂಟೆಯ ಬಗಿದು, ಬಿತ್ತಿದೆನಯ್ಯಾ ಬ್ರಹ್ಮ ಬೀಜವ
ಅಖಂಡಮಂಡಲವೆಂಬ ಬಾವಿ, ಪವನೆಂಬ ರಾಟಾಳ,
ಸುಷಮ್ನ ನಾಳದಿಂದವೆ ಉದಕವ ತಿದ್ದಿ,
ಬಸವಗಳೈವರು ಹಸೆಗೆಡಿಸಿದರೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳೂ ಈ ತೋಂಟದೊಳಗೆ ಜಾಗರವಿದ್ದು
ಈ ಸಸಿಯ ಸಲಹಿದೆ ಕಾಣಾ ಗುಹೇಶ್ವರಾ.

ದೇಹವೆಂಬ ತೋಟದ ಕೃಷಿಯನ್ನು ಎಳೆಯಾಗಿ ಬಿಡಿಸಿ ಹೇಳುತ್ತಾ ಹಸನುಗೊಳಿಸಬೇಕಾದ ವಿಧಾನವನ್ನು ಅಲ್ಲಮಪ್ರಭುದೇವರು ಅತ್ಯಂತ ಅರ್ಥಪೂರ್ಣವಾಗಿ ತಿಳಿಸಿದ್ದಾರೆ. ಗೊಗ್ಗಯ್ಯ ಶರಣನಿಗೆ ಎಂಥ ತೋಟವನ್ನು ಮಾಡಬೇಕೆಂಬುದನ್ನು ತಿಳಿಯಲು ಈ ರೀತಿ ಸ್ಪಷ್ಟಪಡಿಸಿರುತ್ತಾರೆ. ಕೇವಲ ಹೊರಗಿನ ಭೂಮಿಯನ್ನು ಉತ್ತಿ ಬಿತ್ತಿ ಬೆಳೆದು ಊಟ ಮಾಡಿದರೆ ಜೀವನ ಸಾರ್ಥಕವಾಗುವುದಿಲ್ಲ. ಮಾನವನಾಗಿ ಹುಟ್ಟಿದ ಮೇಲೆ ತನ್ನ ನಿಜ ಸ್ವರೂಪವನ್ನು ತಾನು ಅರಿಯಬೇಕು. ಅಂಗವನ್ನೇ ಭೂಮಿಯನ್ನಾಗಿಸಿಕೊಂಡು ಲಿಂಗ ಬೆಳೆಯನ್ನು ಬೆಳೆದು ಅತ್ಯಂತ ಸಾರ್ಥಕತೆಯ ಕಡೆಗೆ ಹೋಗಬೇಕಾದ ನಿಲುವನ್ನು ಪ್ರಭುದೇವರು ತಿಳಿಸುತ್ತಾರೆ.

ಮುಂದುವರೆದ ಹಾಗೆ ಒಕ್ಕಲಿಗ ಮುದ್ದಣ್ಣ..
ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ
ವಿಶ್ವಾಸವೆಂಬ ಬಿತ್ತಿ ಬಲಿದು
ಉಂಡು ಸುಖವಾಗಿರಬೇಕೆಂದ

ISSN: 2320-9941

ಕಾಮ ಭೀಮ ಜೀವಧನದೊಡೆಯ

ಎಂದು ಇದಕ್ಕೆ ಪೂರಕವಾದ ಮಾತುಗಳನ್ನೇ ನುಡಿದಿದ್ದಾರೆ. ವಕ್ಕಲಿಗ ಮುದ್ದಣ್ಣನು ರೈತನಾಗಿ ಭೂಮಿಯನ್ನು ಹುಟ್ಟಿ ಬೆಳೆದಂತೆ ಅಂಗವನ್ನೇ ಹದಗೊಳಿಸಿ, ತತ್ವ ಬಿತ್ತಿ ಬೆಳೆದುಂಡು ಅರಿಯಬಹುದು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಮಹಾಜ್ಞಾನಿ ಚೆನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ..

ಆಕಾಶದಲ್ಲಾಡುವ ಪಟಕ್ಕಾದರೂ ಮೂಲ ಸೂತ್ರವಿರಬೇಕು
ಕಲಿಯಾದಡೂ ಕಜ್ಜವಿಲ್ಲದೆಯಾಗದು
ಭೂಮಿಯಿಲ್ಲದೆ ಬಂಡಿ ನಡೆವುದೆ?
ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು,
ಕೂಡಲ ಚೆನ್ನಸಂಗಮದೇವರಲ್ಲಿ ಸಂಗವಿಲ್ಲದೆ ನಿಸ್ಸಂಗಿಯೆಂದು
ನುಡಿಯಬಹುದೇ ಪ್ರಭುವೆ?

ಎಂದು ಪ್ರಶ್ನಿಸುವ ಮೂಲಕ ಗಾಳಿಪಟವು ಆಕಾಶದಲ್ಲಿ ಹಾರಾಡುತ್ತಿದ್ದರೂ ಅದರ ಸೂತ್ರ ಹಿಡಿದು ನೆಲದ ಮೇಲೆ ನಿಂತು ಹಾರಾಡಿಸಬೇಕಾಗುತ್ತದೆ. ಶೂರರಿಗೆ ಹೋರಾಡುವುದಕ್ಕೆ ಖಡ್ಗ ಅಗತ್ಯವಾಗಿ ಬೇಕಾಗುತ್ತದೆ. ಪ್ರವಾಸಕ್ಕೆ ಚಕ್ಕಡಿದ್ದರೂ ಅದಕ್ಕೆ ನೆಲವೇ ಆಧಾರ. ಹಾಗಾಗಿ ಭವ ಬಂಧನ ಹಿಂಗಬಾರದು, ಇಷ್ಟಲಿಂಗ ಸಂಗವಿಲ್ಲದೆ ಎಂದು ಸುಂದರ ಉಪಮೆಗಳ ಮೂಲಕ ಪ್ರತಿಪಾದಿಸುತ್ತಾರೆ.

ಗುಬ್ಬಿ ಹೆರರ ಮನೆಯನ್ನು ತನ್ನ ಮನೆಯೆಂಬಂತೆ
ಧರೆ ಧನ ವನಿತೆಯರು ಎನ್ನವರು ತನ್ನವರೆಂದು
ಹೋರಿಹೋರಿ ಸಾಯುತ್ತಿದೆ ಜೀವ, ಸರ್ವಕರ್ತೃ ಕೂಡಲ ಚೆನ್ನಸಂಗಮ ದೇವನೆಂದರಿಯದೆ ಟ

ಎಂಬ ಮತ್ತೊಂದು ವಚನದಲ್ಲಿ ಗುಬ್ಬಿಯು ಪರರ ಮನೆಯನ್ನು ತನ್ನ ಮನೆಯೆಂದು ಭ್ರಮಿಸುವಂತೆ, ಮನುಷ್ಯನು ಭೂಮಿ, ಐಶ್ವರ್ಯ, ವನಿತೆಯರು ತನ್ನವರೆಂದು ತಿಳಿದು ಅವುಗಳ ಸಂಪಾದನೆಗಾಗಿಯೇ ಸದಾ ಸೆಣೆಸಾಡುತ್ತಿರುತ್ತಾನೆ. ಆದರೆ ಎಲ್ಲಕ್ಕೂ ಕಾರಣಕರ್ತನಾದ ಭಗವಂತನೊಬ್ಬನಿದ್ದಾನೆಂದು ತಿಳಿಯದಾಗುತ್ತಾನೆ ಎಂದು ಈ ವಚನದಲ್ಲಿ ತಿಳಿಸಿದ್ದಾರೆ.

ಒಟ್ಟಾರೆ ವಚನಕಾರರು ಪ್ರಕೃತಿಯನ್ನು ಪ್ರತ್ಯೇಕವಾಗಿಸಿ ಬದುಕನ್ನು ನೋಡಿಲ್ಲ. ಸರ್ವಾಂತರ್ಯಾಮಿಯಾಗಿರುವ ಪರಮಾತ್ಮನನ್ನು ಯಾವುದೋ ಒಂದು ಕೆರೆಯ ನೀರು ಹಾಗೂ ಪುಷ್ಪಗಳಿಂದ ಅರ್ಚಿಸುವುದರ ಮೂಲಕ ಲಿಂಗಾರ್ಚನೆ ಮಾಡಿದ್ದೇವೆ ಎಂದುಕೊಳ್ಳಲು ಸಾಧ್ಯವಿಲ್ಲ ಎನ್ನುವ ಹಾಗೆ ಭಕ್ತಿಯು ವೈಚಾರಿಕತೆಯ ನೆಲೆಯಲ್ಲಿ ಸಾಗಬೇಕೆಂಬುದನ್ನು ಪ್ರಕೃತಿಯ ಪಶು ಪಕ್ಷಿ ಪ್ರಾಣಿಗಳ ಉದಾಹರಣೆಯೊಂದಿಗೆ ಮರಗಿಡ ಬಳ್ಳಿಗೆ ಉಪಮೆಗಳೊಂದಿಗೆ ವಚನಕಾರರು ತಮ್ಮ ವಚನಗಳನ್ನು ರಚಿಸಿದ್ದಾರೆ. ಪ್ರಕೃತಿಯ ಪ್ರಮುಖ ಭಾಗವಾದ ಮನುಷ್ಯನು ಪ್ರಕೃತಿಯನ್ನು ಉಳಿಸಿಕೊಳ್ಳಬೇಕಾದದ್ದು ಇಂದಿನ ಅಗತ್ಯ. ಮುಂದಿನ ಪೀಳಿಗೆಗೆ ಪ್ರಕೃತಿಯ ಚರಾಚರಗಳನ್ನು ಉಳಿಸಿಕೊಂಡು, ಪೋಷಿಸಿಕೊಂಡು ಹೋದಾಗ ಮಾತ್ರ ಪ್ರಕೃತಿಯ ಶಿಶುವಾದ ಮನುಷ್ಯನ ಜೀವನಕ್ಕೆ ಒಂದು ಅರ್ಥ ಬರುತ್ತದೆ, ನೆಮ್ಮದಿಯಿಂದ ಜೀವನ ಸಾಗಿಸಲು ಸಾಧ್ಯವಾಗುತ್ತದೆ. ಕೋವಿಡ್ ಸಂದರ್ಭದಲ್ಲಿ ಆಮ್ಲಜನಕದಂತ ವಸ್ತು ಹೇಗೆ ಮುಖ್ಯ ಎಂಬುದನ್ನು ಇಡೀ ಜಗತ್ತು ಕಂಡಿದೆ ಹಾಗಾಗಿ ಮುಂದಿನ ತಲೆಮಾರಿಗೆ ಪ್ರಕೃತಿಯನ್ನು ಉಳಿಸಬೇಕಾದ ಅಗತ್ಯವನ್ನು ನಾವಿಲ್ಲಿ ಗಮನಿಸಬಹುದಾಗಿದೆ.

■■

ಪರಾಮರ್ಶನ ಗ್ರಂಥಗಳು:

1. ಮಹಾಮನೆ – ಸಂ.ಹಿ ಮ. ಬಸವಯ್ಯ., ಸಂಚಿಕೆ 10, ಸಂಪುಟ 16, ಮೇ 2014. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.
2. ಬಸವ ಪಥ – ಕನ್ನಡ ಮಾಸ ಪತ್ರಿಕೆ ಸಂಚಿಕೆಗಳು., ಮೇ 2022, ಮೇ 2018, ನವೆಂಬರ್ 2020, ಬಸವ ಸಮಿತಿ, ಬಸವ ಭವನ, ಬೆಂಗಳೂರು.

ಸಾಲು ಮರದ ತಿಮ್ಮಕ್ಕ – ಆದರ್ಶದ ವ್ಯಕ್ತಿತ್ವ.

● ಡಾ. ರವಿಶಂಕರ್ ಎ. ಕೆ.

ಒಬ್ಬ ಸಾಮಾನ್ಯ ವ್ಯಕ್ತಿ ಅಸಾಮಾನ್ಯ ವ್ಯಕ್ತಿತ್ವವಾಗಿ ಬೆಳೆಯುವುದು ಹೇಗೆ ಎಂಬ ಪ್ರಶ್ನೆಗೆ ನಮ್ಮಲ್ಲಿ ಹಲವು ಮಾದರಿ ವ್ಯಕ್ತಿತ್ವಗಳಿವೆ. ಸರಳವಾಗಿ ಬದುಕಬೇಕು. ಆಸೆಗಳಿಂದ ಮುಕ್ತವಾಗಬೇಕು. ಇನ್ನೊಬ್ಬರಿಗೆ ತೆ–ಊಂದರೆ ಮಾಡದೆ, ಎಲ್ಲರನ್ನೂ ಸ್ವೀಕರಿಸುವ ಗುಣ ಹೊಂದಿರಬೇಕು. ದುಡಿದು ತಿನ್ನಬೇಕು, ಇರುವಷ್ಟರಲ್ಲೇ ತೃಪ್ತಿಪಡಬೇಕು. ತನ್ನ ಬದುಕನ್ನು ಮುಕ್ತವಾಗಿ ಸಮಾಜದಲ್ಲಿ ತೆರೆದಿಟ್ಟು, ತಾನು ಸಂಪೂರ್ಣ ಸ್ವಾರ್ಥವನ್ನು ಕಳಚಿ, ನಿಸ್ವಾರ್ಥಿಗಳಾದರೆ ಮಾತ್ರ ಆದರ್ಶ ವ್ಯಕ್ತಿಯಾಗಲು ಸಾಧ್ಯ. ಇಂತಹ ಆದರ್ಶಗಳು ಅಪರೂಪವಾಗಿ ಹುಟ್ಟುತ್ತಾರೆ. ಈ ಸಮಾಜದ ನಡುವೆಯೇ ಅಪರೂಪವಾಗಿ ಬದುಕುತ್ತಾರೆ.

ಆದರ್ಶ ವ್ಯಕ್ತಿಗಳನ್ನು ಒಂದೊಂದು ಕ್ಷೇತ್ರಗಳ ಮೂಲಕ ನಾವು ಗುರ್ತಿಸುತ್ತಲೇ ಬಂದಿದ್ದೇವೆ. ಅದೇ ಕ್ಷೇತ್ರದಲ್ಲಿ ಮತ್ತೊಬ್ಬರು ಬಂದರೆ ಇವರ ಪರಂಪರೆಯನ್ನು ಮುಂದುವರಿಸಿದವರು ಎಂದು ಗುರ್ತಿಸುತ್ತೇವೆ. ವಿಶೇಷವೆಂದರೆ ಇಂತಹ ಆದರ್ಶ ವ್ಯಕ್ತಿಗಳು ತಾವು ಬದುಕಿರುವ ತನಕ, ತಮ್ಮದೇ ನಿಲುವಿನಲ್ಲಿ ಬದುಕುತ್ತಾರೆ. ಸರಳವಾದ ಆದರ್ಶಗಳನ್ನು ತೊಡುತ್ತಾ ಮಾದರಿಯಾಗಿರುತ್ತಾರೆ. ಅವರ ಮರಣದ ನಂತರ ಅವರನ್ನು ಸಂಕೇತವಾಗಿ ಮಾಡಿಕೊಂಡು ಒಂದು ದೊಡ್ಡ ಉದ್ಯಮವೇ ಬೆಳೆಯುತ್ತದೆ ಇದು ನಮ್ಮ ಸಮಾಜದ ದೊಡ್ಡ ದುರಂತ.

ಕನ್ನಡ ನಾಡಿನಲ್ಲಿ ಪರಿಸರ ಕ್ಷೇತ್ರದ ಆದರ್ಶ ವ್ಯಕ್ತಿಗಳನ್ನು ಇಂದು ನಾವು ಹಸಿರು ಓದಿನೊಂದಿಗೆ ಅಧ್ಯಯನ ಮಾಡಬೇಕಿದೆ. ಪರಿಸರ ಎಂಬುದು ಸಹಜವಾದುದು. ಈ ಸಹಜ ಸಂಸ್ಕೃತಿಯೊಂದಿಗೆ ಸಹಕರಿಸಿದರೆ ಸಾಕು. ಪ್ರತಿಯೊಬ್ಬರೂ ಆದರ್ಶವ್ಯಕ್ತಿಗಳಾಗಬಹುದು. ಆದರೆ, ಇದರ ವಿರುದ್ಧವೇ ನಮ್ಮ ಅತಿಹೆಚ್ಚು ಕಾರ್ಯಗಳಿರುವಾಗ ಕೆಲವರಾದರೂ

ವಿಳಾಸ: ಡಾ. ರವಿಶಂಕರ್ ಎ. ಕೆ
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಮಾನವಿಕ ನಿಕಾಯ,
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು – 560077
9663433403
ravishankar@kristujayanti.com

ISSN: 2320-9941

ಇದರ ಒಳಿತಿಗಾಗಿ ಶ್ರಮಿಸಿದ್ದಾರೆ, ಶ್ರಮಿಸುತ್ತಿದ್ದಾರೆ. ಬಾಲವನ ನಿರ್ಮಿಸಿ ಪರಿಸರ ಅಧ್ಯಯನದಲ್ಲಿ ವಿಭಿನ್ನವಾಗಿ ಪ್ರಕೃತಿ ಶಿಕ್ಷಣ ನೀಡಿದವರು ಶಿವರಾಮಕಾರಂತರು, ಪರಿಸರ ಛಾಯಾಚಿತ್ರ ಗ್ರಾಹಕ, ಪರಿಸರವಾದಿ ಡಾ. ಕೃಷ್ಣಾನಂದ ಕಾಮತರು, ಸಹ್ಯಾದ್ರಿಯ ಉಳಿವಿಗಾಗಿ ಹೋರಾಡಿದ ಪರಿಸರವಾದಿ ಕುಸುಮ ಸೊರಬ(ಕುಸುಮಕ್ಕ), ಇಕೋ-ವಾಚ್ ಎನ್ ಜಿ ಒ ಸ್ಥಾಪಿಸಿದ ಚಿತ್ರ ನಿಮಾಪಕ, ನಿರ್ದೇಶಕ, ನಟರಾದ ಸುರೇಶ್ ಹೆಬ್ಳೀಕರ್, ಹಸಿರುಹಾದಿ ಕರ್ತೃ ಪರಿಸರವಾದಿ ಡಾ. ಅ.ನ. ಯಲ್ಲಪ್ಪ ರೆಡ್ಡಿ ಇವರ ಸಾಲಿಗೆ ಸೇರುವ 111 ವರ್ಷ ವಯಸ್ಸಿನ ಸಾಲುಮರದ ತಿಮ್ಮಕ್ಕ ಮೊದಲಾದಂತೆ ಇತ್ತೀಚೆಗೆ ಹಲವು ಆಯಾಮಗಳಲ್ಲಿ ಪರಿಸರ ಚಿಂತಕರನ್ನು ಗುರ್ತಿಸಬಹುದು. ಚಂದ್ರಶೇಖರ ವಿ. ನಂಗಲಿಯಂತಹ ಪರಿಸರ ಚಿಂತಕರ ಜೊತೆಯಲ್ಲಿ ಕೃಷ್ಣಮೂರ್ತಿ ಬಿಳಿಗೆರೆಯಂತಹ ನುಡಿ, ನಡೆ, ಬದುಕು ಏಕಮುಖವಾಗಿ ಪರಿಸರಕ್ಕೆ ಅರ್ಪಿಸಿಕೊಂಡವರು.

ಈ ಲೇಖನದಲ್ಲಿ ಸಾಲು ಮರದ ತಿಮ್ಮಕ್ಕನವರ ಕುರಿತು ಸಾವಿರಾರು ಬರಹಗಳ ನಡುವೆ ಮಾರ್ಗದರ್ಶಿಯಾಗಿ ಕಾಣುವ ವಿಭಿನ್ನ ಸ್ವರೂಪಗಳನ್ನು ಇಲ್ಲಿ ಚರ್ಚಿಸಲಾಗುವುದು. ಮಕ್ಕಳಿಲ್ಲದ ತಾಯಿ ಮರಗಳನ್ನೇ ಮಕ್ಕಳನ್ನಾಗಿ ಭಾವಿಸಿ ಮರಗಳನ್ನು ನೆಟ್ಟರು. ಇಂದು ಅವರ ಹೆಸರಿನಲ್ಲಿ ಎಂಟು ಸಾವಿರ ಮರಗಳು ಸೃಷ್ಟಿಗೊಂಡಿವೆ. ಇವರ ಹೆಸರಿನ ಮೂಲಕ ನೆಟ್ಟ ಗಿಡಗಳ ಸಂಖ್ಯೆ ಅದೆಷ್ಟೋ ಲೆಕ್ಕವಿಲ್ಲ. ನಮ್ಮಲ್ಲಿ ಆದರ್ಶಗಳನ್ನು ಸಾಲು ಸಾಲು ಪ್ರಶಸ್ತಿ, ಸನ್ಮಾನಗಳ ಮೂಲಕ ಶೃಂಗರಿಸುತ್ತಾರೆಯೇ ಹೊರತು, ಅವರ ಒಂದಿಷ್ಟು ಆದರ್ಶಗಳನ್ನು ತಮ್ಮ ಬದುಕಿನಲ್ಲಿ ಸ್ವೀಕರಿಸದ ಬಹುಮಂದಿಗಳನ್ನೇ ಈ ಸಮಾಜ ತುಂಬಿದೆ. ಇಂತಹ ಸಮಾಜದಲ್ಲಿ ಸರಳವಾಗಿ ಯಾವ ಯಾವ ಕಾರ್ಯಗಳನ್ನು ನಿರ್ವಹಿಸಬಹುದು ಎಂಬುದನ್ನೂ ಕೂಡ ಇಲ್ಲಿ ಚರ್ಚಿಸಬಹುದು.

ಚಿಕ್ಕತಿಮ್ಮಕ್ಕ ಎಂಬ ವ್ಯಕ್ತಿತ್ವವು ಸಾಲುಮರದ ತಿಮ್ಮಕ್ಕನಾಗುವ ಬಹು ಸುದೀರ್ಘವಾದ ಪ್ರಯಾಣವನ್ನು ಕೆಲವು ವಿಚಾರಗಳ ಮೂಲಕ ಅವಲೋಕಿಸಲು ಇಷ್ಟಪಡುತ್ತೇನೆ. 1930 ನವೆಂಬರ್ 17ರಂದು ಚಿಕ್ಕತಿಮ್ಮಕ್ಕ ಜನಿಸಿದ ದಿನಾಂಕವು ದಾಖಲಾಗಿದೆ. ಚಿಕ್ಕರಂಗಯ್ಯ ಮತ್ತು ವಿಜಯಮ್ಮನ ಮಗುವಾಗಿ ಜನಿಸಿದ ಈಕೆಗೆ ಕಲ್ಪಿತ ಪುರಾಣದಂತಹ ಜನ್ಮವೃತ್ತಾಂತ ಬರೆಯಬಾರದು. ಅದೊಂದು ಬಡತನದಲ್ಲಿ ಅಂದಿನ ಸಮಾಜದ ಕೆಳಜಾತಿಯವರು ಅನುಭವಿಸಿದ ನೋವು, ದುಮ್ಮಾನಗಳ ಸಂಕಷ್ಟವೇ ಈಕೆಯ ಬಾಲ್ಯವನ್ನು ರೂಪಿಸಿದೆ. ಮುತ್ತುಗದ ಎಲೆ ಕೊಯ್ದು, ಗುಬ್ಬಿ ಪಟ್ಟಣಕ್ಕೆ ಹೊತ್ತು ತಂದು ಮಾರಾಟ ಮಾಡಿ ಅದರಿಂದ ಬದುಕಿದ ಕಥೆಯಾಗಲಿ, ಯಜಮಾನಿ ನರಸಮ್ಮನ ಕಾರುಣ್ಯದಲ್ಲಿ ಮನೆಗೆಲಸಮಾಡಿ ಬದುಕಿದ ಕಥೆಯಾಗಲಿ ನಿಜವಾದ ಅರ್ಥಗಳನ್ನು ಪಡೆದುಕೊಂಡಿವೆ. ಇಂತಹ ಕಷ್ಟಗಳನ್ನು ಆ ಕಾಲದ ಪ್ರತಿ ಬಡತನದ ಕುಟುಂಬವೂ ಅನುಭವಿಸಿದೆ. ಚಿಕ್ಕ ತಿಮ್ಮಕ್ಕ ಇಂತಹ ಬಾಳ್ವೆಗಳ ನಡುವೆ ಬದುಕಿದ ಜೀವವೆಂದು ಗೌರವಿಸಬಹುದು.

*** ಸಾಲು ಮರದ ತಿಮ್ಮಕ್ಕನ ಆದರ್ಶ ಕಾರ್ಯಗಳೇನು?**

ಸಾಲು ಮರಗಳ ಪರಿಕಲ್ಪನೆಯು ಅಶೋಕನ ಕಾಲದಿಂದಲೂ ಪಠ್ಯವಾಗಿ ಮಕ್ಕಳಿಗೆ ಆದರ್ಶವಾಗಿದೆ. ಶಾಲೆಗೆ ಹೋಗದ ಜನಗಳಿಗೆ ಇದೊಂದು ಅನುಭವವಷ್ಟೆ. ತಿಮ್ಮಕ್ಕನ ಬಾಲ್ಯದಲ್ಲಿ ಸಾಮಾನ್ಯವಾಗಿ ಜನಗಳೆಲ್ಲಾ ನಡೆದೇ ಓಡಾಡುತ್ತಿದ್ದರು. ಸ್ವಲ್ಪ ಸ್ಥಿತಿವಂತರು ಎತ್ತಿನಗಾಡಿ ಬಳಸುತ್ತಿದ್ದರು. ಇವರೀರ್ವರ ನಡುವೆ ಅಂತಹ ವ್ಯತ್ಯಾಸವಿರಲಿಲ್ಲ. ಇಬ್ಬರೂ ರಸ್ತೆಯಲ್ಲಿ ಚಲಿಸುವಾಗ ತಮಗೆ ಸುಸ್ತಾದರೆ, ಬಿಸಿಲಿಗೆ ಸಾಲುಮರಗಳನ್ನು ನೆಡುವುದು, ಮಜ್ಜಿಗೆ, ನೀರು ಮೊದಲಾದಂತೆ ಅರವಟ್ಟಿಗೆ ಇಡುವುದು ಜನಗಳ ರೂಢಿಯಾಗಿತ್ತು. ದಾನಮಾಡುವುದು ಪುಣ್ಯದ ಕೆಲಸ. ಇನ್ನೊಬ್ಬರಿಗೆ ನೀಡಿದಷ್ಟು ಶಿವ ಮೆಚ್ಚುತ್ತಾನೆ ಎಂಬ ನಂಬಿಕೆಗಳು ಅವರನ್ನು ಭಾವನಾತ್ಮಕವಾಗಿ ಬೆಸೆದಿದ್ದವು. ಎಲ್ಲರೂ ತಿರುಗುವ ರಸ್ತೆಗಳ ಅಕ್ಕಪಕ್ಕ ಮರಗಳನ್ನು ನೆಡುವುದು, ನೆಟ್ಟು ಕಾಪಾಡುವುದು ಅತ್ಯಂತ ಜವಾಬ್ದಾರಿಯುತವಾದ ಕೆಲಸವಾಗಿತ್ತು. ಅಂದೂ ಕೂಡ ಇಂದಿನಂತೆಯೇ ಹಾಳುಮಾಡುವ ಇಲ್ಲವೆ ಪ್ರಾಣಿಗಳು ನಾಶಮಾಡುವ ಪ್ರಕ್ರಿಯೆ ಇತ್ತು. ಅದರ ನಡುವೆಯೇ ಕಾಪಾಡುತ್ತಾ ಇಂದಿಗೂ ಭಾರತದ ರಸ್ತೆಗಳ ಅಕ್ಕಪಕ್ಕ ಸಾಲು ಸಾಲು ಮರಗಳು ಅಲ್ಲಲ್ಲೇ ಇರುವುದನ್ನು ಕಾಣಬಹುದು.

ತಿಮ್ಮಕ್ಕನ ಜೀವನ ಚರಿತ್ರೆಯನ್ನು ಅವರಿಂದಲೇ ಕೇಳಿ ಬರೆದಿರುವ ದಾಖಲೆಯ ಪ್ರಕಾರ ಅವರು ಹುಟ್ಟಿದ್ದೆ ಆಲದ ಮರದಡಿಯಲ್ಲಿ. ಬದುಕಲ್ಲಿ ಮಕ್ಕಳೇ ಜನಿಸದ ಕಾರಣ, ಚಿಕ್ಕಯ್ಯ ಮತ್ತು ತಿಮ್ಮಕ್ಕನವರು ಕುದೂರು ರಸ್ತೆಯಲ್ಲಿ ಮರಗಳೇ ಇಲ್ಲದ ಕಾರಣ 1971ರ ಕಾಲದಲ್ಲಿ ಮೊದಲಿಗೆ ಹತ್ತು ಗುಣಿಗಳನ್ನು ತೋಡಿ ಆಲದ ಕೊಂಬೆಗಳನ್ನು ನೆಟ್ಟು, ನೀರೆರೆದು ಪ್ರಾರಂಭಿಸಿದ ಆಲದ ಕೊಂಬೆಗಳನ್ನು ನೆಡುವ ಕಾರ್ಯವೇ ಹತ್ತಾರು ಎಂಬುದು ನೂರಾರು ಆಗಿ ಸಾವಿರ ತಲುಪಿ ಇಂದು ಎಂಟು ಸಾವಿರದಷ್ಟು ದೊಡ್ಡ ಸಂಖ್ಯೆಯಲ್ಲಿ ಬೆಳೆದು ವಿಶ್ವಖ್ಯಾತಿ ಪಡೆದಿದೆ. 1993ರಲ್ಲಿಯೇ ಚಿಕ್ಕಯ್ಯ ತೀರಿಹೋಗದಿದ್ದರೆ ಇಂದು ಸಾಲು ಮರದ ತಿಮ್ಮಕ್ಕನ ಜಾಗದಲ್ಲಿ ಸಾಲು ಮರದ ತಿಮ್ಮಕ್ಕ ಚಿಕ್ಕಯ್ಯರು ಎಂಬ ಎರಡೂ ಹೆಸರು ಒಟ್ಟಿಗೆ ಸೇರುತ್ತಿದ್ದವು. ತನು ಶುದ್ಧವಾಗಿ ಮಾಡಿದ ಸತಿಪತಿಗಳ ಕಾರ್ಯವು ಅತ್ಯಂತ

ಸಹಜವಾದುದಾದರೂ ಮನುಷ್ಯನ ಸ್ವಾರ್ಥ ಹಾಗೂ ಸೋಮಾರಿತನಗಳ ನಡುವೆ ಮಹತ್ ಕಾರ್ಯವೇ ಆಗಿ ಪದ್ಮಶ್ರೀ ಪಡೆಯಿತು.

ಇವರ ಕಾರ್ಯವನ್ನು ಮೊದಲಿಗೆ ಜಗತ್ತಿಗೆ ಪರಿಚಯಿಸಿದವರು ಕೆ.ವಿ ಸರ್ವೇಶ್ ಅವರ ಮೂಲಕ ಎಂ. ವಿ. ನೆಗಳೂರು ಅವರು. ಇವರು ಬರೆದ 'ಸಾಲು ಮರಗಳ ಸಂಗಾತಿ ತಿಮ್ಮಕ್ಕ' ಎಂಬ ಲೇಖನವು 1994 ಜೂನ್ 19ರಂದು ಪ್ರಜಾವಾಣಿಯಲ್ಲಿ ಪ್ರಕಟವಾಯಿತು.

*** ಸಾಲು ಮರಗಳನ್ನು ನೆಡುವ ಕಾರ್ಯದ ಹಿಂದಿರುವ ಗುಟ್ಟು**

ಇಂದಿನ ಈ ಪ್ರಸಿದ್ಧಿ, ಶ್ರೇಷ್ಠತೆ, ಹೆಸರು, ಪ್ರಶಸ್ತಿ ಮೊದಲಾದ ಯಾವ ಕನಸುಗಳೂ ತಿಮ್ಮಕ್ಕ ಹಾಗೂ ಚಿಕ್ಕಯ್ಯ ಇವರಲ್ಲಿ ಇರಲಿಲ್ಲ. ಸಾಮಾನ್ಯವಾಗಿ ಆ ಕಾಲದಲ್ಲಿ ಇಂತಹ ಕಾರ್ಯಗಳನ್ನು ಸಾಕಷ್ಟು ಜನ ಮಾಡುತ್ತಿದ್ದರಾದರೂ ಇಂತಹ ಕಾರ್ಯಗಳನ್ನು ಮುಂದುವರೆಸುತ್ತಿರಲಿಲ್ಲ. ಜೊತೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮುಂದುವರೆಸುತ್ತಿರಲಿಲ್ಲ. ತಿಮ್ಮಕ್ಕ ಮತ್ತು ಚಿಕ್ಕಯ್ಯ ಇವರು ಒಮ್ಮತದಲ್ಲಿ ಮಕ್ಕಳಿಲ್ಲ ಎಂಬ ಬೇಸರವನ್ನು ನೆರಳಾಗುವ ಮರಗಳನ್ನು ನೆಟ್ಟು ಯಾವುದೇ ಸ್ವಾರ್ಥವಿಲ್ಲದೆ ಸಾರ್ವಜನಿಕ ಜಗತ್ತಿನಲ್ಲಿ ಸೇವೆ ಮಾಡುವ ಮನಸ್ಸು ಹೊಂದಿದ್ದೇ ಆದರ್ಶ ಗುಟ್ಟು. ಸಾಕಷ್ಟು ಸವಾಲು, ಸಮಸ್ಯೆಗಳನ್ನು ಎದುರಿಸಿರಬಹುದು. ಆ ಸಮಸ್ಯೆಗಳೇ ಮುಖ್ಯವೆಂದು ಎಂದಿಗೂ ಅವರು ಭಾವಿಸಿರಲಾರರು. ಈ ದೃಷ್ಟಿಯಿಂದ ಚಿಕ್ಕಯ್ಯನೊಂದಿಗೆ ಪ್ರಾರಂಭಿಸಿದ ಸಾಲುಮರಗಳನ್ನು ನೆಡುವ ಪೋಷಿಸುವ ಕಾರ್ಯವು ಗಂಡನ ಮರಣದ ನಂತರವೂ ಮುಂದುವರೆದುದು ವಿಶೇಷ.

*** ಸಾಲು ಮರದ ತಿಮ್ಮಕ್ಕ ಅವರು ದಾಖಲಾದ ಕ್ಷೇತ್ರಗಳು**

ಶಿಕ್ಷಣ ಕ್ಷೇತ್ರದಲ್ಲಿ ಸಾಲುಮರದ ತಿಮ್ಮಕ್ಕ ಪಠ್ಯವಾದರು. ಸಮಾಜ ಸೇವೆಯ ಪ್ರತಿ ಹಂತದಲ್ಲೂ ಮಾರ್ಗದರ್ಶಿಯಾದರು. ಅಮೇರಿಕಾದ ಸಂಯುಕ್ತ ಸಂಸ್ಥಾನಗಳಾದ ಲಾಸ್ ಏಂಜಲೀಸ್, ಓಕ್ ಲ್ಯಾಂಡ್, ಕ್ಯಾಲಿಫೋರ್ನಿಯಾಗಳಲ್ಲಿ ಪರಿಸರ ಶಿಕ್ಷಣದಲ್ಲಿ ಈಕೆಯ ಸೇವೆಯನ್ನು ಬಳಸಲಾಗಿದೆ. ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯು 2017–18ರಿಂದ ವೃಕ್ಷ ಉದ್ಯಾನ ಯೋಜನೆಯನ್ನು 'ಸಾಲು ಮರದ ತಿಮ್ಮಕ್ಕ ವೃಕ್ಷ ಉದ್ಯಾನವನ' ಎಂದು ಮರುನಾಮಕರಣ ಮಾಡಿದೆ. ಈ ಯೋಜನೆಯಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಸಾಲು ಮರಗಳು, ಉದ್ಯಾನವನಗಳನ್ನು ನೆಡುವ, ಕಾಪಾಡುವ ಯೋಜನೆಗಳನ್ನು ಒಳಗೊಂಡಿದೆ.

*** ಸರ್ಕಾರ ಮತ್ತು ಸಾಲುಮರದ ತಿಮ್ಮಕ್ಕ**

ಕರ್ನಾಟಕ ಸರ್ಕಾರ ಮಾತ್ರವಲ್ಲದೆ, ಭಾರತ ಹಾಗೂ ವಿಶ್ವದ ಹಲವು ದೇಶಗಳು ಸಾಲು ಮರದ ತಿಮ್ಮಕ್ಕನ ಕುರಿತು ಗೌರವ ಹೊಂದಿ, ಇವರ ಆದರ್ಶದಲ್ಲಿ ಪ್ರಕೃತಿ ಉಳಿಸುವ, ಹಸಿರು ಹೆಚ್ಚಿಸುವ, ಮರಗಳನ್ನು ನೆಟ್ಟು ಕಾಡು ನಿರ್ಮಿಸುವ ಹಲವು ಯೋಜನೆ ನಿರ್ಮಿಸಿವೆ. ಅದರ ಫಲವಾಗಿ ಸಾವಿರಾರು ಗೌರವಗಳು ಇವರಿಗೆ ಲಭಿಸಿವೆ. ಕೆಲವು ಮುಖ್ಯವಾದ ಗೌರವಗಳ ಉಲ್ಲೇಖವಿದು.

*** ಮರಗಳು ಮತ್ತು ಅರಣ್ಯ ಈ ವಿಚಾರದಲ್ಲಿ ನಾವೇನು ಮಾಡಬಹುದು?**

ಸಾಲು ಮರದ ತಿಮ್ಮಕ್ಕ ಹಾಗೂ ಚಿಕ್ಕಯ್ಯನವರ ಸೇವೆಯು ಅತ್ಯಂತ ಪ್ರಾಮಾಣಿಕವಾದುದು. ಸರ್ಕಾರಗಳು ಇವರ ಸೇವೆಯನ್ನು ಗೌರವಿಸುತ್ತಿದೆ. ಆದರೆ, ಶತಾಯುಷಿಯಾದ ತಿಮ್ಮಕ್ಕನವರು ನಮ್ಮ ಸಾಕುಮಗನ ಮೂಲಕ ಅದನ್ನು ಮುಂದುವರೆಸುತ್ತಿರುವುದು ಕೂಡ ಅತ್ಯಂತ ಹರ್ಷನೀಯವಾಗಿದೆ. ಆದರೆ, ಇದು ರಾಜ್ಯವನ್ನು ವಿಸ್ತರಿಸಲು ಸಾಧ್ಯವಿಲ್ಲ. ದೇಶ ಹಾಗೂ ಈ ಭೂಮಂಡಲವನ್ನು ವ್ಯಾಪಿಸಲು ಕಷ್ಟಕರ. ಈ ಭೂಮಿಯು ತನ್ನದೇ ರಚನೆಯಲ್ಲಿ ಸ್ವಾಭಾವಿಕವಾಗಿ ಸ್ವರೂಪಗೊಂಡಿದೆ. ಹಸಿರು ಬೆಳೆದಷ್ಟೂ ತಾಪಮಾನವು ಸಮತೋಲನವಾಗುತ್ತದೆ. ಭೂಮಿಗಿಂತ ಅಧಿಕವಾಗಿರುವ ನೀರನ್ನು ಸರಿಯಾಗಿ ನಿರ್ವಹಿಸುವ ಕಾರ್ಯವನ್ನು ಗಿಡ, ಮರಗಳು ಮಾತ್ರ ನಿರ್ವಹಿಸಲು ಸಾಧ್ಯ. ಇಂದು ಮೂರ್ಖರಾದ ನಾವು ಸ್ವಾರ್ಥಕ್ಕೆ ಸಿಲುಕಿ ಕಾಂಕ್ರಿಟ್ ಕಾಡನ್ನು ನಿರ್ಮಿಸಿದ್ದೇವೆ. ಬಯಲನ್ನು ನುಂಗಿದ ನಗರಗಳು ಸಂಪೂರ್ಣ ಕಟ್ಟಡಗಳಿಂದ ಶೋಭಿಸುತ್ತಿವೆ. ಅರಣ್ಯ ಸಂರಕ್ಷಣೆಯು ಫಲಕದ ನುಡಿಯಾಗಿದೆ. ಹಾಗಾದರೆ ಸೃಷ್ಟಿಸುವವರು, ಕಾಪಾಡುವವರು ಯಾರು? ಇಂತಹ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ.

ಏನೂ ಇಲ್ಲದ ಎರಡು ಬಡ ಜೀವಗಳು ವಿಶ್ವ ನೋಡುವ ಶ್ರೇಷ್ಟ ಕಾರ್ಯವನ್ನು ಮಾಡಿದ್ದಾರೆ ಎಂದ ಮೇಲೆ ತಿನ್ನಲು ಅನ್ನ, ಕೈತುಂಬಾ ಕೆಲಸ ಇರುವ ಜೀವಿಗಳಾದ ನಮ್ಮ ಕೊಡುಗೆಯೇನು? ಆಲೋಚಿಸಬೇಕಿದೆ.

■■

ISSN: 2320-9941
ಪ್ರತಿಸ್ಪಂದ । Prathispandha

ಕುರ್‌ಆನ್‌ನಲ್ಲಿ ಪ್ರಕೃತಿ–ಪರಿಸರ

● ಡಾ. ಸೈಯದ್ ಮುಯಿನ್

ಪೀಠಿಕೆ:

ಮಾನವನ ಸಂಕೀರ್ಣ ಆಸಕ್ತಿಗಳು ಗುಣಮಟ್ಟ ಮತ್ತು ಪ್ರಮಾಣದಲ್ಲಿ ದಿನೇ ದಿನೇ ಹೆಚ್ಚುತ್ತಿವೆ. ಎಲ್ಲಾ ಸಂಪನ್ಮೂಲಗಳನ್ನು ಹೊಂದಿರುವ ಪರಿಸರವು ಮಾನವನ ಅಗತ್ಯಗಳನ್ನು ಪೂರೈಸಲು ಮುಖ್ಯ ಮೂಲವಾಗಿದೆ. ಅವರು ಪ್ರಕೃತಿಯೊಂದಿಗೆ ಬದುಕುವುದನ್ನು ಮುಂದುವರಿಸುವ ಮೂಲಭೂತ ಅಗತ್ಯವನ್ನು ಅರಿಯದೆ ಇರುವುದರಿಂದ ಮಾನವ ಮತ್ತು ಪ್ರಕೃತಿಯೊಂದಿಗಿನ ಸಹಬಾಳ್ವೆಯು ಜಾಗತಿ–ಕ ಸಮಸ್ಯೆಯಾಗುತ್ತಿದೆ. ಇಸ್ಲಾಂ ಧರ್ಮದ ಮಾರ್ಗದರ್ಶನದಂತೆ ಕುರ್‌ಆನ್‌ನ ಮಾನವನನ್ನು ಪರಿಸರವನ್ನು ಸರಿಯಾಗಿ ಕಾಪಾಡಿಕೊಳ್ಳಲು ಎಚ್ಚರಿಕೆಯನ್ನು ನೀಡಿದೆ. ಏಕೆಂದರೆ ಪ್ರಕೃತಿಯು ಮಾನವರ ಮೇಲೆ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಪ್ರಕೃತಿ ಮತ್ತು ಪರಿಸರದ ಬಗ್ಗೆ ಎಲ್ಲಾ ಪರಿಕಲ್ಪನೆಗಳು ಮತ್ತು ಪರಿಭಾಷೆಗಳೊಂದಿಗೆ ಕುರ್‌ಆನ್ ಇಸ್ಲಾಂ ಧರ್ಮವು ಸ್ನೇಹಪರ ಧರ್ಮವಾಗಿದೆ ಎಂದು ತೋರಿಸುತ್ತದೆ. ಅದರ ನಂಬಿಕೆಯು ತಾನು ವಾಸಿಸುವ ಮತ್ತು ನೈಸರ್ಗಿಕ ಪ್ರಕ್ರಿಯೆಗಳಲ್ಲಿ ಮಧ್ಯ ಪ್ರವೇಶಿಸುವುದನ್ನು ಸಹ ನಿರ್ಬಂಧಿಸುತ್ತದೆ ಏಕೆಂದರೆ ಮಾನವರು ಸ್ವತಃ ಪ್ರಯೋಜನಗಳನ್ನು ಪಡೆದು ಅದನ್ನು ನಾಶ ಮಾಡುವವನಾಗಿದ್ದಾನೆ. ಇಸ್ಲಾಂ ಧರ್ಮವು ರಹ್ಮತುಲ್ ಅಲಾಮಿನ್(ವಿಶ್ವ ಕಾರುಣ್ಯದ ಒಡೆಯ) ಸಂದೇಶವನ್ನು ಹೊತ್ತಿರುವ ಧರ್ಮವಾಗಿ ಖಂಡಿತವಾಗಿಯೂ ಪರಿಸರ, ಪ್ರಕೃತಿಯನ್ನು ಹೊರಗಿಟ್ಟಿಲ್ಲ, ಇದು ವಿಶ್ವದಲ್ಲಿರುವ ಎಲ್ಲ ವಸ್ತುಗಳನ್ನು ಸಹ ತನ್ನೊಳಗೆ ಒಳಗೊಂಡಿದೆ. ಮಾನವರಿಗೆ ಕರುಣೆಯನ್ನು ಹರಡುವಲ್ಲಿ ಪರಿಣತಿಯನ್ನು ಒದಗಿಸಿದೆ. ಈ ಲೇಖನವು ಪರಿಸರದ ಬಗ್ಗೆ ಕುರ್‌ಆನ್‌ನ

ವಿಳಾಸ: ಡಾ.ಸೈಯದ್ ಮುಯಿನ್
ಕನ್ನಡ ಸಹಾಯಕ ಪ್ರಾಧ್ಯಾಪಕ
ಕ್ರಿಸ್ತು ಜಯಂತಿ ಕಾಲೇಜು, ಸ್ವಾಯತ್ತ,
ಕೆ.ನಾರಾಯಣಪುರ, ಬೆಂಗಳೂರು.

ದೃಷ್ಟಿಕೋನಗಳು ಹೇಗೆ ವ್ಯಕ್ತವಾಗಿದೆ ಎಂಬುದನ್ನು ಅರಿಯಲು ಪ್ರಯತ್ನಿಸಿದೆ. ಕುರ್‌ಆನ್ ಪರಿಸರ ಸಂರಕ್ಷಣೆಗಳ ಬಗ್ಗೆ ವಿಶೇಷ ಚರ್ಚೆಯನ್ನು, ವಿಷಯಗಳನ್ನು ಒಳಗೊಂಡಿದೆ.

ಈ ಸಂಶೋಧನ ಲೇಖನದಲ್ಲಿ ಕುರ್‌ಆನ್‌ನಲ್ಲಿ ಉಲ್ಲೇಖಿತವಾಗಿರುವ ಆಯತ್‌ಗಳ ಮೂಲಕ ಪ್ರಕೃತಿ ರಕ್ಷಣೆ ಮತ್ತು ಮಾನವ ಜವಾಬ್ದಾರಿಗಳನ್ನು ಚರ್ಚಿಸಲಾಗಿದೆ. ಕುರ್‌ಆನ್‌ನಲ್ಲಿ ಮಾನವ ಜೀವನದ ಎಲ್ಲಾ ಅಂಶಗಳನ್ನು ಚರ್ಚಿಸಲಾಗಿದೆ. ಇದರಲ್ಲಿ ಪ್ರಮುಖವಾಗಿರುವುದು ಪರಿಸರ–ಪ್ರಕೃತಿ ರಕ್ಷಣೆಯು ಒಂದಾಗಿದೆ. ಕುರ್‌ಆನ್‌ನಲ್ಲಿ ಅಲ್ಲಾಹ ಸೃಷ್ಟಿಸಿದ ಪ್ರಕೃತಿಯ ರಕ್ಷಣೆಯು ಸರ್ವರ ಜವಾಬ್ದಾರಿಯಾಗಿದ್ದು, ಇದರ ರಕ್ಷಣೆಯು ಅನಿವಾರ್ಯ ಮತ್ತು ಆದ್ಯ ಕರ್ತವ್ಯವಾಗಿರುವುದರ ಬಗ್ಗೆ ವಿವರಿಸುವ ಪ್ರಯತ್ನ ಮಾಡಲಾಗಿದೆ.

ವ್ಯಾಪ್ತಿ: ಈ ಲೇಖನದಲ್ಲಿ ನೀಡಿರುವ ಕುರ್‌ಆನ್‌ನ ಆಯತ್‌ಗಳ ಸ್ಥೂಲ ಪರಿಚಯವನ್ನು ನೀಡಿಲ್ಲ, ಕಾರಣ ಇದರ ವಿವರಣೆಯು ದೀರ್ಘವಾಗುವ ಕಾರಣದಿಂದಾಗಿ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. ಇಲ್ಲಿ ಕೇವಲ ಪ್ರಕೃತಿ ಮತ್ತು ಪರಿಸರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಲಾಗಿದೆ.

ಪ್ರಮುಖ ಪದಗಳು: ಇಸ್ಲಾಂ, ಕುರ್‌ಆನ್, ಪ್ರಕೃತಿ, ಪರಿಸರ, ಆಯತ್, ಪ್ರವಾದಿ ಮುಹಮ್ಮದ್, ಹದೀಸ್.

ಇಸ್ಲಾಂ ಮತ್ತು ಪ್ರಕೃತಿ

ಇಸ್ಲಾಂ ಧರ್ಮದ ವ್ಯಾಖ್ಯಾನ, ವಿವರಣೆ, ನೀತಿ–ನಿಯಮಗಳ ಬಗ್ಗೆ ಅನೇಕ ಧಾರ್ಮಿಕ ಗ್ರಂಥಗಳಿವೆ, ಮುಖ್ಯವಾಗಿ ಕುರ್‌ಆನ್ ಮತ್ತು ಹದೀಸ್‌ನಲ್ಲಿ ಪರಿಸರ ಮತ್ತು ವಿಶ್ವವನ್ನು ರಕ್ಷಿಸುವ ಮಹತ್ವವನ್ನು ವಿವರಿಸುವ ಅಂಶಗಳನ್ನು ಕಾಣಬಹುದು. ಪರಿಸರದ ಜ್ಞಾನ ಮತ್ತು ಸಂರಕ್ಷಣೆಯ ಬಗ್ಗೆ ಇಸ್ಲಾಂ ಹೇಗೆ ಗಮನಹರಿಸುತ್ತದೆ ಎಂಬುದನ್ನು ಅರಿಯಬಹುದು, ಮುಖ್ಯ ವಿಚಾರಗಳನ್ನು ಅರ್ಥೈಸಿಕೊಂಡು ಅಧ್ಯಯನ ಮಾಡುವುದಷ್ಟೇ ಅಲ್ಲ, ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅನ್ವಯಿಸಿಕೊಳ್ಳಬೇಕು. ಇಸ್ಲಾಮಿಕ್ ವಿಧಾನವು ಪರಿಸರವನ್ನು ಹೇಗೆ ನೋಡುತ್ತದೆ ಎಂಬುದನ್ನು ಈ ಲೇಖನವು ವಿವರಿಸುತ್ತದೆ. ಇಸ್ಲಾಮಿನ ಧಾರ್ಮಿಕ ಪಠ್ಯಗಳಲ್ಲಿ ಪರಿಸರದ ಮಹತ್ವವನ್ನು ತಿಳಿಸಿರುವುದರ ಬಗ್ಗೆ ಅರಿಯಬಹುದು.

ಇಸ್ಲಾಮಿಕ್ ಧಾರ್ಮಿಕ ಗ್ರಂಥಗಳಲ್ಲಿ (ಕುರ್‌ಆನ್ ಮತ್ತು ಹದೀಸ್) ಪರಿಸರವನ್ನು ಸಾಮಾನ್ಯವಾಗಿ ಪ್ರಕೃತಿ ಎಂದು ಕರೆಯಲಾಗುತ್ತದೆ. ಪರಿಸರಕ್ಕೆ ಯಾವುದೇ ಸ್ಥಿರ ಅಥವಾ ಪ್ರಮಾಣಿತ ವ್ಯಾಖ್ಯಾನವಿಲ್ಲ. ಇದನ್ನು ಸರಳವಾಗಿ ಮತ್ತು ಕೆಲವೊಮ್ಮೆ ಸೂಚ್ಯವಾಗಿ ಕುರ್‌ಆನ್‌ನಲ್ಲಿ ಪ್ರಕೃತಿ ಎಂದು ಉಲ್ಲೇಖಿಸಲಾಗಿದೆ. ಪರಿಸರದ ಅರ್ಥವನ್ನು ಸಾಮಾನ್ಯವಾಗಿ, ನಾವು ಆಕ್ರಮಿಸಿಕೊಂಡಿರುವ ಮತ್ತು ಮಾನವ ಜೀವನ ಸೇರಿದಂತೆ ಜೀವಿಗಳ ಮೇಲೆ ಪರಿಣಾಮ ಬೀರುವ ಸ್ಥಳದಲ್ಲಿ ಒಳಗೊಂಡಿರುವ ಎಲ್ಲಾ ವಸ್ತುಗಳು, ಪರಿಸ್ಥಿತಿಗಳು ಮತ್ತು ಪ್ರಭಾವಗಳಾಗಿ ಅರ್ಥೈಸಿಕೊಳ್ಳಬಹುದು. ಪರಿಸರ, ಈ ಸಂದರ್ಭದಲ್ಲಿ, ಮಾನವರ ಸುತ್ತಲಿನ ಪರಿಸರವಾಗಿದೆ. ಅಲ್ಲಿ ಜೀವಿಗಳು ಮತ್ತು ನಿರ್ಜೀವ ವಸ್ತುಗಳು ಅಭಿವೃದ್ಧಿಗೊಳ್ಳುತ್ತವೆ ಮತ್ತು ರಚಿಸಲ್ಪಡುತ್ತವೆ. ಈ ತಿಳುವಳಿಕೆಯಿಂದ, ಮಾನವರು, ಜೀವಿಗಳು ಮತ್ತು ನಿರ್ಜೀವಿಗಳು ಪರಿಸರದ ಬೇರ್ಪಡಿಸಲಾಗದ ಭಾಗವಾಗಿದೆ. ಮಾನವರು ಜೈವಿಕವಾಗಿ ಈ ಪ್ರಕೃತಿಯಿಂದ ಹುಟ್ಟಿಕೊಂಡಿದ್ದಾರೆ ಮತ್ತು ಪ್ರಕೃತಿಗೆ ಹಿಂತಿರುಗುತ್ತಾರೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ.

ಇಸ್ಲಾಂ ಧರ್ಮದಲ್ಲಿ ಪ್ರಕೃತಿಯು ಕೇವಲ ಮಾನವ ಅಗತ್ಯಗಳನ್ನು ಪೂರೈಸಲು ಬಳಸಿಕೊಳ್ಳುವ ಅಥವಾ ಅನ್ವೇಷಿಸುವುದಕ್ಕಿಂತ ಬೇರೆ ಯಾವುದೇ ಅರ್ಥವನ್ನು ಹೊಂದಿಲ್ಲ. ಇಸ್ಲಾಮಿನ ದೃಷ್ಟಿಯಲ್ಲಿ ಪ್ರಕೃತಿಯು ಅಲ್ಲಾಹನ "ಅಸ್ತಿತ್ವ" ದ ಚಿಹ್ನೆಗಳು (ಶ್ಲೋಕಗಳು) ಆಗಿದೆ. ಅನೇಕ ಚಿಹ್ನೆಗಳ ಮೂಲಕ ತನ್ನ ಅಸ್ತಿತ್ವವನ್ನು ತಿಳಿದುಕೊಳ್ಳಲು ಪ್ರಕೃತಿಯು ಮಾನವರಿಗೆ ಒಂದು ಮಾರ್ಗವನ್ನು ಒದಗಿಸುತ್ತದೆ. ಅಲ್ಲಾಹನು ಕುರ್‌ಆನ್‌ನಲ್ಲಿ ಹೇಳುತ್ತಾನೆ, "ಅಲ್ಲಾಹನ ಮೇಲೆ ಖಚಿತವಾದ ನಂಬಿಕೆ ಇರುವವರಿಗೆ ಭೂಮಿಯಲ್ಲಿ ನಿದರ್ಶನಕ್ಕೆ ಹಲವು ಚಿಹ್ನೆಗಳು ಇವೆ" (56:20) ಕುರ್‌ಆನ್ ಅಥವಾ ಅಲ್–ಕುರ್‌ಆನ್ ಹಲವಾರು ಪದಗಳಲ್ಲಿ ಪರಿಸರದ ಪರಿಕಲ್ಪನೆಯನ್ನು ಪರಿಚಯಿಸುತ್ತದೆ. ಎಲ್ಲಾ ಜೀವಿಗಳು (ಅಲ್–ಅಲಮಿನ್), ಅಂತರಿಕ್ಷ/ಸಮಯದ ಗತಿ (ಅಸ್–ಸಮಾ), ಭೂಮಿ (ಅಲ್–ಅರ್ದ್) ಮತ್ತು ಪರಿಸರ (ಅಲ್–ಬಿಯಾ) ಪದಗುಚ್ಛಗಳನ್ನು ಸಂಪೂರ್ಣ ಪರಿಸರಕ್ಕೆ ಸೂಚಿಸಿರುವುದನ್ನು ಕಾಣಬಹುದು.

ನೈಸರ್ಗಿಕ ಸಮತೋಲನ

ನೈಸರ್ಗಿಕ ಸಮತೋಲನವು ದೈವಿಕ ಸಮತೋಲನವನ್ನು ಆಧರಿಸಿದೆ ಎಂಬುದನ್ನು ಕುರ್‌ಆನ್‌ನ ಆಯತ್‌ಗಳು ಉಲ್ಲೇಖಿಸುತ್ತವೆ. ಪ್ರಕೃತಿ ಮತ್ತು ಪರಿಸರದಲ್ಲಿನ ಸಮತೋಲನವನ್ನು ಕುರ್‌ಆನ್‌ನಲ್ಲಿ ಉಲ್ಲೇಖಿಸಲಾಗಿದ್ದು,

ISSN: 2320-9941
ಪ್ರತಿಸ್ಪಂದ । Prathispandha

ಪ್ರಕೃತಿಯನ್ನು ಕಾಪಾಡಿಕೊಳ್ಳಬೇಕೆಂಬುದನ್ನು ಪದೇ ಪದೇ ಉಲ್ಲೇಖಿಸಲಾಗಿದೆ. ಇಸ್ಲಾಂ ಧರ್ಮದ ಪುನರುತ್ಥಾನವು ಮರಳುಗಾಡಿನ ಪ್ರದೇಶದಲ್ಲಾದ್ದರಿಂದ ಇಲ್ಲಿನ ಸಂಸ್ಕೃತಿಯು ಪ್ರಕೃತಿಯ ಪ್ರತಿಯೊಂದು ಅಂಶದ ಮಹತ್ವವನ್ನು ಅರಿತಿದ್ದು, ಪ್ರಾಕೃತಿಕ ವಸ್ತುಗಳ ಸಂರಕ್ಷಣೆಗೆ ಹೆಚ್ಚಿನ ಒತ್ತನ್ನು ಸಹ ನೀಡಲಾಗಿತ್ತು. ನೈಸರ್ಗಿಕ ಸಂಪತ್ತಿನ ದುರುಪಯೋಗವನ್ನು ನಿಷೇಧಿಸಲಾಗಿತ್ತು. ಸ್ವಚ್ಛತೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದರು, ಪ್ರವಾದಿ ಮುಹಮ್ಮದ್ ಅವರ ಹದೀಸ್(ಹೇಳಿಕೆ)ನಂತೆ "ಶುಭ್ರತೆಯು ಅರ್ಧ ಧರ್ಮವಾಗಿದೆ". ಅಂದರೆ ಶುದ್ಧತೆಯನ್ನು ಪಾಲಿಸಿದರೆ ಧರ್ಮದ ಅರ್ಧಭಾಗವನ್ನು ಪರಿಪಾಲಿಸಿದಂತೆ ಎಂಬುದಾಗಿದೆ. ಪರಿಸರ ಶುದ್ಧತೆಗೂ ಅಷ್ಟೇ ಮಹತ್ವವನ್ನು ನೀಡಲಾಗಿದೆ.

ವಿಜ್ಞಾನಿಗಳು ಪರಿಸರವನ್ನು ನೋಡುವಲ್ಲಿ, ಅಭ್ಯಸಿಸುವುದಾಗಿ ಪರಿಸರೀಯ ಸಿದ್ಧಾಂತಗಳನ್ನು ವರ್ಗೀಕರಿಸಿದ್ದಾರೆ. ಉದಾಹರಣೆಗೆ ಆಂಥ್ರೊಪೊಸೆಂಟ್ರಿಸಂ/ಮಾನವಕೇಂದ್ರಿತ ಪರಿಸರ ಸಿದ್ಧಾಂತವು ಮಾನವನು ಬ್ರಹ್ಮಾಂಡದ ಕೇಂದ್ರವಾಗಿದ್ದಾನೆ ಎಂದು ಪ್ರತಿಪಾದಿಸುತ್ತದೆ. ಮಾನವಕೇಂದ್ರೀಯತೆಗೆ ವಿರುದ್ಧವಾಗಿ, ಬಯೋಸೆಂಟ್ರಿಸಂ/ಜೈವಿಕ ಕೇಂದ್ರಿತ ಪ್ರಕೃತಿಯು ತನ್ನದೇ ಆದ ಮೌಲ್ಯಗಳನ್ನು ಹೊಂದಿದೆ ಎಂದು ಅಭಿಪ್ರಾಯಪಡುತ್ತದೆ. ಬಯೋಸೆಂಟ್ರಿಸಂ ಸ್ವತಃ ಪರಿಸರ–ಕೇಂದ್ರೀಕರಣದಿಂದ ಬಲಗೊಳ್ಳುತ್ತದೆ. ಇದು ಅದೇ ದೃಷ್ಟಿಕೋನವನ್ನು ಹೊಂದಿದೆ, ವಿಶೇಷವಾಗಿ ಮಾನವಕೇಂದ್ರೀಯತೆಯ ಕಡೆಗೆ ಮಾನವನ ಒಲವು ಹೆಚ್ಚಿದೆ, ಅದರ ದುಷ್ಪರಿಣಾಮವನ್ನು ಇಡೀ ಜಗತ್ತು ಅನುಭವಿಸುತ್ತಿರುವುದನ್ನು ಕಾಣಬಹುದು. ನೈಸರ್ಗಿಕ ಸಮತೋಲನವಿಲ್ಲದಿದ್ದಲ್ಲೀ ಭೂಮಿಯಲ್ಲಿ ಮನುಷ್ಯ ಬಾಳಿ ಬದುಕುವುದು ದುಸ್ತರವಾಗುತ್ತದೆ. ಮಾನವನಿಗೆ ಕರುಣೆಯಾಗಿರುವ ಪ್ರಕೃತಿಯನ್ನು ಸಂರಕ್ಷಿಸಿಕೊಂಡು ಹೋಗುವ ಮಹತ್ತರ ಜವಾಬ್ದಾರಿಯನ್ನು ನೀಡಲಾಗಿದೆ. ದೇವರ ಸೃಷ್ಟಿಯನ್ನು ನಾಶಗೊಳಿಸುವ ಹಕ್ಕನ್ನು ಮಾನವನಿಗೆ ಯಾರೂ ನೀಡಿಲ್ಲ. ಈ ಮಾತುಗಳನ್ನು ಮಾನವ ಅರ್ಥ ಮಾಡಿಕೊಂಡರೆ ಆತನ ಭವಿಷ್ಯ ಭದ್ರಗೊಳ್ಳುತ್ತದೆ.

ನೈಸರ್ಗಿಕ ಜೀವವೈವಿಧ್ಯ

ಅಲ್ಲಾಹನು ಕುರ್‌ಆನ್‌ನಲ್ಲಿ ಸಸ್ಯಗಳ ವೈವಿಧ್ಯತೆಯನ್ನು ವಿವರಿಸಿದ್ದಾನೆ. ಸಸ್ಯಗಳ ನಡುವೆ ಅನೇಕ ವ್ಯತ್ಯಾಸಗಳ ಶ್ರೇಣಿಯನ್ನು ಆನಂದ ಮತ್ತು ಆಹಾರದ ಮೂಲವಾಗಿ ನೀಡುತ್ತಾನೆ. "ನೀವು ಆ ದೇವರನ್ನು ನೋಡುತ್ತಿಲ್ಲ, ಆಕಾಶದಿಂದ ಮಳೆಯನ್ನು ಸುರಿಸುತ್ತಾನೆ ಮತ್ತು ಅದನ್ನು ಭೂಮಿಯ ಬುಗ್ಗೆಗಳ ಮೂಲಕ ನಡೆಸುತ್ತಾನೆ, ನಂತರ ಅವನು ಬೆಳೆಗಳು ಬೆಳೆಯುವಂತೆ ಮಾಡುತ್ತಾನೆ, ಅದರೊಂದಿಗೆ, ವಿವಿಧ ಬಣ್ಣಗಳನ್ನು ಉತ್ಪಾದಿಸಿ: ನಂತರ ಅದು ಒಣಗಿ ಹಳದಿಯಾಗಿ ಬೆಳೆಯುವುದನ್ನು ನೀವು ನೋಡುತ್ತೀರಿ; ನಂತರ ಅವನು ಅದನ್ನು ಒಣಗಿಸಿ ಕುಸಿಯುವಂತೆ ಮಾಡುತ್ತಾನೆ. ನಿಜವಾಗಿಯೂ, ಇದರಲ್ಲಿ ತಿಳುವಳಿಕೆಯುಳ್ಳ ಪುರುಷರಿಗೆ ನೆನಪಿನ ಸಂದೇಶವಿದೆ". ಕುರ್‌ಆನ್‌ನ ಅರೇಬಿಕ್ ಪಠ್ಯದಲ್ಲಿನ ವಿವರಣೆಯು ನಿಜವಾಗಿಯೂ ಅದ್ಭುತವಾಗಿದೆ ಮತ್ತು ಭಾಷೆಯು ಓದುಗರಿಗೆ ಬಹಳ ಆನಂದ ಒದಗಿಸುತ್ತದೆ. ಇತರ ವಿವರಣೆಯಲ್ಲಿ ಉದ್ಯಾನಗಳನ್ನು ಸ್ವರ್ಗ ಮತ್ತು ಸೌಂದರ್ಯದ ಸ್ವರ್ಗ ಎಂದು ಉಲ್ಲೇಖಿಸಲಾಗಿದೆ: "ಉದ್ಯಾನಗಳು ಮತ್ತು ಬುಗ್ಗೆಗಳು ಮತ್ತು ಜೋಳದ ಗದ್ದೆಗಳು ಮತ್ತು ರಸಭರಿತ ಖರ್ಜೂರಗಳ ಗೊಂಚಲುಗಳ ಉದ್ಯಾನದಲ್ಲೇ ಉಳಿದುಬಿಡಬಹುದು"(25:147–148). ಅಲ್ಲಾಹನ ಮಾತುಗಳು ಹೇಳುವುದನ್ನು ಮುಂದುವರಿಯುತ್ತವೆ: "ಯಾರು ಭೂಮಿಯಲ್ಲಿ ಕೇಡನ್ನು ಮಾಡುತ್ತಾರೆ ಮತ್ತು (ತಮ್ಮ ಮಾರ್ಗಗಳನ್ನು) ಸರಿಪಡಿಸುವುದಿಲ್ಲ" (25:152).ಇಲ್ಲಿ ನೀರು ಮತ್ತು ಸಸ್ಯಗಳ ನಡುವೆ ಸ್ಪಷ್ಟವಾದ ಸಂಪರ್ಕವಿದೆ. ಅಲ್ಲಾಹನ ಜೀವಿಗಳನ್ನು (ಅಥವಾ ಸಸ್ಯಗಳನ್ನು) ಸಂರಕ್ಷಿಸಲು ಮತ್ತು ಗೌರವಿಸಲು ಎಲ್ಲಾ ರಾಷ್ಟ್ರಗಳು ಮತ್ತು ಜನಾಂಗಗಳ ಜನರನ್ನು ಆಹ್ವಾನಿಸುವ ಕುರಾನ್‌ನ ಅನೇಕ ಆಯತ್ (ವಾಕ್ಯಗಳು) ಇವೆ. "ನೀವು ನೆಲದಲ್ಲಿ ಬಿತ್ತುವ ಬೀಜವನ್ನು ನೋಡುತ್ತೀರಾ? ಅದು ಬೆಳೆಯಲು ನೀವೇ ಕಾರಣವೋ ಅಥವಾ ನಾನು ಕಾರಣನೋ? ಅದು ನಮ್ಮ ಇಚ್ಛೆಯಿದ್ದಲ್ಲಿ, ನಾವು ಅದನ್ನು ಒಣ ಪುಡಿಯಾಗಿ ಕುಸಿಯಬಹುದು ಮತ್ತು ನೀವು ಆಶ್ಚರ್ಯಚಕಿತರಾಗುವಿರಿ.(56: 63–65) ಇದರರ್ಥವು ಅಲ್ಲಾನಿಂದ ಸಸ್ಯಗಳು ಸೇರಿದಂತೆ ಎಲ್ಲಾ ಜೀವಿಗಳ ಸೃಷ್ಟಿಯನ್ನು ಗುರುತಿಸಲು ಮತ್ತು ನಂತರ ಈ ಶಕ್ತಿಯನ್ನು ಗೌರವಿಸಲು ಮತ್ತು ಪ್ರಕೃತಿಯಲ್ಲಿ ದೇವರ ಯೋಜನೆ ಮತ್ತು ಬುದ್ಧಿವಂತಿಕೆಯ ಪುರಾವೆಯನ್ನು ಒಪ್ಪಿಕೊಳ್ಳಲು ಅಲ್ಲಾಹನಿಂದ ಮಾನವ ಜಾತಿಗೆ ಬಲವಾದ ವಿನಂತಿಯಾಗಿದೆ.

ಅಲ್ಲಾಹನು ಜೀವಿಗಳನ್ನು, ನೈಸರ್ಗಿಕ ಸಂಪನ್ಮೂಲಗಳನ್ನು ಮಾನವನಿಗೆ ಸವಲತ್ತುಗಳಾಗಿ ಮತ್ತು ಆನಂದದ ಮೂಲವಾಗಿ ಒದಗಿಸುತ್ತಾನೆ, ಈ ಜೀವಿಗಳಲ್ಲಿ ಬೃಹತ್ ವೈವಿಧ್ಯತೆಯನ್ನು ಹೊಂದಿರುವ ಸಸ್ಯಗಳಿವೆ. ಅಲ್ಲಾಹನು ಹೇಳುತ್ತಾನೆ: "ಮನುಷ್ಯನು ತನ್ನ ಆಹಾರವನ್ನು ನೋಡಲಿ, ಅದಕ್ಕಾಗಿ ನಾವು ನೀರನ್ನು ಹೇರಳವಾಗಿ ಸುರಿಯುತ್ತೇವೆ

ಮತ್ತು ನಾವು ಭೂಮಿಯನ್ನು ಚೂರುಗಳಾಗಿ ವಿಭಜಿಸಿ ಅದರಲ್ಲಿ ಜೋಳ ಮತ್ತು ದ್ರಾಕ್ಷಿಗಳು ಮತ್ತು ಪೌಷ್ಟಿಕ ಸಸ್ಯಗಳು ಮತು ಇಪ್ಪೆ ಮತ್ತು ಖರ್ಜೂರಗಳನ್ನು ಉತ್ಪಾದಿಸುತ್ತೇವೆ. ಎತ್ತರದ ಮರಗಳು. ಹಣ್ಣುಗಳು ಮತ್ತು ಮೇವುಗಳಿಂದ ದಟ್ಟವಾದ ಸುತ್ತುವರಿದ ಉದ್ಯಾನಗಳು. ನಿಮಗೆ ಮತ್ತು ನಿಮ್ಮ ಜಾನುವಾರುಗಳಿಗೆ ಬಳಕೆ ಮತ್ತು ಅನುಕೂಲಕ್ಕಾಗಿ. (80:24–32) ಈ ವೈವಿಧ್ಯತೆ ಮತ್ತು ಅದರ ಸೌಂದರ್ಯವು ದೇವರ ಸೃಷ್ಟಿಯ ಸ್ಪಷ್ಟ ಸಂಕೇತವಾಗಿದೆ ಮತ್ತು ಮನುಷ್ಯನು ಈ ನೈಸರ್ಗಿಕ ಜೀವನವನ್ನು ದೈವಿಕ ಆಜ್ಞೆಯಂತೆ ಸಂರಕ್ಷಿಸಬೇಕು.

ಸಮತೋಲನ ಎಂದರೆ ಆದೇಶ, ಸೌಂದರ್ಯ ಮತ್ತು ಸಾಮರಸ್ಯವನ್ನು "ಅಲ್ಲಾಹ" ಹಾಕುತ್ತಾರೆ. 'ಭೂಮಿಯನ್ನು ಜೀವಿಗಳು ಬದುಕಲು ಮತ್ತು ಆನಂದಿಸಲು ರತ್ನಗಂಬಳಿಯಂತೆ ಹರಡಿದೆ' ಎಂದು ಕಾವ್ಯಾತ್ಮಕ ಭಾಷೆಯಲ್ಲಿ ವಿವರಿಸಲಾಗಿದೆ ಈ ಹೇಳಿಕೆಯು ಪರಿಸರದ ಬಗ್ಗೆ ವೈಜ್ಞಾನಿಕ ಮಾಹಿತಿಯನ್ನು ನೀಡುತ್ತದೆ. ಪ್ರಕೃತಿಯಲ್ಲಿನ ದೈವಿಕ ಸಮತೋಲನ (ನೈಸರ್ಗಿಕ ಸಮತೋಲನ) ಅಳಿವಿನ ಅಪಾಯವನ್ನು ಎದುರಿಸದೆ ಕಾಲಾನಂತರದಲ್ಲಿ ಜೀವವೈವಿಧ್ಯದ ಸಂರಕ್ಷಣೆಯನ್ನು ನೀಡುತ್ತದೆ. ಮಾನವ ಪ್ರಕಾರದ ತರ್ಕಬದ್ಧ ಬಳಕೆ ತಲೆಮಾರುಗಳವರೆಗೆ ಇರಿಸಿಕೊಳ್ಳಲು ಮತ್ತು ಸಂರಕ್ಷಿಸುವ ಮಾರ್ಗವಾಗಿದೆ, ಇದನ್ನು ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆಯಾಗಿ ಅಭಿವೃದ್ಧಿಪಡಿಸಬಹುದು. ಪ್ರತಿಯೊಂದು ನೈಸರ್ಗಿಕ ಚಕ್ರವು ಇತರ ಚಕ್ರಗಳೊಂದಿಗೆ ಸಾಮರಸ್ಯದಿಂದ ಸಂಬಂಧ ಹೊಂದಿದೆ ಮತ್ತು ಸಮತೋಲಿತವಾಗಿದೆ ಮತ್ತು ಪೂರಕ ರೀತಿಯಲ್ಲಿ ಜೀವಂತ ಜೀವಿಗಳೊಂದಿಗೆ ಸಂವಹನ ನಡೆಸುತ್ತದೆ. ಪಾರಿಸರಿಕವಾಗಿ ದೈವಿಕ ಸಮತೋಲನವನ್ನು ಘೋಷಿಸುವ ಕುರ್‌ಆನ್‌ನಲ್ಲಿ ಹೆಚ್ಚಿನ ಮಾಹಿತಿಯನ್ನು ಉಲ್ಲೇಖಿಸಲಾಗಿದೆ. ವಿವಿಧ ಜೀವಿಗಳ ನಡುವಿನ ಸಾಮರಸ್ಯದ ಜೀವನದ ಉದಾಹರಣೆ; ಪ್ರಾಣಿಗಳು ಮತ್ತು ಸಸ್ಯಗಳ ನಡುವಿನ ಸಂಬಂಧ: ಜೇನುನೊಣಗಳು ಆಧ್ಯಾತ್ಮಿಕ ಬಹಿರಂಗಪಡಿಸುವಿಕೆಯಿಂದ ಮರಗಳನ್ನು ತಮ್ಮ ಮನೆಗಳಾಗಿ ತೆಗೆದುಕೊಳ್ಳುತ್ತವೆ, ಅಲ್ಲಾಹನು ಹೇಳುತ್ತಾನೆ–ಇನ್ನೂ ನೋಡಿರಿ. ನಿಮ್ಮ ಪ್ರಭು ಜೇನುನೊಣಕ್ಕೆ, ಪರ್ವತಗಳಲ್ಲೂ ಮರಗಳಲ್ಲೂ ಚಪ್ಪರಗಳ ಮೇಲಿರಿಸಿದ ಬಳ್ಳಿಗಳಲ್ಲೂ ತನ್ನ ತೊಟ್ಟಿಗಳನ್ನು ಕಟ್ಟ ಎಲ್ಲಾ ವಿಧದ ಫಲಗಳ ರಸವನ್ನು ಹೀರಿ, ನಿನ್ನ ಪ್ರಭು ಸುಗಮಗೊಳಿಸಿದೆ. ಎಂದು 'ವಹಿ' ಮಾಡಿದನು (ಆದೇಶವಿತ್ತನು) ಮಾರ್ಗಗಳಲ್ಲಿ ಚಲಿಸುತ್ತಿರುವ ಆ ನೊಣದ ಹೊಟ್ಟೆಯಿಂದ ವಿವಿಧ ಬಣ್ಣಗಳ ಪಾನಕ ಹೊರಡುತ್ತದೆ. ಅದರಲ್ಲಿ ಮನುಷ್ಯರಿಗೆ ಚಿಕಿತ್ಸೆ ನೀಡಲಾಗುತ್ತದೆ. ನಿಜವಾಗಿ ಇದು ಅವರಿಗೆ ಸಂಕೇತವಾಗಿದೆ. ಯಾರು ಚಿಂತನೆಯನ್ನು ನೀಡುತ್ತಾರೆ.[16:69] ಅಂದರೆ ಜೇನುನೊಣ. ಸಸ್ಯಶಾಸ್ತ್ರದಲ್ಲಿ, ಜೇನುನೊಣಗಳು ಸಸ್ಯ ಪರಾಗಸ್ಪರ್ಶದಲ್ಲಿ ಸಕ್ರಿಯ ಜೈವಿಕ ಮಧ್ಯವರ್ತಿಗಳಾಗಿವೆ ಮತ್ತು ಅವು ಸಸ್ಯದ ಸಾರಗಳಿಂದ ಜೇನುತುಪ್ಪವನ್ನು ಉತ್ಪಾದಿಸುತ್ತವೆ ಎಂದು ತಿಳಿದಿದೆ, ಈ ಉತ್ಪನ್ನವು ಆಹಾರ ಮತ್ತು ಔಷಧವಾಗಿ ಮೌಲ್ಯಯುತವಾಗಿದೆ.

ಮಾನವನ ಪಾತ್ರ

ಮಾನವ ಜೀವಿಗಳ ಸೃಷ್ಟಿಯನ್ನು ಉಲ್ಲೇಖಿಸುವ ಮೂಲಕ ಅಲ್ಲಾಹನ ಚಿಂತನೆ ಮತ್ತು ಗುರುತಿಸುವಿಕೆಯನ್ನು ನಿರ್ವಹಿಸಲು ಮತ್ತು ಆನಂದಿಸಲು ದೈವಿಕ ಆಜ್ಞೆಯನ್ನು ನಿರ್ದೇಶಿಸಲಾಗಿದೆ. ಪ್ರವಾದಿ ಮುಹಮ್ಮದ್ ಅವರು ಹೇಳುವಂತೆ: "ಪ್ರಕೃತಿ ಸುಂದರ ಮತ್ತು ಹಸಿರು, ಅಲ್ಲಾಹನು ಭೂಮಿಯನ್ನು ನೋಡಿಕೊಳ್ಳಲು ಮನುಷ್ಯನನ್ನು ಇರಿಸಿದ್ದಾನೆ, (ದೇವರು) ಅವನು ಏನು ಮಾಡುತ್ತಿದ್ದಾನೆ ಎಂಬುದನ್ನು ನೋಡುತ್ತಾನೆ." ನಂತರ ಪ್ರಕೃತಿಯನ್ನು ರಕ್ಷಿಸಲು ಮತ್ತು ನೈಸರ್ಗಿಕ ಸಮತೋಲನವನ್ನು ಕಾಪಾಡಿಕೊಳ್ಳಲು ದೇವರ ವಿಶ್ವಾಸವನ್ನು ಮನುಷ್ಯ ಗೌರವಿಸಬೇಕು.

ಭೂಮಿಯ ಪ್ರತಿ ಮಾನವನ ಜವಾಬ್ದಾರಿ–ಕಾಳಜಿ

ಅಲ್ಲಾಹನು ನಮ್ಮನ್ನು ಭೂಮಿಯ ಮೇಲೆ ವಾರಸುದಾರರಾಗಿ ಸೃಷ್ಟಿಸಿದ್ದಾನೆ. ಕುರ್‌ಆನ್, ಬೈಬಲ್‌ನಂತೆಯೇ. ಭೂಮಿಯಾದ್ಯಂತ 'ಖಲೀಫಾಗಳು'(ವಾರಸುದಾರ/ಉತ್ತರಾಧಿಕಾರಿ) ಎಂಬ ಶೀರ್ಷಿಕೆಯ ಮೂಲಕ ಮಾನವರಿಗೆ ಉಸ್ತುವಾರಿ ಪಾತ್ರವನ್ನು ಸೂಚಿಸುತ್ತದೆ. ಆದ್ದರಿಂದ ಅಲ್ಲಾಹನು ನಮಗೆ ವಹಿಸಿರುವ ಈ ಪಾತ್ರವನ್ನು ಪೂರೈಸುವುದು ನಮ್ಮ ಜವಾಬ್ದಾರಿಯಾಗಿದೆ ಮತ್ತು ಇದನ್ನು ಪರಿಸರದ ಸಂರಕ್ಷಣೆಯ ಮೂಲಕ ಮಾಡಬಹುದು. ಭೂಮಿಯು ಹಸಿರು ಮತ್ತು ಸುಂದರವಾಗಿದೆ. ಅಲ್ಲಾಹನು ನಮ್ಮನ್ನು ಅದರ ಮೇಲ್ವಿಚಾರಕರಾಗಿ ನೇಮಿಸಿದ್ದಾನೆ. ಇಡೀ ಭೂಮಿಯನ್ನು ಶುದ್ಧ ಮತ್ತು ಶುದ್ಧ ಆರಾಧನ ಸ್ಥಳವಾಗಿ ರಚಿಸಲಾಗಿದೆ. ಮರವನ್ನು ನೆಟ್ಟು ಅದು ಬಲಿತ ಮತ್ತು ಫಲ ನೀಡುವವರೆಗೆ ಶ್ರದ್ಧೆಯಿಂದ ನೋಡಿಕೊಳ್ಳುವವರಿಗೆ ಪ್ರತಿಫಲ ದೊರೆಯುತ್ತದೆ. ಒಬ್ಬ ವ್ಯಕ್ತಿ ಮರವನ್ನು ನೆಟ್ಟರೆ ಅಥವಾ ಹೊಲವನ್ನು ಬಿತ್ತಿದರೆ, ಅದರ ಫಲಗಳನ್ನು ಮನುಷ್ಯರು, ಪ್ರಾಣಿಗಳು ಮತ್ತು ಪಕ್ಷಿಗಳು ತಿನ್ನುತ್ತಿದ್ದರೆ, ಅದು

ISSN: 2320-9941
ಪ್ರತಿಸ್ಪಂದ । Prathispandha

ಅವನ ಅಲ್ಲಾಹನ ಮೇಲಿನ ಪ್ರೀತಿ, ಭಕ್ತಿಯಾಗಿದೆ.

ಭೂಮಿಯ ಸೃಷ್ಟಿ ಮತ್ತು ಅದರ ಸೌಂದರ್ಯದ ಕುರಿತು ಪವಿತ್ರ ಕುರ್‌ಆನ್‌ನ ಕೆಲವು ಸುಂದರವಾದ ಆಯತ್‌ಗಳು ಹೀಗಿವೆ.

1. ಅಲ್ಲಾಹನು ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಸಕಲ ವಸ್ತುಗಳನ್ನು ನಿಮಗೆ ಅಧೀನಗೊಳಿಸಿರುವುದನ್ನೂ ತನ್ನ ಪ್ರತ್ಯಕ್ಷ ಹಾಗೂ ರಹಸ್ಯ ಅನುಗ್ರಹಗಳನ್ನು ನಿಮಗೆ ಪೂರ್ತಿಗೊಳಿಸಿಕೊಟ್ಟಿರುವುದನ್ನೂ ನೀವು ನೋಡುತ್ತಿಲ್ಲವೇ? ಹೀಗಿದ್ದೂ ಮಾನವರಲ್ಲಿ ಕೆಲವರು ತಮ್ಮ ಬಳಿ ಯಾವುದೇ ಜ್ಞಾನವಾಗಲಿ ಸನ್ಮಾರ್ಗದರ್ಶ ವಾಗಲಿ ಬೆಳಕು ತೋರಿಸುವ ಯಾವುದಾದರೂ ಗ್ರಂಥವಾಗಲಿ ಇಲ್ಲದೆ ಅಲ್ಲಾಹನೆ ವಿಷಯದಲ್ಲಿ ಜಗಳಾಡುತ್ತಾರೆ. [31:20]

2. ನಾವು ಮಾನವನನ್ನು ಅತ್ಯುತ್ತಮ ಪ್ರಕೃತಿಯಲ್ಲಿ ಸೃಷ್ಟಿಸಿರುತ್ತೇವೆ. [95:4]

3. ಅವನು ಮಾಡಿರುವುದೆಲ್ಲವನ್ನೂ ಚೆನ್ನಾಗಿಯೇ ಮಾಡಿರುತ್ತಾನೆ. ಅವನು ಮಾನವ ಸೃಷ್ಟಿಯ ಆರಂಭವನ್ನು ಮಣ್ಣಿನ ಗಾರೆಯಿಂದ ಮಾಡಿದನು. [32:7]

4. ಅವನು ಮಾಡಿರುವುದೆಲ್ಲವನ್ನೂ ಚೆನ್ನಾಗಿಯೇ ಮಾಡಿರುತ್ತಾನೆ. ಅವನು ಮಾನವ ಸೃಷ್ಟಿಯ ಆರಂಭವನ್ನು ಮಣ್ಣಿನ ಗಾರೆಯಿಂದ ಮಾಡಿದನು. [32:7]

5. ಅಲ್ಲಾಹನು ಭೂಮಿ–ಆಕಾಶಗಳ ಮಾಲೀಕನೂ ಮತ್ತು ಅವನ ಅಧಿಕಾರವು ಸರ್ವಸ್ವವೂ ವ್ಯಾಪಿಸಿದೆ. ಭೂಮಿ–ಆಕಾಶಗಳ ಸೃಷ್ಟಿಯಲ್ಲಿಯೂ ರಾತ್ರಿ ಹಗಲುಗಳು ಅನುಕ್ರಮವಾಗಿ ಬರುತ್ತಿರುವುದರಲ್ಲಿಯೂ ಬುದ್ಧಿಜೀವಿಗಳಿಗೆ ಸಾಕಷ್ಟು ನಿದರ್ಶನಗಳಿವೆ. [3:189–190]

6. ಆದುದರಿಂದ (ಸಂದೇಶವಾಹಕರೇ ಮತ್ತವರ ಅನುಯಾಯಿಗಳೇ) ನೀವು ಏಕನಿಷ್ಠೆಯಿಂದ ನಿಮ್ಮ ಮುಖವನ್ನು ಈ ಧರ್ಮದ ಕಡೆ ಕೇಂದ್ರೀಕರಿಸಿರಿ. ಅಲ್ಲಾಹನು ಮಾನವನನ್ನು ಸೃಷ್ಟಿಸಿದ ಪ್ರಕೃತಿಯಲ್ಲೇ ಸ್ಥಿರವಾಗಿರಿ. ಅಲ್ಲಾಹನು ಮಾಡಿದ ರಚನೆಯನ್ನು ಬದಲಾಯಿಸಲಾಗದು. ಇದುವೇ ಸತ್ಯ ಮತ್ತು ಸರಿಯಾದ ಧರ್ಮವಾಗಿದೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ. [30:30]

7. (ಅರ್ಥಾತ್ ಅಲ್ಲಾಹನು ಯಾವ ಪ್ರಕೃತಿಯಲ್ಲಿ ಮಾನವನನ್ನು ಸೃಷ್ಟಿಸಿದ್ದಾನೋ ಅದನ್ನು ಕೆಡಿಸುವುದು ಅಥವಾ ವಿರೂಪಗೊಳಿಸುವುದು ಸರಿಯಲ್ಲ) ಭೂಮಿಯ ಮೇಲೆ ಚಲಿಸುವ ಪ್ರಾಣಿಗಳನ್ನೂ ವಾಯುವಿನಲ್ಲಿ ರೆಕ್ಕೆಗಳಿಂದ ಹಾರಾಡುವ ಪಕ್ಷಿಗಳನ್ನೂ ನೋಡಿಕೊಳ್ಳಿರಿ. ಇವೆಲ್ಲವೂ ನಿಮ್ಮಂತೆಯೇ ಇರುವ ವರ್ಗಗಳು. ನಾವು ಅವುಗಳ ವಿಧಿಲಿಖಿತದಲ್ಲೇನೂ ಲೋಪಗೊಳಿಸಿಲಿಲ್ಲ. ಅನಂತರ ಇವೆಲ್ಲ ತಮ್ಮ ಪ್ರಭುವಿನ ಕಡೆಗೆ ಒಟ್ಟುಗೂಡಿಸಲ್ಪಡುತ್ತವೆ. [6:38]

8. ಅವನು ನಿಮಗೆ ಕಾಣುವ ಸ್ತಂಭಗಳಿಲ್ಲದೆ ಆಕಾಶಗಳನ್ನು ಸೃಷ್ಟಿಸಿದನು. ಭುಮಿಯು ನಿಮ್ಮ ಸಹಿತ ಉರುಳಿ ಬಿಡದಂತೆ ಅವನು ಅದರಲ್ಲಿ ಪರ್ವತಗಳನ್ನು ನಾಟಿದನು. ಅವನು ಎಲ್ಲಾ ತರದ ಪ್ರಾಣಿಗಳನ್ನು ಭೂಮಿಯಲ್ಲಿ ಹಬ್ಬಿಸಿ ಬಿಟ್ಟನು. ಆಕಾಶದಿಂದ ನೀರನ್ನು ಸುರಿಸಿದನು ಮತ್ತು ಭೂಮಿಯಲ್ಲಿ ತರತರದ ಉತ್ತಮ ವಸ್ತುಗಳನ್ನು ಮೊಳೆಯಿಸಿದನು. [31:10]

9. ಭೂಮಿಯನ್ನು ನಾವು ಹಾಸಿದೆವು, ಅದರಲ್ಲಿ ಪರ್ವತಗಳನ್ನು ನಾಟಿದೆವು ಮತ್ತು ಅದರೊಳಗೆ ಎಲ್ಲ ವಿಧದ ನಯನ ಮನೋಹರ ಸಸ್ಯಗಳನ್ನು ಬೆಳೆಸಿದೆವು. ಇವೆಲ್ಲವೂ (ಸತ್ಯದ ಕಡೆಗೆ) ಮರಳುವ ಪ್ರತಿಯೊಬ್ಬ ದಾಸನ ಕಣ್ತೆರೆಸುವ ಮತ್ತು ಅವನಿಗೆ ಪಾಠ ಕೊಡುವ ವಸ್ತುಗಳಾಗಿವೆ.[50:7–8]

10. ಈ ಭೂಮಿಯನ್ನು ವಿಸ್ತರಿಸಿದವನೂ ಇದರಲ್ಲಿ ಪರ್ವತಗಳ ಗೂಟಗಳನ್ನು ನಾಟ ದವನೂ ನದಿಗಳನ್ನು ಹರಿಸಿದವನೂ ಅವನೇ. ಅವನೇ ಪ್ರತಿಯೊಂದು ವಿಧದ ಫಲಗಳ ಜೋಡಿಗಳನ್ನು ಸೃಷ್ಟಿಸಿದನು ಮತ್ತು ಅವನೇ ಹಗಲಿನ ಮೇಲೆ ಇರುಳನ್ನು ಆಚ್ಛಾದಿಸುತ್ತಾನೆ. ನಿಶ್ಚಯವಾಗಿಯೂ ಆಲೋಚಿಸುವವರಿಗೆ ಇವುಗಳಲ್ಲೆಲ್ಲ ಅನೇಕ ದೃಷ್ಟಾಂತಗಳಿವೆ. [13:3]

11. (ಪ್ರವಾದಿಯ ಮಾತನ್ನು ಪಾಲಿಸಲು) ನಿರಾಕರಿಸಿದವರು, ಆಕಾಶಗಳೂ ಭೂಮಿಯ ಕೂಡಿಕೊಂಡಿ–ದ್ದು ಅನಂತರ ನಾವು ಅವುಗಳನ್ನು ಬೇರ್ಪಡಿಸಿದ್ದನ್ನೂ ಪ್ರತಿಯೊಂದು ಜೀವಿಯನ್ನೂ ನೀರಿನಿಂದ ಸೃಷ್ಟಿಸಿದ್ದನ್ನೂ

ಕಾಣಲಿಲ್ಲವೇ? ಅವರು ನಮ್ಮ ಸೃಷ್ಟಿಕರ್ತೃತ್ವದ ಮೇಲೆ) ವಿಶ್ವಾಸವಿರಿಸುವುದಿಲ್ಲವೇ? [21:30]

12. ನಾವು ಆಕಾಶವನ್ನು ಒಂದು ಭದ್ರ ಮೇಲುಛಾವಣಿಯನ್ನಾಗಿ ಮಾಡಿದೆವು. ಆದರೆ ಇವರಾದರೋ ವಿಶ್ವದ ನಿದರ್ಶನಗಳ ಕಡೆಗೆ ಗಮನಿಸುವುದೇ ಇಲ್ಲ. [21:32]

13. ಅವನು ಈ ನೀರಿನ ಮೂಲಕ ಬೆಳೆ ಬೆಳೆಯಿಸುತ್ತಾನೆ. ಜೈತೂನ್ (ಜೀವ ವೃಕ್ಷ) ಖರ್ಜೂರ, ದ್ರಾಕ್ಷಿ ಮತ್ತು ಇತರ ನಾನಾ ವಿಧದ ಫಲಗಳನ್ನು ಉತ್ಪಾದಿಸುತ್ತಾನೆ. ವಿವೇಚಿಸುವವರಿಗೆ ನಿಶ್ಚಯವಾಗಿಯೂ ಇದರಲ್ಲಿ ಒಂದು ದೊಡ್ಡ ನಿದರ್ಶನವಿದೆ. [16:11]

14. ಅವನು ನಿಮಗಾಗಿ ಇರುಳು ಹಗಲುಗಳನ್ನೂ ಸೂರ್ಯ ಚಂದ್ರರನ್ನೂ ನಿಯಂತ್ರಿಸಿರುತ್ತಾನೆ. ಎಲ್ಲಾ ನಕ್ಷತ್ರಗಳೂ ಅವನ ಅಪ್ಪಣೆಯಿಂದ ನಿಯಂತ್ರಿತವಾಗಿವೆ. ಬುದ್ಧಿಜೀವಿಗಳಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ. [16:12]

15. ಇನ್ನೂ ನೋಡಿರಿ. ನಿಮ್ಮ ಪ್ರಭು ಜೇನುನೊಣಕ್ಕೆ, ಪರ್ವತಗಳಲ್ಲೂ ಮರ ಕೆಗಳಲ್ಲೂ ಚಪ್ಪರಗಳ ಮೇಲಿರಿಸಿದ ಬಳ್ಳಿಗಳಲ್ಲೂ ತನ್ನ ತೊಟ್ಟಿಗಳನ್ನು ಕಟ್ಟ ಎಲ್ಲಾ ವಿಧದ ಫಲಗಳ ರಸವನ್ನು ಹೀರಿ, ನಿನ್ನ ಪ್ರಭು ಸುಗಮಗೊಳಿಸಿದೆ ಎಂದು 'ವಹಿ'" ಮಾಡಿದನು (ಆದೇಶವಿತ್ತನು).ಮಾರ್ಗಗಳಲ್ಲಿ ಚಲಿಸುತ್ತಿರು ಆ ನೊಣದ ಹೊಟ್ಟೆಯಿಂದ ವಿವಿಧ ಬಣ್ಣಗಳ ಪಾನಕ ಹೊರಡುತ್ತದೆ. ಅದರಲ್ಲಿ ಜನರಿಗೆ ಗುಣಾಂಶವಿದೆ. ನಿಶ್ಚಯವಾಗಿಯೂ ಚಿಂತನಶೀಲರಿಗೆ ಇದರಲ್ಲೂ ಒಂದು ನಿದರ್ಶನವಿದೆ. [16:69]

16. ಅವನೇ ಆಕಾಶದಿಂದ ನೀರನ್ನು ಸುರಿಸಿದನು. ಅನಂತರ ಅದರ ಮೂಲಕ ಎಲ್ಲ ವಿಧದ ವನಸ್ಪತಿಗಳನ್ನು ಉತ್ಪಾದಿಸಿದನು. ಆಮೇಲೆ ಅದರಿಂದ ಹಚ್ಚಹಸಿರಾದ ಹೊಲಗಳನ್ನೂ ವೃಕ್ಷಗಳನ್ನೂ ಉಂಟು ಮಾಡಿದನು. ಆ ಬಳಿಕ ಅವುಗಳಿಂದ ಹಲವು ಪದರುಗಳಿಂದ ಹೊದಿಯಲ್ಪಟ್ಟ ಧಾನ್ಯಗಳನ್ನು ಹೊರ ತಂದನು ಮತ್ತು ಖರ್ಜೂರಗಳ ಮೊಗ್ಗುಗಳಿಂದ, ಭಾರದಿಂದಾಗಿ ಬಾಗುತ್ತಿರುವ ಫಲಗಳ ಗೊಂಚಲು ಗೊಂಚಲುಗಳನ್ನೇ ಮಾಡಿದನು. ದ್ರಾಕ್ಷೆ, ಜೈತೂನ್ (ಇಪ್ಪೆ) ದಾಳಿಂಬೆಗಳ ತೋಟಗಳನ್ನು ಬೆಳೆಸಿದನು. ಅವುಗಳ ಫಲಗಳು ಪರಸ್ಪರ ಹೋಲುತ್ತಲೂ ಇವೆ ಮತ್ತು ಪ್ರತಿಯೊಂದರ ವೈಶಿಷ್ಟ್ಯಗಳು ವಿಭಿನ್ನವಾಗಿಯೂ ಇವೆ. ಈ ವೃಕ್ಷಗಳು ಫಲಬಿಡುವಾಗ ಅವುಗಳಲ್ಲಿ ಫಲ ಬರುವ ಮತ್ತು ಪಕ್ವವಾಗುವ ಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿರಿ. ವಿಶ್ವಾಸವಿಡುವವರಿಗೆ ಇವುಗಳಲ್ಲಿ ನಿದರ್ಶನಗಳಿವೆ. [6:99]

17. ಅಲ್ಲಾಹನೇ ಭೂಮಿಯನ್ನು ನಿಮ್ಮ ಪಾಲಿಗೆ ವಾಸಸ್ಥಾನವಾಗಿ ಮಾಡಿದವನು ಮತ್ತು ಮೇಲೆ ಆಕಾಶದ ಗುಂಬಜವನ್ನು ಮಾಡಿದವನು. ಅವನು ನಿಮಗೆ ರೂಪಕೊಟ್ಟನು. ಬಹಳ ಸುಂದರ ರೂಪವನ್ನೇ ಕೊಟ್ಟನು. ಅವನು ನಿಮಗೆ ಶುದ್ಧವಸ್ತುಗಳಿಂದ ಆಹಾರ ನೀಡಿದನು. ಈ (ಕಾರ್ಯಗಳನ್ನು ಮಾಡಿರುವಂತಹ) ಅಲ್ಲಾಹನೇ ನಿಮ್ಮ ಪ್ರಭು. ಅಗಣಿತ ಸಮೃದ್ಧಿಯುಳ್ಳವನು, ಅವನು ಸಕಲ ಲೋಕಗಳ ಪ್ರಭು. (40:64)

18. ನಾವು ಭೂಮಿಯನ್ನು ಹರಡಿದವು. ಅದರಲ್ಲಿ ಪರ್ವತಗಳನ್ನು ನಾಟಿದವು. ಅದರಲ್ಲಿ ಎಲ್ಲ ಜಾತಿಯ ಸಸ್ಯಗಳನ್ನು ಸರಿಯಾಗಿ ನಿಶ್ಚಿತ ಪ್ರಮಾಣದಲ್ಲಿ ಬೆಳೆಸಿದೆವು. [15:19]

19. ಖುರಾನ್ ಇಲ್ಲಿ ಸಸ್ಯಗಳು ಮತ್ತು ಹಣ್ಣುಗಳ ಬಗ್ಗೆ ಹೆಚ್ಚು ಆಳವಾಗಿ ಮಾತನಾಡುತ್ತದೆ, ಅಲ್ಲಾಹನು ದ್ರಾಕ್ಷಿಹಣ್ಣುಗಳು, ಆಲಿವ್‌ಗಳು ಮತ್ತು ದಾಳಿಂಬೆಗಳನ್ನು ಹೇಗೆ ರಚಿಸಿದ್ದಾನೆ ಎಂಬುದನ್ನು ಉಲ್ಲೇಖಿಸುತ್ತದೆ. ಅಲ್ಲಾಹನ ಸಂಕೀರ್ಣವಾದ ಸೃಷ್ಟಿ ಮತ್ತು ಅನನ್ಯ ವಿನ್ಯಾಸವನ್ನು ಇಲ್ಲಿ ಚರ್ಚಿಸಲಾಗಿದೆ, ಅವನು ಮಾತ್ರ ಈ ಭೂಮಿಯ ಮೇಲೆ ಪರಿಪೂರ್ಣವಾದದ್ದನ್ನು ಸೃಷ್ಟಿಸಬಲ್ಲನು. [6:99]

ಫಲಿತಗಳು:

ಸಸ್ಯಗಳು, ಆಹಾರ, ಔಷಧಗಳು, ಮಾನವ ಮತ್ತು ಪ್ರಾಣಿಗಳನ್ನು ಸೂರ್ಯನ ಶಾಖ ಮತ್ತು ಶಕ್ತಿಯಿಂದ ರಕ್ಷಿಸಲು ನೆರಳಿನ ಮೂಲವಾಗಿದೆ. ಪರಿಸರ ಸಮತೋಲನಕ್ಕೆ ಪ್ರಕೃತಿಯಲ್ಲಿ ತನ್ನ ಪಾತ್ರವನ್ನು ನಿರ್ವಹಿಸಲು ಅಲ್ಲಾಹನು ಪ್ರತಿಯೊಂದು ಜೀವಿಯನ್ನು ಸೃಷ್ಟಿಸಿದನು. ಸಮರ್ಥನೀಯ ಬಳಕೆಯು ಅಗತ್ಯವಾಗಿದೆ ಮತ್ತು ಬುದ್ಧಿವಂತಿಕೆಯಿಂದ ಈ ಸುಖ ಸಮೃದ್ಧಿಯ ಸವಲತ್ತುಗಳನ್ನು ನಿರ್ವಹಿಸಬೇಕು.

ಇಂಡೋನೇಷ್ಯಾದಲ್ಲಿ 'ಹಸಿರು ಸಂಸ್ಕೃತಿ' ಎಂಬ ಹೊಸ ಆಂದೋಲನವನ್ನು ಆರಂಭಿಸಲಾಗಿದೆ. ಇಸ್ಲಾಂ ಧರ್ಮವಷ್ಟೇ ಅಲ್ಲ, ದೇಶದ ಇತರೆ ಧರ್ಮಗಳ ಆಧಾರದ ಮೇಲೆ ಪ್ರಕೃತಿ–ಪರಿಸರ ಸಂರಕ್ಷಣೆಗೆ ಮುಂದಾಗಿದೆ.

ISSN: 2320-9941
ಪ್ರತಿಸ್ಪಂದ I Prathispandha

ಇದನ್ನು ಪರಿಸರ ಸಂರಕ್ಷಣಾ ಸಂಸ್ಕೃತಿ, ಉಳಿವಿನ ಸಮರ್ಥನೀಯತೆಯ ಸಂಸ್ಕೃತಿಯೆಂತಲೂ ಕರೆಯಬಹುದು. ಪರಿಸರ ಸಂರಕ್ಷಣೆಯ ಮೂಲಕ ದೇಶದ ಅಭಿವೃದ್ಧಿಯನ್ನು ಸಾಧಿಸುವ ಹೊಸ ಮಾರ್ಗಗಳನ್ನು ಕಂಡುಕೊಳ್ಳಲಾಗಿದೆ. ನೈಸರ್ಗಿಕ ಸಮತೋಲನವನ್ನು ಕಾಪಾಡುವಲ್ಲಿ ಯಶಸ್ವಿಯ ಹಾದಿ ತುಳಿಯುತ್ತಿದೆ. ಆ ಮಾರ್ಗದಲ್ಲಿ ಇಂಡೋನೇಷಿಯಾ ಸಫಲತೆಯ ಹಾದಿಯಲ್ಲಿ ಸಾಗುತ್ತಿರುವುದನ್ನು ಕಾಣಬಹುದು.

ದೇಶ ಅಥವಾ ಸಂಸ್ಥೆಯು ಹಸಿರು ಅಭ್ಯಾಸಗಳಲ್ಲಿ ತೊಡಗಿಸಿಕೊಂಡಾಗ, ಅದು ತನ್ನ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತದೆ ಆದರೆ ಹೊಸ ಸಂಪನ್ಮೂಲಗಳು ಮತ್ತು ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಉತ್ತಮ ಹೂಡಿಕೆಯನ್ನು ಸಿದ್ಧಪಡಿಸುತ್ತದೆ, ಇದು ಸಮರ್ಥನೀಯ ಸ್ಪರ್ಧಾತ್ಮಕ ಪ್ರಯೋಜನವನ್ನು ನೀಡುತ್ತದೆ. ಉದ್ಯಮಗಳು, ಕಾರ್ಖಾನೆಗಳು, ಉದ್ಯೋಗಿಗಳಿಗೆ ಹಸಿರು ಸಂಸ್ಕೃತಿಗೆ ಹೆಚ್ಚಿನ ಒತ್ತನ್ನು ನೀಡುವಲ್ಲಿ ಅಲ್ಲಿನ ಸರ್ಕಾರ ಒತ್ತಡ ಹೇರುತ್ತಿರುವುದರಿಂದ ಪ್ರಾಕೃತಿಕ ವಿಕೋಪಗಳಿಂದ ರಕ್ಷಣೆ ಮತ್ತು ಪ್ರಕೃತಿ ರಕ್ಷಣೆಯು ಸಾಧ್ಯವಾಗಿರುವುದನ್ನು ಕಾಣಬಹುದು. ಹಸಿರು ವಾತಾವರಣವನ್ನು ಎಲ್ಲೆಡೆ ಕಾಣಬಹುದು. ಮಾನವ ಪ್ರಕೃತಿಯೊಂದಿಗೆ ಸಮತೋಲನವಾದ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಶಿಕ್ಷಿತ ಉದ್ಯಮಿಗಳು ತಮ್ಮ ಕಾರ್ಯಕ್ಷೇತ್ರಗಳಲ್ಲಿ ಹಸಿರು ಸಂಸ್ಕೃತಿಯನ್ನು ಬೆಳೆಸಿ ಉಳಿಸುವುದನ್ನು ಚಳುವಳಿಯನ್ನಾಗಿ ಸ್ವೀಕರಿಸಿ ತಮ್ಮ ದೈನಂದಿನ ಜೀವನದ ಅಭ್ಯಾಸವನ್ನಾಗಿಸಿಕೊಂಡಿದ್ದಾರೆ. ಸಂಪನ್ಮೂಲಗಳ ಮಿತಬಳಕೆ, ನೀರು, ವಿದ್ಯುತ್ ಶಕ್ತಿ, ಮರ–ಗಿಡಗಳ ಸಂರಕ್ಷಣೆಗೆ ಕಟೀಬದ್ಧರಾಗಿರುವುದನ್ನು ಕಾಣಬಹುದಾಗಿದೆ. ಇಂತಹ ಕಾರ್ಯಗಳು ಇಡೀ ಜಗತ್ತಿನಾದ್ಯಂತ ಜಾರಿಗೊಂಡರೆ ಜಾಗತಿಕ ತಾಪಮಾನವನ್ನು ನಿಯಂತ್ರಣದಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ.

ಧರ್ಮ, ನಾಯಕರು ಮತ್ತು ಸಂಸ್ಥೆಗಳು ಸಮಾಜದಲ್ಲಿ ಬಹಳ ಪ್ರಭಾವಶಾಲಿಯಾಗಿವೆ. ಧರ್ಮಗುರುಗಳು, ವಿದ್ವಾಂಸರು, ಶಿಕ್ಷಕರು ಮತ್ತು ಬೋಧಕರಂತಹ ಧಾರ್ಮಿಕ ವ್ಯಕ್ತಿಗಳು ಸಮಾಜದ ಮೇಲೆ, ವಿಶೇಷವಾಗಿ ಯುವಕರ ಮೇಲೆ ಗಣನೀಯ ಪ್ರಭಾವವನ್ನು ಹೊಂದಿದ್ದಾರೆ. ಪರಿಸರ ಮತ್ತು ಅದರ ಸಂರಕ್ಷಣೆಯ ಬಗ್ಗೆ ಒಳನೋಟವನ್ನು ಮಾನವ ಸಮುದಾಯಕ್ಕೆ ಒದಗಿಸುವಲ್ಲಿ ಧರ್ಮಗುರುಗಳು ಮತ್ತು ವಿದ್ವಾಂಸರ ಪಾತ್ರವು ಪ್ರಮುಖವಾಗಿದೆ. ಇನ್ನೊಂದು, ಶಿಕ್ಷಣ ಸಂಸ್ಥೆಗಳು, ವಿಶೇಷವಾಗಿ ಧಾರ್ಮಿಕ ಸಂಸ್ಥೆಗಳ ಮೂಲಭೂತ ಕರ್ತವ್ಯವಾಗಬೇಕಿದೆ. ಮಾನವನಿಗೆ ಧರ್ಮ ಹದ್ದುಬಸ್ತಿನಲ್ಲಿ ಇಡುವುಷ್ಟು ಮತ್ಯಾವ ಸಂಸ್ಥೆಗಳು ನಿಯಂತ್ರಿಸುವುದಿಲ್ಲ, ಆದ್ದರಿಂದ ಮಾನವನಿಗೆ ಧರ್ಮದ ನೀತಿ ಬೋಧೆಯ ಮೂಲಕ ಪರಿಸರ–ಪ್ರಕೃತಿ ಸಂರಕ್ಷಣೆಯ ಮಹತ್ವದ ಅರಿವನ್ನು ಉಂಟು ಮಾಡುವುದು ಸಮಂಜಸವಾಗಿದೆ.

■■

ಪರಮಾರ್ಶನ ಗ್ರಂಥಗಳು:

1. ಪವಿತ್ರ ಕುರ್‌ಆನ್: ಭಾವಾನುವಾದ : ಮೌಲಾನ ಸಯ್ಯದ್ ಅಬುಲ್ ಆಲಾ ಮೌದೂದಿ, ಕನ್ನಡಕ್ಕೆ : ಅಬ್ದುಲ್ ಗಫ್ಫಾರ್ ಎಸ್. ಶಾಂತಿ ಪ್ರಕಾಶನ, ಮಂಗಳೂರು, 2010

The Joy and Reflection of Nature

● **Kavya K**

William Wordsworth wrote that he "considers man and nature as essentially adapted to each other, and the mind of man as naturally the mirror of the fairest and most interesting properties of nature."

I Wandered Lonely as a Cloud - By William Wordsworth

"I Wandered Lonely as a Cloud" is one of the most well-known and beloved poems written in English. It was written by Romantic poet William Wordsworth around 1804, but he later revised it; the final and most well-known version of the poem was published in 1815. The poem is based on one of Wordsworth's own walks through the English Lake District countryside. During this walk, he and his sister came across a long strip of daffodils. In the poem, these daffodils have a long-lasting impact on the speaker, both in terms of the immediate impression they make and in how the image of them re-

Address : Kavya K
Bengaluru

ISSN: 2320-9941
ಪ್ರತಿಸ್ಪಂದ I Prathispandha

turns to the speaker's mind later on. "I Wandered Lonely as a Cloud" is a quintessentially romantic poem. "I Wandered Lonely as a Cloud" is a classic Romantic poem that explores key concepts about imagination, humanity, and the natural world. The speaker begins by comparing himself to a solitary cloud drifting through the sky, implying feelings of loneliness and detachment. The cloud floats high above valleys and hills, emphasizing the speaker's sense of isolation while also providing an expansive view of the world beneath. Suddenly, the speaker encounters a large group, which surprises him and breaks his solitude. The "crowd" is revealed to be a swarm of golden daffodils, personified to increase their visibility and significance. The daffodils are displayed in a picturesque natural setting, emphasizing their beauty. The daffodils are animated, described as "dancing in the wind," giving them a cheerful, lively appearance. The speaker compares the daffodils to stars, emphasizing their vast number and continuity of presence. The comparison includes the twinkling of stars in the Milky Way, emphasizing the daffodils' brilliance and beauty. The daffodils appear to stretch indefinitely, emphasizing the vastness and overwhelming impact of their display. The flowers are arranged along the edge of a bay, blending land and water in a harmonious natural scene. The speaker emphasizes the vast number of daffodils, conveying a sense of wonder and amazement. The daffodils are again personified, this time as dancing joyfully, emphasizing their lively and cheerful nature. The nearby waves are also described as dancing, creating a lively, joyful atmosphere. The daffodils outperform the waves in terms of joy and vibrancy. The speaker reflects that any poet would be happy in such a cheerful setting, implying that the beauty of the daffodils is contagious. The daffodils are described as merry and cheerful, which lifts the speaker's spirits. The speaker reflects on his initial reaction of simply gazing at the scene, not realizing its deeper significance. He recognizes the long-term value and emotional wealth that the experience provided him, even though he did not realize it at the time. The speaker describes moments of rest or contemplation on his couch, implying periods of reflection. These are the moments when he is either daydreaming or deep in thought. The memory of the daffodils appears suddenly and vividly in his mind's eye, as an internal vision. This recollection brings happiness, providing a sense of peace and pleasure even in solitude. The memory makes the speaker happy, demonstrating the experience's strong emotional impact. The speaker's heart metaphorically dances with the daffodils, indicating a strong, joyful connection to the memory.

"I Wandered Lonely as a Cloud" by William Wordsworth beautifully encapsulates

the Romantic ideal of finding profound joy and inspiration in nature. Through vivid imagery and personification, Wordsworth illustrates how a simple encounter with a field of daffodils can lift the human spirit and provide lasting emotional sustenance. The poem highlights the transformative power of nature, suggesting that even moments of loneliness and contemplation can be enriched by the beauty of the natural world. Wordsworth's reflective and joyous tone underscores his deep appreciation for nature's ability to heal, inspire, and bring happiness, reinforcing the Romantic belief in the intimate connection between humans and the natural environment.

Lines Composed a Few Miles above Tintern Abbey - By William Wordsworth

The poem "Lines Composed a Few Miles above Tintern Abbey, On Revisiting the Banks of the Wye during a Tour. July 13, 1798"—commonly known as "Tintern Abbey"—was written by the British Romantic poet William Wordsworth. Wordsworth first visited the Wye Valley when he was 23 years old. His return five years later prompted this poem, which Wordsworth saw as expressing his views on nature, creativity, and the human soul. "Tintern Abbey" was the final poem in Wordsworth and Coleridge's Lyrical Ballads, a collection of poems published in 1798.

It's been five years since the poet last visited this location, and he emphasizes the length of time by mentioning the summers and long winters. The poet hears the gentle sound of water flowing from the mountain springs, creating a peaceful and soothing noise. The poet sees the tall cliffs again. These cliffs, with their wild and secluded nature, evoke even stronger feelings of solitude. The cliffs connect the landscape to the peaceful sky above. The poet is relaxing beneath a sycamore tree, admiring the scenery. He's looking at the small garden plots and orchard tree clusters. The orchards are full of unripe fruits that are uniformly green. The orchards blend into the surrounding woods and thickets.

He sees hedgerows, which resemble wild, playful lines of trees and bushes. He sees lush, green farms right up to the doorsteps. Smoke rises silently from the trees, implying hidden dwellings or activities. The smoke gives the impression of wandering people living in the woods without proper shelter. Alternatively, it could indicate the presence of a solitary hermit living in a cave, sitting alone by the fire. Despite his long absence, he has not forgotten the beautiful scenery. Unlike a blind person who cannot

ISSN: 2320-9941

see the landscape, he has vivid memories of these scenes. When he was alone or overwhelmed by the noise of towns and cities, he would recall these scenes, which gave him sweet sensations in his body and heart. These memories also gave him peace and tranquillity of mind. He had feelings of pleasure that he couldn't fully recall, but they still lifted him. These emotions most likely influenced his daily acts of kindness and love, which are the best aspects of a good man's life, even if they are small and often go unnoticed. He believes that these scenes have given him a more profound gift. This gift is a blessed state of mind in which the world's burdens and mysteries seem lighter and more manageable. In this relaxed and blessed state, his emotions gently guide him. In this state, his physical sensations are almost suspended, making him feel as if his body is asleep and he is only a living soul. In this peaceful state, his perception is heightened by harmony and deep joy, allowing him to comprehend and connect with the essence of life itself. Even if this belief is unfounded, he frequently finds comfort in it. During dark times and in the monotony of daily life. When the world's frantic and unproductive activity weighed heavily on him. He frequently seeks solace in his memories of the River Wye, mentally escaping to its tranquil woodlands. Despite his faded memories and mixed emotions, he recalls a vivid image of this place. Standing here, he enjoys both the present moment and the knowledge that these memories will sustain him in the future. He dares to hope, despite his differences from when he first visited these hills. Back then, he was as carefree and energetic as a young deer, exploring mountains, rivers, and streams. His early explorations were more about avoiding fears than finding what he loved. Nature meant everything to him after he outgrew the simple pleasures of childhood. He struggles to describe his personality at the time. The waterfalls captivated him completely. The rocks, mountains, and woods were a powerful, immediate source of love and fascination for him, necessitating no further reflection or external interest. The period of intense, passionate connection to nature, along with its joys and thrills, has come to an end. He doesn't feel weak, mourn, or complain about his loss because he believes he's received other valuable gifts in exchange. He now sees nature differently than he did in his carefree youth. The undercurrent of melancholy that permeates human existence in nature is gentle enough to humble and soothe him. He has experienced a presence in nature that inspires meaningful, happy thoughts in him. All things have this presence ingrained in them deeply. It is found in the ocean, the sky, the air, the light of sunsets, and human minds. This presence, which permeates everything, is a force or spirit that propels all living things. That's why he still has a deep love for nature. He adores everything that we can see and hear in nature, which is influenced

by both reality and our perception. He is content that nature serves as the basis for his most profound ideas, a consoling presence, a guiding light, and the central force of his moral and emotional existence. He admits that he might not be as upbeat and spirited if he had not learned from nature. The fact that his close friend, who he later discovered to be his sister Dorothy, is by his side by the river gives him comfort. He is reminded of his own former passions and delights by her voice and the glimmer in her eyes. He wants to see himself again in her. He prays, believing that those who love nature will always be rewarded by having joy throughout their lives. We can learn from nature, find beauty and serenity there, and be inspired to think morally. We are able to withstand the negativity, criticism, and cruelty of others and hold onto the conviction that there are many positive things in the world because of the influence of nature. He hopes his sister will get to see the wonders of nature, such as the moon shining while she strolls. He hopes the cool mountain breezes reach her. When her early excitement gives way to a calmer, more adult enjoyment in the future. Her memories will contain all the lovely sounds and harmonies, and her mind will be full of lovely pictures. If she ever experiences grief, pain, fear, or loneliness. Recalling him and his counsel will bring her solace and healing. even when he's gone and can't see her eyes or hear her voice. She won't soon forget that they were standing next to this lovely river. He has visited this location incessantly since he has always been a passionate lover of the natural world. With time, his love of the natural world has become more intimate, intense, and revered. She will recall that this landscape, in addition to its inherent beauty, has even greater sentimental value to him now that he has been gone for many years because it makes him think of her.

Comparison and Contrast:

Comparison:

Both poems celebrate the beauty and restorative power of nature.

Both emphasize the importance of memory and how experiences with nature can continue to influence and uplift the human spirit.

Contrast:

"I Wandered Lonely as a Cloud" is shorter, simpler, and more focused on a single joyful experience, while "Lines Composed a Few Miles Above Tintern Abbey" is longer, more complex, and reflective of a lifetime of experiences.

The former has a more immediate and visual impact, whereas the latter is deeply philosophical and contemplative, exploring broader themes of time, change, and spiritual growth.

In summary, while both poems highlight Wordsworth's profound appreciation for nature, "I Wandered Lonely as a Cloud" captures the immediate joy and beauty of a specific moment, and "Lines Composed a Few Miles Above Tintern Abbey" offers a deeper, more introspective reflection on the lasting and evolving influence of nature over time.

■■

Reference:

1. I Wandered Lonely as a Cloud - By William Wordsworth., Ana Sampson.,2009., Michael O'Mara
2. Lines Composed a Few Miles above Tintern Abbey - By William Wordsworth., 2020., Prakash Book Depot

ಪ್ರತಿಸ್ಪಂದ

ಕೊಡು-ಕೊಳ್ಳುವಿಕೆಯ ಸಂಕರ

PRATISPANDA

An exchange of creative impulse

ಪುಸ್ತಕ ಲೋಕದಲ್ಲಿ ಪ್ರತಿಸ್ಪಂದ

ನಿಮ್ಮ ಕೃತಿಯನ್ನು ಭುವಿ, ಅರ್ಕಾವತಿ ಲೇಔಟ್, ಕೆ. ನಾರಾಯಣಪುರ,

ಬೆಂಗಳೂರು – 560077ಗೆ ಅಂಚೆ ಮೂಲಕ ಕಳಿಸಬಹುದು. ಇಲ್ಲವೆ, ನಿಮ್ಮ ಕೃತಿಗಳು ಕಡಿಮೆ ಇದ್ದಲ್ಲಿ ಸರಿಯಾದ ಪತ್ರದೊಂದಿಗೆ ಕೃತಿಯ ಸಾಫ್ಟ್ ಕಾಪಿಯನ್ನು prathispandha@gmail.com ಪ್ರತಿಸ್ಪಂದ ಮೇಲ್‌ಗೆ ಕಳಿಸಬಹುದು. ನಿಮ್ಮ ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸಿ, ಪ್ರಕಟಿಸಲಾಗುವುದು. ಇಲ್ಲವೇ ನೀವೇ ಕೃತಿ ಕುರಿತು ಅತ್ಯುತ್ತಮ ವಿಮರ್ಶೆ ಬರೆಸಿ ನಮ್ಮ ಪ್ರತಿಸ್ಪಂದ ಮೇಲ್ ಗೆ ಕಳಿಸಬಹುದು.



ಈ ವಿಭಾಗದಲ್ಲಿ ನಿಮ್ಮ ಕೃತಿಗಳನ್ನು ಓದುಗರಿಗೆ ಪರಿಚಯಿಸಬಹುದು. ಈ ಹೊಸ ಅಂಕಣವನ್ನು ಪ್ರತಿಸ್ಪಂದ ಓದುಗರು ಅರ್ಥಪೂರ್ಣವಾಗಿ ಬಳಸಿಕೊಳ್ಳುವ ಮೂಲಕ ಓದುವ ಆಸಕ್ತಿಗಳನ್ನು ಹೆಚ್ಚಿಸಿಕೊಳ್ಳಬಹುದೆಂಬ ನಿರೀಕ್ಷೆಯಲ್ಲಿ...

– ಪ್ರತಿಸ್ಪಂದ

ಮಾಹಿತಿಗಾಗಿ

prathispandha@gmail.com

ISSN: 2320-9941
ಪ್ರತಿಸ್ಪಂದ । Prathispandha


ಒಂದೇ ನೆಲದಲ್ಲಿ ಅರಳಿದ ಎರಡು ವಿಭಿನ್ನ ದಳಗಳು

ನೆಲದ ನಂಬಿಕೆ ಮಾನ್ಸೂನ್ ಕವಿತೆಗಳು

● **ಡಾ. ರವಿಶಂಕರ್ ಎ. ಕೆ.**

ಮನುಷ್ಯನಿಗೆ ಭಾವನೆಗಳು ಹೆಚ್ಚಾದಂತೆ, ಅದನ್ನು ಅಭಿವ್ಯಕ್ತಿಸುವ ಕ್ರಮವೂ ಬೇರೆ ಬೇರೆಯಾಗುತ್ತದೆ. ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ ಎಂಬಂತೆ ಕೆಲವರು ಮಾತ್ರ ಕವಿತೆಯ ಮೊರೆ ಹೋಗುತ್ತಾರೆ. ಇವರು ನಿಜವಾದ ಮಾರ್ಗವನ್ನು ಹಾಗೂ ಶುದ್ಧರಾಗುವ ಹಂಬಲವನ್ನು ಕಾಣಲು ಯತ್ನಿಸುತ್ತಿರುತ್ತಾರೆ. ಬೇಂದ್ರೆ ಕವಿಯಾದುದು ಕಳೆದ ಶತಮಾನದಲ್ಲಿ ಹಾರಿದ ಪುಚ್ಛಗಳಿಂದ ಮಾತ್ರವಲ್ಲ. ಇಂದಿಗೂ ಓದುತ್ತಿರುವ ಅಸಂಖ್ಯಾತ ಮನೋವೈದ್ಯಗಳಿಂದ ಎನ್ನಬಹುದು. ಒಂದು ಕವಿತೆ ಎನಿಸಿಕೊಳ್ಳುವುದು, ಕವಿ ಎನಿಸಿಕೊಳ್ಳುವುದು ಸ್ವಾರ್ಥ ಮನೋಭೂಮಿಕೆಯಿಂದಲ್ಲ. ನಿಸ್ವಾರ್ಥದ ಒಲುಮೆಯಿಂದ ಮಾತ್ರ. ಕವಿತೆ ಇದ್ದಲ್ಲಿ ಮಾತ್ರ ಶಾಂತಿ ಮೂಡಲು ಸಾಧ್ಯ. ಕವಿತೆ ಇದೆ ಎಂದರೆ, ಒಂದಿಷ್ಟು ಅದನ್ನು ಆರಾಧಿಸುವ ಸಹೃದಯರಿದ್ದಾರೆ ಎಂದರ್ಥ.

ಕೋಲಾರ ಜಿಲ್ಲೆಯು ನನ್ನ ಗ್ರಹಿಕೆಯಂತೆ ಬಿಸಿಲ ಹಬೆಗೆ ಬೆಂದು ಬಾಯಾರಿದ ಛಲದ ಜನರು, ಬಿಡದೆ ಭೂಮಿಗೆ ಬೆವರುಣಿಸಿ ಬಸಿದ ಪ್ರೇಮ ಸವಿಯ ತೆಲುಗನ್ನಡಿಗರು. ತೆಲುಗು ತಾಯಿಯ, ಕನ್ನಡ ತಂದೆಯ ಉಸಿರು ಕಂಡವರು. ಏನೇ ಇರಲಿ, ಇಂತಹ ನಾಡಿನಿಂದ ಮಾಸ್ತಿ ಅವರು ಕನ್ನಡಕ್ಕೆ ಕಥೆ ಹೇಳಿದವರು. ಇಂದು ಈ ನಾಡಿನಲ್ಲಿ ಎಲ್ಲೆಲ್ಲೂ ಕವಿ ಮನಸ್ಸುಗಳುದುಸಿವೆ ಎಂದರೆ, ನಾಡಿನ ಬೆವರಿಗೆ ಅಕ್ಷರಗಳ ಬೆಂಬಲವಿದೆ ಎಂದರ್ಥ. ಇದೇ ಮಣ್ಣಿನ ಮಾಲೂರು ಭೂಮಿಕೆಯಿಂದ ಇತ್ತೀಚೆಗೆ ಅರಳಿದ ಎರಡು ಕವನ ಕೃತಿಗಳ ವಿಭಿನ್ನ ನೋಟವನ್ನು ಈ ಎಲ್ಲಾ ಹಿನ್ನಲೆಯೊಂದಿಗೆ ತರಲು ಪ್ರಯತ್ನಿಸುತ್ತಿದ್ದೇನೆ.



ಸರ್ವೇಶ್ ಬಂಟಹಳ್ಳಿ ಹಾಗೂ ದೊಡ್ಡಕಲ್ಲಹಳ್ಳಿ ನಾರಾಯಣಪ್ಪ ಇವರು ಒಂದೇ ಮಣ್ಣಿನಲ್ಲಿ ಅರಳಿದ ವಿಭಿನ್ನ ಕಾವ್ಯ ಬೇರುಗಳು. ಆ ಬೇರಿನಿಂದಲೇ ನಿತ್ಯ ಚಿಗುರುತ್ತಿರುವ ಕವಿಯೊಡಲುಗಳು. ಏಕೆಂದರೆ, ಇವರಿಗೆ ಮಣ್ಣಿನ ಪ್ರೀತಿ ಇದೆ. ತಮ್ಮ ಹೆಸರಿನೊಂದಿಗೆ ಇಬ್ಬರೂ ಊರಿನ ಹೆಸರನ್ನು ದಾಖಲಿಸಿಕೊಂಡೇ ಜನರ ಮನಸ್ಸಿನಲ್ಲಿ ಉಳಿಯುತ್ತಿದ್ದಾರೆ. ಅಲಂಪು ಪ್ರಕಾಶನವೆಂಬ ಹೆಸರಿನೊಂದಿಗೆ ಮಾಲೂರಿನ ಗೆಳೆಯರ ಬಳಗವು ಸಾಹಿತ್ಯ ಚಿಂತನೆ, ಪ್ರಕಾಶನದ ಕಾರ್ಯಕ್ಕೆ ಸಿದ್ಧಗೊಂಡಿದ್ದಾರೆ. ಅದರ ಫಲವಾಗಿ ಏಳು ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ಎರಡು ಕೃತಿಗಳು ಕೂಡ ಇದೇ ಪ್ರಕಾಶನದಿಂದ ಸನ್ಮಿತ್ರರ ಪ್ರೇರಣೆಯಂತೆ ಪ್ರಕಟಗೊಂಡಿವೆ. ಇವರ ಸಾಹಿತ್ಯ ಕೃಷಿಯನ್ನು ಗಮನಿಸಿದರೆ, ಸರ್ವೇಶ್ ಬಂಟಹಳ್ಳಿಯವರು 'ಭಾವ ಸಿರಿ' ಎಂಬ ಕವನ ಸಂಕಲನ ಹಾಗೂ ಅದರ ಧ್ವನಿಮುದ್ರಿಕೆಯನ್ನು ನೀಡಿದ ಕೆಲವು ವರ್ಷಗಳೇ ಕಳೆದು ಎರಡನೇ ಸಂಕಲನವಾಗಿ 'ನೆಲದ ನಂಬಿಕೆ' ಈ ಕೃತಿಯನ್ನು

ಹೊರತಂದಿದ್ದಾರೆ. ದೊಡ್ಡಕಲ್ಲಹಳ್ಳಿ ನಾರಾಯಣಪ್ಪನವರು ಬೆಂಗಾಡು, ಉತ್ತೀತಿಯ ಹಾಡು, ಎದೆಯೊಳಗಿನ ಇಬ್ಬನಿ, ಕಲ್ಲಳ್ಳಿ ಗಜ್ಜಲ್ ಎಂಬ ನಾಲ್ಕು ಕವನ ಸಂಕಲನಗಳನ್ನು ನೀಡಿ, ಈಗ ಮಾನ್ಸೂನ್ ಕವಿತೆಗಳನ್ನು ಪ್ರಕಟಿಸಿದ್ದಾರೆ. ಸರ್ವಶೂನ್ಯ ಮತ್ತು ಗಜ್ಜಲ್ ಮೂಲಕ ಈ ಇಬ್ಬರೂ ಹಲವು ಕನ್ನಡಿಗರ ಮನಸ್ಸು ಗೆದ್ದು ಭರವಸೆಯ ಕವಿಗಳಾಗಿದ್ದಾರೆ.

ಈ ಕೃತಿಗಳನ್ನು ನನ್ನ ಓದಿನ ದಿಕ್ಕಿನಲ್ಲಿ ಸಹೃದಯ ವಿಮರ್ಶೆಗೆ ಒಳಪಡಿಸುತ್ತಿದ್ದೇನೆ. 'ನೆಲದ ನಂಬಿಕೆ' ಕೃತಿಯು ನಲವತ್ತೈದು ಕವಿತೆಗಳ ಸಂಕಲನವಾಗಿದೆ. ಪ್ರತಿ ಕವಿತೆಯಲ್ಲೂ ಕವಿ ಮಾತನಾಡುತ್ತಾರೆ, ಹೇಳುತ್ತಾರೆ, ಇಲ್ಲಿ ವೇದಿಕೆಯ ಶಬ್ದವಿದೆ ಆದರೆ ಯಾವುದೇ ಮುಖಾಮುಖಿ ಇಲ್ಲ. ಈ ಕೃತಿಯನ್ನು ಓದುವಾಗ ನಮ್ಮದೇ ಭಾವಲೋಕದ, ನಿತ್ಯ ಸವೆಯುವ ನಮ್ಮ ಹೆಜ್ಜೆ ಗುರುತುಗಳೇ 'ನೆಲದ ನಂಬಿಕೆ'ಯಾಗಿ ಕಾಣಿಸುತ್ತಿದೆ.

ಕವಿಯು ಈ ಲೋಕದೊಂದಿಗೆ ಸದಾ ಸಂವಾದಗೊಳ್ಳುತ್ತಾರೆ. ಅದು ತನ್ನೊಡಲ ಆಕ್ರೋಶವೂ ಹೌದು. ಈ ಬದುಕಿನ ಉತ್ತರಗಳು ಬೀದಿ ಬೀದಿಯಲ್ಲಿ ಚೆಲ್ಲಾಡುವುದನ್ನು ನೋಡಿಯೂ ಪ್ರಶ್ನೆಗಳಲ್ಲಿಯೇ ಪ್ರೇತಗಳಾದ ಜಗತ್ತನ್ನು ಕಂಡು ಬೇಸರಗೊಳ್ಳುತ್ತಾರೆ. ಅಂತರಂಗದ ಅರಿವೇ ಈ ಕವಿಯ ಪ್ರಧಾನ ವಸ್ತು. ಆ ಅರಿವಿನಲ್ಲಿಯೇ ಪ್ರತಿ ಕವಿತೆಯು ಧೀಶಕ್ತಿಯಾಗಿ ಮಾತನಾಡುತ್ತದೆ. ಈ ಸಂಕಲನದ ಪ್ರಧಾನ ಗುಣವೇ ಶಬ್ದ. ಶಬ್ದದೊಳಗಿನ ಶಕ್ತಿ. ಈ ಕಾರಣದಿಂದಲೇ ಕವಿಯು ಬೇಗ ಆಪ್ತವಾಗುತ್ತಾರೆ. ಪ್ರತಿ ಓದುಗನಿಗೂ ಕವಿಯು ನುಡಿಶಕ್ತಿಯ ಮೂಲಕ ಮುಖಾಮುಖಿಯಾಗುವ ಚೈತನ್ಯವು ಅರ್ಥಪೂರ್ಣವಾಗಿ ಓದಿಸಿಕೊಳ್ಳುತ್ತದೆ.

'ನೆಲದ ನಂಬಿಕೆ' ಎಂಬ ಕೃತಿ ಶೀರ್ಷಿಕೆ ಪಡೆದ ಮೊದಲ ಕವಿತೆಯು 'ಹೇ ಕೇಳು... ನಿನ್ನಂತೆ ನಾನು ನಂಜನ್ನೆ ನುಂಗಿ ಬಾಳುವುದಿಲ್ಲ' ಎನ್ನುವಾಗ ಸಮಾನತೆಯನ್ನು ಅಪೇಕ್ಷಿಸುವ ಜೀವವೊಂದು ಒಳಿತಿನ ತನ್ನ ಆದರ್ಶವನ್ನು ಯಾವ ಭಯವಿಲ್ಲದೆ ಮುಕ್ತವಾಗಿ ನುಡಿಯುತ್ತಿದೆ. ಈ ಕವಿತೆಯಲ್ಲಿ ಮೂರು ಹಂತಗಳಿವೆ. ಮೊದಲ ಮತ್ತು ಮೂರನೇ ಹಂತಗಳು ಇರುವಂತಿಕೆಯನ್ನು ನಿರ್ದೇಶಿಸಿದರೆ, ಎರಡನೇ ಹಂತವು ಒಟ್ಟಾಗಿ ಬಾಳ್ವೆಯ ಹಂಬಲವನ್ನು ಸಮತೆಯಲ್ಲಿ ಬಯಸುತ್ತಿದೆ. ಆದರೆ, ಹೇ ಕೇಳು.., ಹೇ... ಬಾ ಕೇಳು..., ಹೇಳಿ ಕೇಳುವೆ... ಈ ಮೂರು ಅಂಶಗಳು ಹಂತಗಳಿಗೆ ಮೆಟ್ಟಿಲಾಗದೆ ಎಡವಾಗಿ ತಾಕುತ್ತವೆ. ಉಳಿದಂತೆ ಕವಿತೆ ಒಂದೇ ಓಗದಲ್ಲಿ ನಿಂತು ತನಗನಿಸಿದಂತೆ ನೇರವಾಗಿ ನುಡಿಯುತ್ತದೆ.

'ಒಡೆದ ಕನ್ನಡಿಯೆದೆಗೆ' ಕವಿತೆಯು ಒಬ್ಬ ಮನುಷ್ಯನು ಸ್ವಗತದಲ್ಲಿ ನಿರೂಪಿಸಿಕೊಳ್ಳುವ ಕೆಲವು ಅಂಶಗಳನ್ನು ಮುಕ್ತವಾಗಿ ಪ್ರಕಟಿಸಿದೆ. ಕವಿತೆಯನ್ನು ಓದುವಾಗ, ನಮ್ಮದೇ ಸಾಲುಗಳಿವು ಎಂದು ಒಪ್ಪಿಕೊಳ್ಳುತ್ತೇವೆ. ಸಾಲಿಗೊಂದು ಅರ್ಥವನ್ನು ಧ್ವನಿಸುತ್ತಲೇ ಒಂದೇ ಮಾಲೆಯಾಗುವ ಭಾವ ವಿಕೇಂದ್ರಿಕರಣವು ಇಲ್ಲಿ ಸುಪ್ತವಾಗಿ ಅರಳುತ್ತದೆ. ಉದಾಹರಣೆಗೆ :

'ಇಲ್ಲಿ ನಂಬಿಕೆ' ಎಂದರೆ
ಕಣ್ಣಳು ಅರಳುತ್ತವೆ
ಕುರಿ ಸಿಕ್ಕ ಖುಷಿಗೆ ಬಿಗಿದಪ್ಪುತಾರೆ.
ನಂಬಿದರೆ ತಪ್ಪಂತೆ
ಹುಸಿಯಾಗಿದ್ದಾನೆ ಮನುಜ.
ಡಬ್ಬದಲಿ ಕಲ್ಲು ಹೊರಳಾಡಿವೆ
ಕೈಗಳು ಬಿಗಿದಪ್ಪಿವೆ ಕೊರಳ
ಆದರೂ ಇಲ್ಲೇ ಇದ್ದೇನೆ...

ಕೋರೋನಾ ರೋಗದ ಸಂದರ್ಭವನ್ನು ಮುಖ್ಯವಾಗಿಸಿಕೊಂಡು ಹುಟ್ಟಿರಬಹುದಾದ 'ಬರೀ ಗಾಯ ಸಾಕು!' ಎಂಬ ಕವಿತೆಯು ವಿಭಿನ್ನವಾಗಿದೆ. ಕೆಲವು ಸಾಲುಗಳನ್ನು ತೆಗೆದಿಟ್ಟು ಓದಿದರೆ, ಈ ಮಣ್ಣಿನ ಕ್ರಾಂತಿ ಗೀತೆಯನ್ನು ಹೋಲುತ್ತದೆ. ಆತ್ಮಾವಲೋಕನದಂತೆ ಮೂಡಿಬಂದಿರುವ ಈ ಕವಿತೆಯು ಯಾರಿಗೂ ಸಂದೇಶ ನೀಡುತ್ತಿಲ್ಲ. ತನ್ನೊಳಗಿನ ನೋವುಗಳಿಗೆ ತಾನೇ ಹುಡುಕಿಕೊಳ್ಳುವ ಮುಲಾಮಿನ ಗುರುತಾಗಿದೆ. ಈ ಕವಿತೆಯು Emily Dickinson ಅವರ Life is but life, and death but death! Bliss is but bliss and breath but breath!(Tis so much joy!) ಸಾಲುಗಳಿಗೆ ಕಾಲಾತೀತವಾಗಿ ಹತ್ತಿರವಾಗಿಸುತ್ತದೆ.

ಸಂಘರ್ಷದಲ್ಲೇ ಶಾಂತವಾಗಿ ಬದುಕಿದ್ದ ಸಾವಿರಾರು ವರ್ಷಗಳ ಮನುಷ್ಯನ ಬಾಳ್ವೆಗೆ ವಿಶ್ವ ಏಕತೆ, ಆಧುನಿಕತೆ, ತಂತ್ರಜ್ಞಾನಗಳ ನೈಪುಣ್ಯತೆಗೆ ಸಿಕ್ಕಿ ಭಯಗೊಂಡಿರುವ ಕಾಲವಿದು. ಈ ಕಾಲವನ್ನು ಸಂಕೇತಿಸುವ ಕವಿತೆಯೇ

ISSN: 2320-9941


'ಕಾಂತವಾಗಿದ್ದ ಕಣ್ಣುಗಳೆಲ್ಲ ಶಾಂತವಾಗಿವೆ'. ಮನುಷ್ಯನು ಸಂಬಂಧಗಳನ್ನು ಕಳಚುತ್ತಾ ಸ್ವಾರ್ಥದ ದಟ್ಟಹೆಜ್ಜೆಗಳಿಗೆ ಸಿಲುಕಿರಲು 'ಕೊಡುವ ಕೈಗಳೆಲ್ಲ ನಡುಗುತ್ತಿವೆ, ನುಡಿದ ಮಾತುಗಳೂ ಜೊತೆಗೆ' ಎನ್ನುವ ಮೂಲಕ ಮನುಷ್ಯನ ಅಸ್ಥಿತ್ವವು ಮಾಯವಾಗುತ್ತಿರುವ ಸೂಚನೆಗಳು ದಾಖಲಾಗಿವೆ. 'ಶೂನ್ಯದೂರಿನ ಬೇರು, ಎಷ್ಟು ಆಳವೋ ಏನೋ, ಬಿಗಿದು ಅಲ್ಲಿಗೆ ನಾನು ಜಾರಬೇಕು' ಎಂದು ತನ್ನೊಳಗೆ ತನ್ನ ನಂಬಿಕೆಯ ತುಂಬಿಕೊಳ್ಳುವ ಮನಸ್ಸು ಶಾಂತತೆ ಸಮಾಧಾನಿಸಿವೆ.

'ಸಾಂತ್ವನ ಹೇಳಬೇಕಿದ್ದ ಕೈ' ಎಂಬ ಆತ್ಮ ಸಂಸ್ಕಾರಕ್ಕಾಗಿ ಮನುಷ್ಯನ ರೂಪಿಸಿಕೊಳ್ಳಬೇಕಾದ ಮನಸ್ಸನ್ನು ಇಲ್ಲಿ ಕವಿತೆಯ ಮೂಲಕ ಕಾಣಬಹುದು. ನಾವು ಹದಗೊಳ್ಳುವ ಪರಿಗೆ ಬೇಕಾದ ರಿಪೇರಿಗಳೂ ಕೂಡ ನಮ್ಮಲ್ಲೇ ರೂಪಿಸಿಕೊಳ್ಳಬೇಕಿದೆ. ಕವಿತೆಗಳು ಬೇಕು.. ಏಕೆಂದರೆ ಕವಿತೆಗಳು ಇನ್ನೊಬ್ಬರಿಗೆ ನೀಡುವ ಚಿಕಿತ್ಸೆಗಳಲ್ಲ. ನಮಗೆ ನಾವೇ ತುಂಬಿಕೊಳ್ಳುವ ಜೀವಧಾತುಗಳು.

ಜನಪದ ಕಥೆಗಳ ಮೂಲಕ ನಮ್ಮ ಮಣ್ಣಿನಿಂದ ರೂಪಿತವಾಗುವ ಜನಪದ ಹೆಣ್ಣನ್ನು 'ಭಾವಬಿಂಬ' ಪರಿಚಯಿಸಿದೆ. ನಮ್ಮ ಪುರಾಣದ ಹೆಣ್ಣುಗಳಂತೆ ಮಾದರಿಯಾಗದೆ, ಸಹಜವಾಗಿ ತನ್ನಂತೆ ಹುಚ್ಚುಪರಿಗಳಿಗೆ ಬೆಚ್ಚನೆ ಬಾಯ್ಬಿಡುವ ಇಲ್ಲಿನ ಹೆಣ್ಣನ್ನು ಕವಿ ಹೀಗೆ ನಿರೂಪಿಸಿದ್ದಾರೆ.

"ಕಲ್ಲು ಮಣ್ಣಿನ ಹಾದಿ ಹಾಯಾಗಿ ಸುತ್ತುವಳು
ಕೆಸರು ಕಾಣುವುದವಳ ಕೆನ್ನೆ ತುಂಬಾ
ಮುಡಿ ತುಂಬಾ ಮಲ್ಲಿಗೆಯು ನನ್ನೊಡನೆ ಮಾತಾಡಿ
ಹೊಸ ನಂಟು ಬೆಸೆದಂತೆ ಭಾವಬಿಂಬ"

ಜನಪದವನ್ನೂ, ಭಾವಗೀತೆಯನ್ನೂ ಜೊತೆಗಿರಿಸಿ ಸ್ವರೂಪಗೊಳಿಸಿದ ಕವಿತೆ ಇದು. ಇಲ್ಲಿ ನೆನಪುಗಳು ಸುಮ್ಮನೆ ತಂಗಾಳಿಯಂತೆ ಸ್ಮರಿಸುವ ಅರ್ಥಪೂರ್ಣ ಭಾವಕನ್ನಡಿ ಇದು ಎನಿಸುತ್ತದೆ. ಈ ಸಂಕಲನದ ಮುಕ್ಕಾಲುಪಾಲು ಕವಿತೆಗಳು ಆತ್ಮಪ್ರತ್ಯಯದಲ್ಲಿ ನಿಂತು ಸುಂದರ ಧ್ವನಿ, ವಾಕ್ಯ ಹೀಗೆ ಕವಿತೆಯ ಸೆರಗಲ್ಲಿ ನಮ್ಮನ್ನು ಓದಿಸುವ ಹಣತಿಗೆ ಸಿದ್ಧವಾಗುತ್ತವೆ. 'ನಿಲ್ಲದ ಅಗ್ನಿ ಪ್ರವಾಹ'ವೆಂಬ ಕವಿತೆಯಂತೂ ಬೀದಿಯಲ್ಲಿ ನಿಂತ ಆಧುನಿಕ ಚಳವಳಿಕಾರನಾಗುವ ಪ್ರತಿ ಮನಸ್ಸನ್ನು ಸಂಭೋದಿಸುತ್ತದೆ. ಈ ಜಗತ್ತಿನ ಕುರಿತು ಎಲ್ಲರಿಗೂ ಬೇಸರವಾದ ಮರಳುಗಾಡಿನ ಮನಸ್ಸಿನಲ್ಲಿ ಇಂತಹ ಸಾಲುಗಳು ಕವಿಯಿಂದ ಬರುವುದನ್ನು ಕಂಡರೆ, ಸಾಂತ್ವಾನವೆಲ್ಲಿ ಎಂಬ ಆತಂಕವೂ ಎದುರಾಗಬಹುದು. ಕವಿಯು ಒಬ್ಬ ಸಾಮಾನ್ಯನೊಳಗೊಬ್ಬ ಸಿಗುವ ಅಸಹಾಯಕನಂತೆ ಕಡುರಾತ್ರಿಯ ರುದ್ರಕಣ್ಣೀರ ಸಪ್ಪಳವನ್ನು ಇಲ್ಲಿ ಕೈಚಾಚಿ ಚೆಲ್ಲಿರುವುದನ್ನು ಕಾಣಬಹುದು. ಈ ಸಮಾಜವು ಎಷ್ಟೆಲ್ಲಾ ಹಾಳಾಗಿದೆ, ಶೋಷಣೆಯ ಸಮುದ್ರವಾಗಿರುವ ಬಗೆಯನ್ನು ಕಂಡು ಹಿಡಿಶಾಪವಾಕುತ್ತಿದ್ದಾರೆ. ಒಂದು ಬೆಚ್ಚನೆಯ ಸತ್ವವನ್ನೂ ನುಚ್ಚುಗಾಯಗಳಲ್ಲಿ ಏಕಮುಖವಾಗಿ ಕುದಿಸುವ ಮನಸ್ಸಿನ ಅವಿರತ ಕೂಗು ಇಲ್ಲಿ ಮುಕ್ತವಾಗಿ ಧ್ವನಿಸಿದೆ. ಇದೇ ಧ್ವನಿಯಲ್ಲಿ ಮೈಚಾಚುವ ಬಿಸಿನೆತ್ತರ ಗಾಯಗಳಂತೆ ಮನಸ್ಸನ್ನು ಕುದಿಸಿ ಬರೆದ ಕವಿತೆಗಳೆಂದರೆ, 'ಸೆಟೆದು ಸಿಡಿದಿದೆ ಬದುಕು', 'ನಿಂತ ಬದುಕು', 'ತಿರುವಲ್ಲೇ ನಿಂತಿದ್ದೇನೆ ಬರುವಿರೆಂದು', 'ನಾನು ಸಾಮಾನ್ಯ'(ಈ ಕವಿತೆಯು ವರ್ತಮಾನದ ತೆಳುಪರದೆ–ಪ್ರತ್ಯೇಕವಾಗಿಯೇ ವಿಮರ್ಶಿಸುವಷ್ಟು ನೋಟಗಳಿವೆ), 'ಆತ್ಮಗಳು ಅವಲೋಕಿಸುತ್ತಿವೆ', 'ಒಬ್ಬನಿದ್ದಾನೆ ಒಳಗೆ', 'ಮಣ್ಣು ಮಾತನಾಡುತ್ತಿದೆ', 'ಕೇಳಬಾರದೇನು!', 'ಗಾಯಬಿದ್ದ ಹಣ್ಣಿಗೆ', 'ಹೊರಟವನೂ ನಮ್ಮವನೇ', 'ನಾನು ಉಳಿಯೋಲ್ಲ ಸಿಗಲು', 'ನಡೆದಿರುವೆ ನಾನೇ, ಒಬ್ಬನೇ ಸುಮ್ಮನೆ', 'ಬಳ್ಳಿ ಹಬ್ಬಿಸಬೇಕು ಬಿಗಿಯಾದ ಬುಡಕೆ', 'ಹಸಿದ ಒಡಲಿನ ದಾಹ', 'ಬಿಡುವಾದಾಗ



ಸಿಗುವೆ', 'ನಾನಿಲ್ಲ ಅಲ್ಲಿ', 'ಮತ್ತೊಮ್ಮೆ ಮುನಿಯದಿರು', 'ದೇವರು ಕೂಗುತ್ತಿದ್ದಾನೆ ಮೈಕಿನಲಿ', 'ಗೆದ್ದ ಗದ್ದುಗೆಯಲ್ಲಿ ನಗುವವರೇ ಇಲ್ಲ', 'ಆತ್ಮ ಅಲೆಯುತ್ತಿದೆ ಹೊರಗೆ, ಒಳಗೆ ಬರದೆ', 'ಎಲ್ಲಿದ್ದೆ ನೀನು?', 'ಬರಿ ಗದ್ದಲ ಸಂತೆ', 'ಹಾರುತ್ತಿದೆ ಚಿಟ್ಟೆ', 'ಮಹಾತ್ಮ ಮರೆತಿದ್ದಾನೆ ಮನೆ', 'ಒಮ್ಮೊಮ್ಮೆ ಹೀಗೂ ಆಗುತ್ತದೆ', 'ನಮ್ಮೂರಲ್ಲಿ ಎಲ್ಲರೂ ಇದ್ದಾ–ರೆ', 'ಕತ್ತಲಿನ ಬೆತ್ತಲಾಗುವ ಮೋಡಿ', 'ಕಣ್ಣ ಅಂಚಿನ ಕಥೆ', 'ಪರಾಕ್ರಮಗಳ ಪಹರೆ', 'ಚಿತ್ರ ಬಿಡಿಸುತ್ತಿದ್ದೇನೆ', 'ಬೆರೆತು ಬದುಕು ಗೆಲ್ಲಬೇಕು' ಎಂಬ ಅಂತರಂಗದ ಸಂವೇದನೆಗಳುಳ್ಳ ಕವಿತೆಗಳು ಈ ಸಂಕಲನದಲ್ಲಿವೆ.

ನಂಬಿಕೆಯ ಮನೋ ಚೈತನ್ಯವನ್ನು ವಿಸ್ತರಿಸುವ ಈ ಸಂಕಲನವು ಹೊಸ ಓದುವಿಗೆ ತೃಪ್ತಿ ನೀಡುತ್ತದೆ. ಈ ಕೃತಿಯನ್ನು ಮಾಲೂರಿನ ಸ್ನೇಹಿತರೆಲ್ಲಾ ಸೇರಿ ನಿರ್ಮಿಸಿಕೊಂಡಿರುವ 'ಅಲಂಪು ಪ್ರಕಾಶನ'ದ ಮೂಲಕ ಪ್ರಕಟಿಸಲಾಗಿದೆ. 88 ಪುಟಗಳ ಈ ಕೃತಿಗೆ 100ರೂ ಮೌಲ್ಯವಿದೆ. ಈ ಕೃತಿಗೆ ವಾಸುದೇವ ನಾಡಿಗ್ ಅವರು 'ಕಥೆಗೆ ಕಣ್ಣಾಲಿಗಳು ಅರಳದಿರಲಿ' ಎಂಬ ಶೀರ್ಷಿಕೆಯಡಿ ಮುನ್ನುಡಿಯ ವಿಸ್ತಾರವಾದ ಪ್ರವೇಶ ನೀಡಿದ್ದಾರೆ. ಚಿನ್ನಯ್ಯ ವಡಗನಹಳ್ಳಿ ಅವರು ಪ್ರಕಾಶಕರ ಪರವಾಗಿ ಕೃತಿ ಪ್ರಕಟಣೆಯ ಆಶಯ ತಿಳಿಸಿದ್ದಾರೆ. ಕೃತಿ ಕುರಿತು ವೇಣು ಗೋಪಾಲ ವಹ್ನಿ ಅವರ ಕಿರು ಬರಹವೂ ಇಲ್ಲಿ ಮೌಲ್ಯಯುತ ಚಿಂತನೆ ಎನಿಸುತ್ತದೆ. ಬೆನ್ನುಡಿಕಾರರಾಗಿ ಡಾ. ಎಚ್. ಎಸ್. ಸತ್ಯನಾರಾಯಣ ಅವರು ಕವಿಯ ಈ ಸಾಹಿತ್ಯ ಕಾರ್ಯವನ್ನು ಮೆಚ್ಚಿ ಅಭಿನಂದಿಸಿದ್ದಾರೆ. ಕವಿ ಸರ್ವೇಶ್ ಬಂಟಹಳ್ಳಿ ಅವರು ಈ ಸಂಕಲನವನ್ನು ಬೆನ್ನುಡಿಕಾರರಾದ ಗುರುಗಳಿಗೆ ಅರ್ಪಿಸಿರುವುದನ್ನು ಗಮನಿಸಬಹುದು.

'ಮಾನ್ಸೂನ್ ಕವಿತೆಗಳು' ಎಂಬ ಸಂಕಲನವು ದೊಡ್ಡಕಲ್ಲಹಳ್ಳಿ ನಾರಾಯಣಪ್ಪನವರ ಐದನೇ ಕವನ ಸಂಕಲನ. ಈ ಸಂಕಲನಕ್ಕೆ ಪ್ರವೇಶದಂತಹ ಬರಹವನ್ನು ನೀಡಿರುವ ಕುಪ್ಪನಹಳ್ಳಿ ಎಂ. ಬೈರಪ್ಪನವರ ನುಡಿಯಂತೆ "ಕನ್ನಡದ ನುಡಿಬೆಡಗುಗಳ ನವನವೀನತೆಯ ಜೊತೆಗೆ ಕೋಲಾರ ನೆಲದ 'ನುಡುಗು'ಗಳನ್ನು ತನ್ನ ಕಾವ್ಯದೊಳಗೆ ಸೊಗಸಾಗಿ ಕಸಿ ಮಾಡಿದ್ದಾರೆ".

ಈ ಸಂಕಲನವು ಒಟ್ಟು ನಲವತ್ತೈದು ಕವಿತೆಗಳ ವಿಭಿನ್ನ ಪ್ರಯೋಗದ ತತ್ವ ಚಿಂತನೆ. ಇಲ್ಲಿ ಶೋಷಣೆಗೆ ಮುಖಾಮುಖಿಯಾಗುವ ಕವಿಯು ತನ್ನ ಲೋಕದ ಪರಿಸ್ಥಿತಿಗಳನ್ನು 'ನುಡಿ'ಯುತ್ತಾರೆ. ಮಾನ್ಸೂನ್ ಎಂಬ ಶೀರ್ಷಿಕೆಯ ಕೋಲಾರದ ಮಣ್ಣಿಗೆ ತಂದಿದ್ದು ಆಶಯವೋ, ಹಂಬಲವೋ ಒಟ್ಟಾರೆ ಕವಿಯ ಹಸಿವು, ಹಂಬಲ. ಅರಬ್ಬೀ ಭಾಷೆಯ ಮೌಸಿಮ್ ಎಂಬ ಪದದಿಂದ ಬಂದ ಮಾನ್ಸೂನ್ ಬರಿ ಮಳೆಯ ಋತುಮಾನವಲ್ಲ. ಅಂತಹ ಬಾಳ್ವೆಯ ತಂಪನ್ನು ಬಯಸುವ ತಂಪುಗಾಳಿಯ ತವಕ. ಕವಿಯು ಈಗಾಗಲೇ ತಮ್ಮವರೊಂದಿಗೆ 'ಎದೆಯಾಳದ ಗರ್ಭದಲಿ ಕುದಿವ ಶೋಕಪಾಕವನು ಅನಾಯಾಸವಾಗಿ ಹೊತ್ತು ಸಾಗುವ ಕಂಬನಿ'ಯಾಗಿ ನೊಂದಿದ್ದಾರೆ. ಹೀಗಾಗಿ ತಮ್ಮ ನಡುವಿನ ನೋವಿನ ಕಾವನ್ನು ನೀನೆ ಹೇಳು ಎಂದು ಮಾನ್ಸೂನ್ ಅನ್ನೇ ಕೇಳುತ್ತಿದ್ದಾರೆ.

ಕವಿ 'ಕಾವ್ಯಯೋಗ'ದಲ್ಲಿ ಬೆಂದಿದ್ದಾರೆ. ತನ್ನ ಒಡಲ ಕಡಲಿನ ದನಿಯನ್ನೇ ಕವಿತೆಗಳಲ್ಲಿ ಪ್ರತಿನಿತ್ಯ ಪ್ರಯೋಗಿಸಬಲ್ಲ ಗಝಲ್ ಅನುಭವಿ ಇವರು.

'ಆನಂದ' ಎಂಬ ಕವಿತೆಯ ಮೂಲಕ ಪ್ರಾರಂಭವಾಗುವ ಈ ಸಂಕಲನವು ವಾಸ್ತವಗಳ ಹಂಬಲಕ್ಕೆ ತರುವ ವಿಶಿಷ್ಟ ಆಶಯವನ್ನು ವ್ಯಕ್ತಪಡಿಸುತ್ತಿದೆ. ಇದು ಬರಿಯ ಕವಿಯ ಸಂವೇದನೆಯಲ್ಲ. ತನ್ನೊಳಗಿನ ಒಂದು ಸಮಾಜದ ಸಂವೇದನೆಯಾಗಿದೆ. ನೋವು, ಶೋಷಣೆ, ಬಡತನಗಳಲ್ಲಿ ಶತಮಾನಗಳಿಂದ ಅನುಭವಿಸಿದ ಗುರುತುಗಳು ಮಾತನಾಡುವ ಚರಿತ್ರೆಗೆ ಬರೆದ ತವಕವಿದೆ. ಸದಾ ಯಾವುದೋ ಒಂದು ಕಷ್ಟವು ತನ್ನನ್ನು ಆವರಿಸುವಾಗ ನಾನು ಆನಂದವನ್ನು ಸ್ವೀಕರಿಸಿದ್ದು 'ಅಪ್ಪ ಕುಡಿಯದೆ ನಕ್ಕಾಗ' ಎಂಬುದಾಗಲಿ, ಮಗ–ಮಗಳು ಹುಟ್ಟುವುದಾಗಲಿ ಬದುಕಿನಲ್ಲಿ ಇಂತಹ ವಿಶೇಷ ಸೃಷ್ಟಿಗಳಲ್ಲಿ ಮಾತ್ರ ಬದುಕಿನ ಆನಂದ ಸಿಗುವುದು. ಇಂತಹ ಜೀವಕ್ಕೆ ಹಂಬಲವಿದೆ. ಅದು ಸಾರ್ವಕಾಲಿಕ ಸತ್ಯಗಳ ನಿವೇದನೆ.

'ಕಲ್ಲಳ್ಳಿಯ ಕಷ್ಟ ಕಂಡವರು
ಯಾರಾದರೂ ಮನವೊಲಿಸಬಹುದಿತ್ತು
ಇರಲಿ ಬಿಡಿ
ಅಪರೂಪಕ್ಕೆ ಸಿಗುವವರಲ್ಲಿ
ಆಪ್ತತೆ ಜಾಸ್ತಿಯಂತೆ!'

ಸಾವನ್ನು ಕಂಡ ಪ್ರತಿ ಮನಸ್ಸು ಕೂಡ ಯಾವುದೋ ತನ್ನಲ್ಲಿ ಉಳಿಸಿದ ಸಂವೇದನೆಗೆ 'ಗಳಿಗೆ ತಡಮಾಡು ಒಡೆಯ' ಎಂಬ ನಿವೇದನೆಯೊಂದು ಇಲ್ಲಿ ಕವಿತೆಯಾಗಿ ಅರಳಿದೆ. 'ಕರುಳಿಗೊಂದು ಪದ ಕಟ್ಟುವ' ಹಸಿವು ಸಾವನ್ನು

ISSN: 2320-9941

ಕೂಡ ನಿಲ್ಲಿಸಿ, ಮಾತನಾಡಿಸುವ ಚೈತನ್ಯ ಹೊಂದಿರುತ್ತದೆ.

ನಾರಾಯಣಪ್ಪನವರ ಕವಿತೆಗಳಲ್ಲಿ ಒಳತೋಟಿಯ ಘಮಲು ಅಧಿಕ. ತಾವೇ ಕವಿತೆಯೊಂದಿಗೆ ಹಲವು ದಿನ ಬೇಯುತ್ತಾರೆ. ಹದವರಿಯದೆ ಪದ ಕಟ್ಟಲಾರರು ಎನಿಸುತ್ತದೆ. ಅವರ ಕವಿತೆಗಳು ಇಂತಹ ಸಂವೇದನೆಗಳಲ್ಲಿ ಪ್ರತಿ ಹಂತದಲ್ಲೂ ಮುಕ್ತವಾಗಿ ಹಂಬಲಿಸುತ್ತವೆ. ಇಂತಹ ಒಳ ಸಂವೇದನೆಯೇ ಕವಿತೆಯಾದಾಗ ಮೂಡುವ ಭಾವವಿದು.

'ಒಂಟಿತನದ ಕುಲುಮೆಯಲ್ಲಿ ಕುಶಲವಾಗಿ ಅರಳಿರುವ
ಹೂವುಗಳಿಲ್ಲವೆ ಕಲ್ಲಳ್ಳಿ
ಇರಿಯಲು ಕಾದಿರುವ ಕತ್ತಿಯಂಚಿನ ಬೆಳಕಿನಲ್ಲಿ
ಚಲಿಸಿ ಥಳಗೊಳ್ಳಬೇಕೆನಿಸುತ್ತಿದೆ'

ವಾಸ್ತವದಲ್ಲಿ ನಾನೇ ಕಂಡಂತೆ, ತಿಳಿದಂತೆ ಇವರು ಕಡಿಮೆ ಮಾತನ್ನೂ ಸೌಮ್ಯವಾಗಿ ಭಿತ್ತರಿಸುವ ಸ್ವಯಂಪ್ರಕಾಶ ಜೀವ ಇವರದು. ಈ ಲೋಕವನ್ನು ಕಣ್ಣಳತೆಯ ಪರಿಸರದಲ್ಲೇ ವೀಕ್ಷಿಸುತ್ತಾ ಪ್ರಶ್ನೆಗಳ ಮುಖಾಮುಖಿ ನಿಂತು ತನ್ನ ಪಾಡಿಗೆ ತಾನು ಉತ್ತರ ಹುಡುಕುತ್ತಿರುತ್ತಾರೆ. ಅದು 'ತೆನೆಯ ಪನಿ'ಯಾಗಿ ಹಸಿದೊಡಲ ತಣಿಸುವ ನಿರೀಕ್ಷೆ ಇವರದು. ಇವರು ಬಯಲಾಗುವ ಕ್ರಮವೇ ಸತ್ಯದ ದಾರಿ. ಯಾವ ವರ್ಣನೆ, ಹೊಗಳಿಕೆಗಳೂ ಶಾಶ್ವತವಲ್ಲವೆಂಬ ಇವರ ನಮ್ರತೆಯಲ್ಲಿ 'ಮಾತಾಗುವ', 'ಬಲವಾಗುವ', ಮಳೆಯಾಗುವ', ಅಂತಿಮವಾಗಿ 'ಕಿಡಿಯಾಗಿ' ಬೆಳಕಾಗುವ ಬೆಂದು ಬಯಲಾಗುವ ಸ್ವರೂಪ ಇವರದು. ಕರ್ಪೂರದ ಶಿಖರವೇ ಉರಿದಾಗ ಉಳಿಯುವುದೇನು? ಇನ್ನು ಮಾರ್ಗವೆಲ್ಲಿ, ಗುರುತುಗಳೆಲ್ಲಿ ಇವೆಲ್ಲಾ ಬರಿ ಸ್ವಾರ್ಥದ ಹಪಾಹಪಿಗಳೆಂಬ ಎಚ್ಚರ ಈ ಕವಿಯಲ್ಲಿದೆ. ಅತ್ತು ಹಗುರಾಗುವ, ಕನಿಕರದ ಖನಿಯಾಗುವ, ಕಾಡಾಗುವ, ಕೂಡಿ ಕಡಲಾಗುವ ಕವಿಗೆ ಈ ಲೌಕಿಕ ಹಂಬಲಗಳ ಮೈಲಿಗೆಯ ಕೀರಿಟ ಧರಿಸದಿರಿ ವಿಮರ್ಶಕರೆ.. ಕವಿ ಸ್ವಚ್ಛಂದವಾಗಿ ಚಲಿಸುತ್ತಿರುವುದು ಸ್ಪಷ್ಟವಿದೆ. ಕವಿ ಸರ್ವೇಶ್ ಬಂಟಹಳ್ಳಿಯವರು ತಿಳಿಸುವ ಅದೊಂದು 'ಸರ್ವಶೂನ್ಯ' ಭಾವ. ನನಗಂತೂ ಈ ಬಯಲಾಗುವ ಕವಿತೆಯನ್ನು ಮತ್ತೆ ಮತ್ತೆ ಎದುರುಗೊಳ್ಳುವ ಹಂಬಲ ಮೂಡುತ್ತದೆ.

ಬಡತನವನ್ನು 'ಬಂಗಾರ'ದ ನೆಪದಲ್ಲಿ ನುಡಿಯುವ ಕವಿಗೆ, ಸಾಲ ತೀರಿಸಿ, ಗಿರವಿ ಇಟ್ಟ ಬಂಗಾರವನ್ನು ವಾಪಸ್ಸು ತರಲಾಗದ ಬಡತನವನ್ನು ಅಂತಿಮವಾಗಿ ಪೊರಕೆ ಹುಲ್ಲಿನ ಸಾಕ್ಷಿಯಲ್ಲಿ ಗುಡಿಸಿಹಾಕುವ ಮನದ ಸಂವೇದನೆ ಇದೆಯಲ್ಲ, ಅದು ಪ್ರತಿಯೊಬ್ಬನಲ್ಲೂ ಉಳಿಯುವ ಅಂತಿಮ ಸಾಕ್ಷಿ. ಕವಿ ಇಂತಹ ಚಿಕ್ಕ ಎಳೆಯಲ್ಲಿಯೂ ಮುಕ್ತವಾಗಿ ಗೆಲ್ಲುತ್ತಾರೆ. ಹೀಗೆ 'ಹುಚ್ಚೆಳ್ಳು ಗಿಡದ ನೆರಳು', 'ನಿಟ್ಟುಸಿರು ಸಾಕು', 'ಹಸಿರಿನ ದೀಪ', 'ಹೋಗಿ ಬಾ ಕನಸೇ', 'ಎದೆ–ಯ ತಂತಿ ಲಯಗೊಳ್ಳಲಿ', 'ಸಂಜೆಯ ಹುಣ್ಣಿಮೆ', 'ದುಡಿನಾದ, ಮಿನುಗು', 'ಕವಿತೆ, ಅವಳು ಮತ್ತು ಅವನು', 'ರೆಕ್ಕೆ ಬಿಚ್ಚಿದ ಪ್ರಶ್ನೆಗಳು', 'ಅಸಹಾಯಕತೆ', 'ಮತ್ತೇನು ಉಳಿಯಲು ಸಾಧ್ಯ?', 'ಮೂವರು ಹುಚ್ಚರು' ಮೊದಲಾದ ಕವಿತೆಗಳ ಧ್ವನಿಯು ಓದಿನ ಸಾಂತ್ವನವಾಗಿ ನಮ್ಮಲ್ಲೇ ನಾವು ವಿರಮಿಸುವಂತೆ, ಎಚ್ಚರವಾಗುವಂತೆ ಸ್ಪರ್ಶಮಾಡುತ್ತವೆ.

ದಾಳಿಂಬೆ, ಅಂಬೇಡ್ಕರ್, ಕಲ್ಲಿನ ಪದ, ಗುಬ್ಬಿ ಕೂಗಬೇಕು, ವನ್ನಮ್ಮ ಚನ್ನಮ್ಮ ಈ ಕವಿತೆಗಳು ತ್ರಿಪದಿ ಮಾದರಿಯಲ್ಲಿ ಜನಪದ ಕಥೆಗಳನ್ನು, ಹಾಡಿನ ರೂಪಕ್ಕೂ ಹೊಂದಿಕೆಯಾಗುವಂತೆ ರಚನೆಯಾಗಿವೆ. ಅಂಬೇಡ್ಕರ್ ಕವಿತೆಯು, ಒಬ್ಬ ವ್ಯಕ್ತಿಯ ಸಾಧನೆಯನ್ನು ಒಂದು ಸಮುದಾಯದ ವರ್ತಮಾನ ಚಹರೆಗಳಿಗೆ ಹೋಲಿಸಿ ಬರೆಯುವ ಹೊಸ ಮಾದರಿಯನ್ನು ಪ್ರತಿನಿಧಿಸುತ್ತದೆ. ಇಲ್ಲಿ ಅಡಗಿರುವ ಧ್ವನಿಯು, ಬರಿ ಬಿಡುಗಡೆಯಾಗದೆ, ಕ್ರಾಂತಿಯ ಧ್ವನಿಯಾಗಿದೆ.

ಕೃತಿ ಕುರಿತ ಎಚ್.ಎಸ್. ಸತ್ಯನಾರಾಯಣ ಅವರ ಅಭಿಪ್ರಾಯವು ಕೃತಿಯನ್ನು ಸರಿಯಾಗಿ ಮೌಲ್ಯೀಕರಿಸಿದೆ. "ತಮ್ಮ ಬಂಡಾಯವನ್ನು ವ್ಯಗ್ರತೆಯಿಂದ ದಾಖಲಿಸಬೇಕೆಂಬ ಹಟವಿಲ್ಲದ ಈ ಕವಿ ಮೆಲುದನಿಯ ಬಂಡಾಯದ ಹಾದಿಯಲ್ಲಿರುವುದು ಸಮಕಾಲೀನ ಬಹುಬಗೆಯ ಹಿಂಸೆಯನನು ಮಾನವೀಯ ನೆಲೆಯಿಂದ ಎದುರಿಸಬಲ್ಲ ಗಟ್ಟಿತನವನ್ನು ತೋರಿದೆ. ಅದು ಜಾತಿಯ ಕಾರಣಕ್ಕೋ, ವರ್ಗದ ಕಾರಣಕ್ಕೋ ಒಟ್ಟಾರೆ ತಮ್ಮದಲ್ಲದ ತಪ್ಪಿಗೆ ಎದುರಿಸಬೇಕಾದ, ಪರ್ಯಾಯ ಚಿಂತನೆಯೊಂದನ್ನು ನಾರಾಯಣಪ್ಪ ಅವರ ಕವಿತೆಗಳು ಮಂಡಿಸುತ್ತವೆ".

'ಸಾವು, ಕವಿ ಮತ್ತು ಕವಿತೆ' ಏಕಮುಖವಾದ ಸಂವೇದನೆಯು ತಣ್ಣಗೆ ಮಾತನಾಡುವ ವಾಸ್ತವ ರೂಪಿ. ಎಲ್ಲವೂ ತುರ್ತುಕಾಲದಲ್ಲಿ ದಾಖಲಾಗುವ ಪ್ರಮೇಯಗಳು. ಕುವೆಂಪು ನುಡಿಯಂತೆ 'ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ'.

ಸಾಕಷ್ಟು ಕಾಡಿರುವ ಟೇಕಲ್ ಬಂಡೆಗಳು ಕಡಲಿನ ಕಥೆಯನ್ನು ಮಾನ್ಸೂನ್ ಮೂಲಕ ಕೇಳುತ್ತಿವೆ. ಅದು

ಕೋಲಾರದ ಬಯಲ ಬೇಗೆಗೆ ಉತ್ತರವೂ ಆಗಿರಬಹುದು. ಈ ಕವಿತೆಯು ನಿರೂಪಿಸುವ ಹಲವು ಕಥೆಗಳ ಗುಚ್ಛಕ್ಕೆ ಸಾಂತ್ವನವಾದ ಕಡಲಿನ ಕಥೆಯ ಆಗಬಹುದು. ಆ ಕಡಲು ಶಾಂತವೂ ಅಲ್ಲ, ಉದ್ವೇಗವೂ ಅಲ್ಲ.

ಮಾನ್ಸೂನ್ ಕವಿತೆಗಳು 'ಅಲಂಪು ಪ್ರಕಾಶನ'ನ ಮೂಲಕ 2023ರಲ್ಲಿ ಪ್ರಕಟವಾಗಿದೆ. 81 ಪುಟಗಳ ಈ ಕೃತಿಯು 100ರೂ ಬೆಲೆಯನ್ನು ಹೊಂದಿದೆ. ಈ ಕೃತಿಯನ್ನು ದಲಿತ ಹೋರಾಟಗಾರರಾದ ವೆಂಕಟಾಪು ಸತ್ಯಂ ಅವರಿಗೆ ಅರ್ಪಿಸಲಾಗಿದೆ. ಚೀಮನಹಳ್ಳಿ ರಮೇಶ್ ಬಾಬು ಅವರು ಈ ಕೃತಿಯನ್ನು, ಕವಿಯನ್ನು ಗ್ರಹಿಸಿದ ಸಹಜ ಬರಹಗಳು ಬೆನ್ನುಡಿಯಲ್ಲಿ ಮೂಡಿವೆ.

ಹೀಗೆ ದೊಡ್ಡಕಲ್ಲಹಳ್ಳಿ ನಾರಾಯಣಪ್ಪನವರು, 'ಕಲ್ಲಳ್ಳಿ'ಯಾಗಿ ನೆಲಮೂಲ ಸಂಸ್ಕೃತಿಯನ್ನು ಪ್ರತಿನಿಧಿಸಿದರೆ, ಈಗಾಗಲೇ ಗ್ರಹಿಸಿರುವ ಸರ್ವೇಶ್ ಅವರು ಬಂಟಹಳ್ಳಿಯ ಮೂಲಕ ಜೀವಧಾತುವಾಗಲು ಹಂಬಲಿಸುತ್ತಾರೆ. ಕವಿತ್ವ ಎಂಬುದೇ ಹೀಗೆ ಬೇರುಗಳಿಂದಲೇ ಮತ್ತೆ ಮತ್ತೆ ಚಿಗುರುವ ಮೂಲಧಾತು ಪ್ರಕ್ರಿಯೆ.

■■


ISSN: 2320-9941
ಪ್ರತಿಸ್ಪಂದ । Prathispandha

ಅಪ್ಪನೆಂಬೋ ಆಗಸ – ವೈ.ಎಂ. ಯಾಕೊಳ್ಳಿ

● ಡಾ. ರವಿಶಂಕರ್ ಎ. ಕೆ.

ಬದುಕನ್ನು ಸಾರ್ಥಕವಾಗಿ ಸ್ವೀಕರಿಸಿದಾಗ ತನ್ನೆದೆಯ ಆದರ್ಶಗಳು ಆಕಾಶದಷ್ಟೇ ಗಹನ ಹಾಗೂ ವಿಶಾಲ ಎನಿಸುತ್ತವೆ. ತಾಯಿ ಭೂಮಿಯಾದರೆ, ತಂದೆ ಆಕಾಶವಾಗುವ ಸತ್ವಪೂರ್ಣ ಜವಾಬ್ದಾರಿ ಪ್ರತಿ ಬದುಕಿನಲ್ಲಿಯು ಮುಖ್ಯವಾಗುತ್ತದೆ. ಸಾಹಿತ್ಯವು ಈ ಎರಡು ವ್ಯಕ್ತಿತ್ವಗಳನ್ನು ನಮ್ಮ ಪರಿಸರದ ಮಹತ್ವಗಳಿಗೆ ಆಯಾ ಸಂದರ್ಭಗಳಲ್ಲಿ ಹೋಲಿಸುತ್ತಾ ಅಧ್ಯಯನಮಾಡಿದ್ದಾರೆ.

ವೈ.ಎಂ. ಯಾಕೊಳ್ಳಿಯವರು 1992ರಲ್ಲಿಯೇ 'ನಿಟ್ಟುಸಿರು ಬಿಡುತ್ತಿದೆ ಕವಿತೆ' ಎಂಬ ಕವನ ಸಂಕಲನ ಪ್ರಕಟಿಸಿದ್ದಾರೆ. ಸು. ಮೂವತ್ತಕ್ಕೂ ಹೆಚ್ಚು ಕಾಲ ಕಾವ್ಯದ ಬೇಗುದಿಯಲ್ಲಿ ಸಮಾಜವನ್ನು ಕಂಡವರು. ಒಟ್ಟು ಮೂವತ್ತ ನಾಲ್ಕು ಕೃತಿಗಳನ್ನು ರಚಿಸುವ ಜೊತೆಗೆ, 09 ಕೃತಿಗಳನ್ನು ಅರ್ಥಪೂರ್ಣವಾಗಿ ಸಂಪಾದಿಸಿದ್ದಾರೆ. ಇಂತಹ ಸುದೀರ್ಘ ಸಾಹಿತ್ಯಯಾನಿಯ ಅನುಭವಜನ್ಯದಲ್ಲಿ ಈಗ 'ಅಪ್ಪನೆಂಬೋ ಆಗಸ' ಕವನ ಸಂಕಲನ ರಚನೆಯಾಗಿದೆ. ಒಟ್ಟು 70 ಕವಿತೆಗಳನ್ನು ಒಳಗೊಂಡಿರುವ ಈ ಸಂಕಲನದಲ್ಲಿ ಸರಳ ಭಾಷೆಯಲ್ಲಿ ಸಾಮಾಜಿಕ ಹಸಿವಿನ ಚಿತ್ರಣಗಳು ನೆನಪಿನ ಭಿತ್ತಿಯಾಗಿ ಒಡಮೂಡಿವೆ. ಇದೇ ಚಿತ್ರಗಳು ವರ್ತಮಾನದ ಜೊತೆಯಲ್ಲಿಯೂ ಮುಖಾಮುಖಿಯಾಗಿ ಸಂವಾದ ಮಾಡಬಲ್ಲವು.



ಇಡೀ ಕೃತಿಯಲ್ಲಿ ಐದು ಅಪ್ಪನನ್ನೇ ಕುರಿತು ಬರೆದು ಕವಿತೆಗಳಿವೆ. ಈ ಸಂಕಲನವನ್ನು ನಾಲ್ಕು ವಿಭಾಗವಾಗಿ ಅಧ್ಯಯನ ಮಾಡಬಹುದು

* ಆದರ್ಶ ಕವಿತೆಗಳು
* ಸಂವಾದ ಕವಿತೆಗಳು
* ವರ್ತಮಾನ ಚಿತ್ರಗಳು
* ಮಾನವೀಯ ಕವಿತೆಗಳು

ಹೀಗೆ ವಿಭಾಗಿಸಲಾಗದಿದ್ದರೂ ಓದುವ ನೆಪದಲ್ಲಿ ಒಂದಿಷ್ಟು ಕವಿತೆಗಳನ್ನು ಗುಚ್ಛವಾಗಿಸಿಕೊಂಡು ಬಣ್ಣಗಳಲ್ಲಿ ಕಣ್ಣರಳಿಸುವುದು ನಮ್ಮ ಸಾಹಿತ್ಯ ಮೀಮಾಂಸೆಯ ರಸ ಚಿಂತನೆ ಎನ್ನಬಹುದು. ಈ ಸಂಕಲನದಲ್ಲಿ ಬಣ್ಣಗಳ ಸಂವೇದನೆಯು ಸಾಮಾಜಿಕ ಕಳಕಳಿಯ ಪ್ರತಿ ಪಾತ್ರವು ನಿಸರ್ಗದತ್ತವಾಗಿ ಮಾತನಾಡುತ್ತವೆ, ಹೇಳುತ್ತವೆ, ನಿವೇದಿಸಿಕೊಳ್ಳುತ್ತವೆ, ದಾಖಲೆಗಳನ್ನು ಮುಕ್ತವಾಗಿ ತೆರೆದುಕೊಳ್ಳುತ್ತವೆ.

ಆದರ್ಶ ಕವಿತೆಗಳಲ್ಲಿ ಅಪ್ಪನ ಕುರಿತು ಆದರ್ಶವು ಒಂದು ಬಗೆ–ಯದಾದರೆ, ದೇವರು, ಅಮ್ಮ, ಗುರು ಮೊದಲಾದವರ ಕುರಿತು ಪಡೆದುಕೊಳ್ಳುವ ಸಂವೇದನೆಗಳು ವಿಭಿನ್ನವಾದವು.

"ಅವರ ಬೆವರ ಹನಿಗಳೆ

ಕವಿತೆಯಾಗಿ ನನ್ನ ಒಡಲಲ್ಲಿ
ಮಾತು ಪಡೆಯುವ ಮಜಕೂರಕ್ಕೆ
ದಂಗಾಗುತ್ತೇನೆ."(ಕಡ ಪಡೆದ ನಿಧಿ)

ಕವಿಯ ಕಾವ್ಯ ಸಂವಿಧಾನವಿರುವುದು ಇಂತಹ ನುಡಿಗಳಲ್ಲಿಯೇ. ಪ್ರತಿ ಕವಿತೆಗೂ ಇಂತಹ ಮುಕ್ತ ಅಸ್ತಿತ್ವವಿದೆ. ಕವಿ ಪ್ರತಿ ಕ್ಷಣವೂ ಎಚ್ಚರಗೊಳ್ಳಲು ಒಂದು ರೂಪಕ ಬಳಸುತ್ತಾರೆ. ಆ ರೂಪಕವು ಬೆಳೆಯುತ್ತಾ ಕಾರ್ಯ ಕಾರಣ ಸಂಬಂಧದಲ್ಲಿ ಪ್ರತಿಮೆಯಾಗಿ ಸಂವೇದನೆಯೂ, ಪರಿತಾಪವೂ ಆಗಿ ಒಂದು ಹೊಸ ಆಕಾಂಕ್ಷೆಗಾಗಿ ತೆರೆದುಕೊಳ್ಳುತ್ತದೆ.

ಹಳೆಯದಾದ ಅಂಗಿಯನ್ನು ಊರ ಗೌಡರು ಈ ಬಡವನಿಗೆ ನೀಡಿರಬಹುದು. ಆ ಅಂಗಿ ತೊಟ್ಟ ಅಪ್ಪನ ಸ್ಥಿತಿ ಹೇಗಿತ್ತು ಎಂಬುದನ್ನು ಕಥನಗೊಳಿಸುವ ಕವಿಯು, ಆ ಅಂಗಿಯ ಹಿಂದಿನ ಅವತಾರಗಳಲ್ಲಿ ನಟಿಸುವ ಅಪ್ಪ, ಎಲ್ಲರಿಗೂ ನಗೆಯೊಳಗಿನ ವಿಕೃತವಾಗಿ ಕಾಣುತ್ತಾರೆ. ಆ ಅಂಗಿ ತೆಗೆದಾಗಲೇ ಮೂಡಿದ್ದ ಕೋರೆ ಮೀಸೆಯು ಮಾಯವಾಗಿ ಮನುಷ್ಯನಾಗಿ ಕಾಣಿಸುತ್ತಾನೆ. ಗೌಡರ ಧೀಮಾಕು, ಅಹಂಕಾರಗಳನ್ನು ಎಂದಿಗೂ, ಯಾವರೂಪದಲ್ಲಿ ಧರಿಸಬಾರದೆಂಬ ಸಂದೇಶವು ಪುಟ್ಟ ಕಥೆಯಂತೆ ಮೂಡಿಬಂದಿದೆ.

'ಚಿತ್ತಾರದ ಹನಿಗಳು' ಹಲವು ರೂಪಕಗಳನ್ನು ತೆರೆದಿಡುತ್ತಲೇ ಉತ್ತರಿಸುತ್ತದೆ, ಪ್ರಶ್ನಿಸುತ್ತದೆ ಹಾಗೂ ವ್ಯಾಖ್ಯಾನ ನೀಡುತ್ತದೆ. ಅಂತಿಮವಾಗಿ "ಜಗತ್ತಿನ ಅತಿ ಸುಂದರ ಖಾದ್ಯವೂ, ಅವ್ವನ ಕೈತುತ್ತಿನ ಪಾಲು ಪಡೆದಿದೆ" ಎಂಬ ಆದರ್ಶವನ್ನು ಚಿಮ್ಮಿ ಮುಕ್ತಾಯಗೊಳ್ಳುತ್ತದೆ.

ಅಕ್ಕರದವದವನಿಗೆ ಅಕ್ಕರೆಯ ನಮನ, ಎಂದೂ ಮುಗಿದು ಹೋಗದ ಅನಂತ ನೆನಪಿಗೆ, ಇರುವದೆಲ್ಲವ ಬಿಟ್ಟು, ದೊರಕಿದ ಸಂತಸದೊಳು ಮುಳುಗಿ, ನನ್ನ ಸಿರಿವಂತಿಕೆಯ ಬಲ, ಕೇಳು ಜನಮೇಜಯ ಧರಿತ್ರಿ ಪಾಲ, ಒಂದು ಭವಿಷ್ಯದ ಹಾಡು, ಅಪ್ಪನೆಂಬೋ ಆಗಸ ಈ ಎಲ್ಲಾ ಕವಿತೆಗಳಲ್ಲಿಯೂ ಒಂದೊಂದು ಆದರ್ಶ ಸಂಗತಿಗಳು ಓದುಗರಿಗೆ ತರ್ಕ ಸೃಷ್ಟಿಸುತ್ತವೆ. ತಮ್ಮೊಳಗಿನ ಅನನ್ಯತೆಗೆ ಸಾಕ್ಷಿಯಾಗುತ್ತವೆ.

ಸಂವಾದ ಕವಿತೆಗಳು

ವರ್ತಮಾನದ ಹಲವು ಘಟನೆಗಳ ಜೊತೆಯಲ್ಲಿ ಮುಖಾಮುಖಿಯಾಗಿ ಸಂವಾದಮಾಡುವ ಕವಿಯು ಇಂದಿನ ವ್ಯವಸ್ಥೆಯ ಸಾಕಷ್ಟು ಸಮಸ್ಯೆಗಳನ್ನು ಪ್ರಶ್ನಿಸಿದ್ದಾರೆ. ಹಲವು ವಿಶ್ರಾಮಗಳನ್ನು ಸಹಿಸಿದೆ ಮನದಲ್ಲಿಯೇ ದಹಿಸಿಕೊಳ್ಳುತ್ತಾ, 'ಇಲ್ಲ ಗೆಳೆಯರೇ ಖಂಡಿತವಾಗಿಯೂ ಇದು ಹಾಡಲ್ಲ'ವೆಂದು ತೀರ್ಮಾನಿಸುತ್ತಾರೆ. "ಕನಸುಗಳೊಳಗೆ ಇಳಿದಂತೆ ಬದುಕಿನೊಳಗೆ ಇಳಿಯುವುದು ಎಷ್ಟು ಕಷ್ಟವೋ ಗೆಳೆಯಾ!" ಎಂದು ಸುಂದರ ಕನಸುಗಳಲ್ಲಿ ತೇಲುವ ಮನೋ ವೈಚಿತ್ರ್ಯಗಳನ್ನು ಒಡೆದು ವರ್ತಮಾನವು ಕನಸು ಕಂಡಂತಲ್ಲವೆಂದು "ಈಗೀಗ ಕಲಿತಿದ್ದೇನೆ ಪೇಚಿಗೆ ಪ್ರತಿ ಪೇಚು ಹಾಕುವ ಜಟ್ಟಿಯ ಕರಾಮತ್ತು"ವಿನ ವಾಸ್ತವ ಕಲೆಯನ್ನು ತಿಳಿಸುತ್ತಾರೆ. ಕವಿತೆಗಳು ಹುಸಿಗೊಳ್ಳುವ ವ್ಯವಧಾನಕ್ಕೆ ಇಂತಹ ಕವಿತೆಗಳು ಎಚ್ಚರದ ಸೂಜಿಮೊನೆಗಳಾಗಿವೆ.

ಕನಸುಗಳ ಧ್ಯಾನದಲಿ, ಉತ್ತರವಿರದ ಪ್ರಶ್ನೆಗಳು, ಸಿಗಲಾರದ ಉತ್ತರಕ್ಕೆ ಕೈಯಾನುತ್ತಾ, ಕೊನೆಯಿಲ್ಲದ ನೋವಿಗೆ ಮುಲಾಮು ಹುಡುಕುವ ಕಷ್ಟ, ಮಾತುಗಳೇ ಕೊರತೆ, ನೋವನಿತ್ತವರಿಗೆ ನೂರು ನಮನ, ಗುರುವೆಂಬ ಮಹಾಘನಕ್ಕೆ, ಸುತ್ತಲಿರುವ ದೈವ ನೆನೆದು, ಮರೆತ ಮಾತುಗಳ ನೆನಪಲ್ಲಿ.., ಒಲಿದ ಪ್ರೇಮವೇ, ದೀಪ ಉರಿವ ರಾತ್ರಿಯಲಿ, ಕಳೆದು ಹೋದ ಮಳೆಯ ಜಾಡು ಅರಸುತ್ತ, ಮತ್ತೆ ಮತ್ತೆ ದೃಡವಾಗುವ ಈ ಪ್ರೀತಿಗೆ, ಒಲವಿಗೊಂದು ವಿನಂತಿ, ಮೂಕನ ಮಾಡಯ್ಯ ತಂದೆ, ಒಂದು ಪ್ರಶ್ನೆಗೆ ಉತ್ತರ, ಕವಿತೆ ಅಂದರೆ ಈ ಮೊದಲಾದ ಕವಿತೆಗಳಲ್ಲಿ ವಿಚಾರ, ತತ್ವಗಳು ಬಾಳ್ವೆಯ ಮೂಲಾಂಶಗಳಾಗಿ ಸಂವಾದ ಮಾಡುತ್ತಿವೆ. ಎಲ್ಲಾ ಕವಿತೆಗಳನ್ನು ಇಲ್ಲಿ ಚರ್ಚಿಸದಿದ್ದರೂ, ಕುತೂಹಲವನ್ನಷ್ಟೇ ಇಲ್ಲಿ ರಸಗ್ರಹಣ ಮಾಡಲಾಗಿದೆ. ಓದುಗರ ಒಲವಂತೆ ಒಲಿಯುವುದು ಕವಿತೆ ಎಂಬಂತೆ ನಮ್ಮನ್ನು ಮುಖಾಮುಖಿಗೊಳ್ಳಲು ಈ ಸಂವಾದಗಳು ಬೇಕು.

*** ವರ್ತಮಾನ ಚಿತ್ರಗಳು**

'ಇತಿಹಾಸವ ಬದಲಿಸ ಹೊರಟ ಹಕ್ಕಿ' ಇದೊಂದು ಪೂರ್ಣಪ್ರಜ್ಞೆಯ ಚಿತ್ರ. ಈ ಕವಿತೆಯು ಕೋಗಿಲೆ ಮತ್ತು ಗಿಡುಗನ ಮುಖಾಮುಖಿಯಾಗಲಿ, ಗುಬ್ಬಚ್ಚಿಯ ಮೂಕ ದನಿಯಾಗಲಿ ಪ್ರಶ್ನೆಗಳ ಮೂಲಕವೇ ಮನದಲ್ಲಿ ಒಂದು

ಚಿತ್ರವಾಗಿ ನಿಲ್ಲುತ್ತದೆ.

'ಹೊಸ ವರ್ಷವೆಂಬ ಬಡಿವಾರಗಿತ್ತಿಗೆ' ಕವಿತೆಯೊಳಗಿನ ಮುದುಕಿಯಾದ ಕಳೆದ ಕಾಲವು ಮನೋವೈಕಲ್ಯಗಳ ವ್ಯವಧಾನಕ್ಕೆ ಸಿಲುಕಿ, ಸೂಳೆಯಾಗುವ ವ್ಯಂಗ್ಯ ಇಲ್ಲಿ ಕವಿತೆಯಾಗಿದೆ. "ಕಾಲನೆಂಬ ದೂರ್ಥ ಮತ್ತೊಬ್ಬ ಮುದಿಸೂಳೆಯ ಭವಿಷ್ಯ ಬರೆಯಲು ಮಸಲತ್ತು ನಡೆಸುತ್ತಾನೆ ಅಷ್ಟೇ" ಎಂಬ ತತ್ವವು ನಮ್ಮ ಜಾಗೃತಿಗಳನ್ನು ಪ್ರಶ್ನಿಸುತ್ತದೆ.

"ಕವಿಯ ಸಾಮಾಜಿಕ ಹೊಣೆಗಾರಿಕೆಯನ್ನು ಪ್ರಬುದ್ಧ ರೀತಿಯಲ್ಲಿ ನಿರ್ವಹಿಸುವ ಡಾ. ವೈ.ಎಂ ಯಾಕೊಳ್ಳಿಯವರದ್ದು ಸಮಕಾಲೀನ ಸಂದರ್ಭದ ಭಿನ್ನ ದನಿ. ಸಮಾಜದ ಸ್ವಾಸ್ಥ್ಯ ಬಯಸುವ, ಜೀವ ಕೇಂದ್ರಿತ ನೆಲೆಯಿಂದ ಮೂಡಿ ಬಂದಿರುವ ಕವಿತೆಗಳು ಇಲ್ಲಿವೆ" ಎಂದು ಮುನ್ನುಡಿಕಾರರಾದ ಡಾ. ಎಚ್.ಎಸ್ ಸತ್ಯನಾರಾಯಣ ಅವರು ಕವಿತೆಗಳೊಂದಿಗೆ ಮುಖಾಮುಖಿಯಾಗುತ್ತಾರೆ.

ಅನಂತದ ಜಾಡು, ಹೀಗೆಯೇ.., ಕಾಯುವದಕ್ಕೇಕೆ ಮುಜುಗರ, ಅನಾಮಧೇಯ ಮಾಸ್ತರನೊಬ್ಬನ ಆತ್ಮಗೀತೆ, ಅನುದಿನದ ಅಹವಾಲು, ಹಣತೆಗಳು, ಹಾಡುವ ಹಕ್ಕಿಯ ದುರಂತ, ಕವಿಯ ಸಾವು, ಕತ್ತಲ ರಾತ್ರಿಯ ಚಿತ್ರಗಳು, ಕವಿಯ ಸಂಕಟಕೆ ದನಿಯಾಗಲೆಂದು.., ಕನಸುಗಳಷ್ಟೇ ಸಾಕು, ಬೆಳಕ ಹಿಡಿಯಬಹುದೇ ಬೊಗಸೆಯಲಿ, ಕ್ಷಮಯಾ ಧರಿತ್ರಿ.., ಕಣ್ಣ ಕಾವಲು ನಡುವೆ, ಹೊಸವರುಷದ ಸಂಜೆ, ದೇವರೂ ಅರಿತ ಸತ್ಯ ಇಂತಹ ಕವಿತೆಗಳು ಒಂದು ಭರವಸೆಯಲ್ಲಿ ಓದುವರ ಮುಖೇನ, ಇಲ್ಲವೇ ಸ್ವಯಂ ಜಾಗೃತಿಯ ಸಂವೇದನೆಯಲ್ಲಿ ಚಿತ್ರಗಳಾಗಿ ನಿಂತು ವರ್ತಮಾನದ ಹಲವು ವಿಚಾರಗಳನ್ನು ಚರ್ಚಿಸಿವೆ.

*** ಮಾನವೀಯ ಕವಿತೆಗಳು**

'ಒಲವ ಮೂಲವ ಅರಸಿ' ಕವಿತೆಯಲ್ಲಿ ಒಲವಿನ ಬಾಂಧವ್ಯವನ್ನು ಒಂದು ಬೆಸುಗೆಯಂತೆ ನೆಯ್ದ ಕ್ರಮವು ಇಲ್ಲಿ ಸ್ವಚ್ಛಂದವಾಗಿ ಮೂಡಿದೆ.

"ಒಲಿದ ಹೃದಯಕೂ
ಮಿಡಿವ ಮನಸಿಗೂ
ಯಾರು ಒಲವನು ಹೊಸೆದವರು" ಎಂಬ ಪ್ರಶ್ನಾತ್ಮಕ ಜಾಗೃತಿಯು ಮನುಷ್ಯನ ಅಂತರಂಗದ ಬಾಗಿಲು ತೆ–ರೆದು ಹೊಸ ಗೀತೆಯನ್ನು ಹಾಡುತ್ತಿದೆ. ಮಳೆಗೂ – ಬೀಜಕ್ಕೂ, ಎದೆಯೊಳಗಿನ ಪ್ರೀತಿಗೂ, ಋಣಕ್ಕೂ–ಸೋಲಿಗೂ ತೆರೆದುಕೊಳ್ಳುವ ಮಾನವೀಯ ಪ್ರಜ್ಞೆಯು ಇಲ್ಲಿ ವಿಶೇಷವಾದುದು.

ಮಾತು ಮೌನವಾಗುವ ಘಳಿಗೆ, ಅಗಲುವಿಕೆಯಂಬುದು ಸಾವಿನಂತೆ, ಕಾಣದೇ ಹೋಗಿರುವ ದೊರೆಗೆ, ಕಾಣೆಯಾದ ಕರುಣೆಗೆ, ಒಲುಮೆಯೊಳಗಿನಲೆ.., ಕನಸು ನನಸಾಗಿಸುವ ದಾರಿ, ಚರಿತ್ರೆಯ ಸಾಲಿನ ಹಂಗು, ಹೇಗೆ ಜೋಡಿಸಲಿ ಪ್ರಭು, ಹೀಗೊಂದು ಜಿಜ್ಞಾಸೆ, ಕನವರಿಕೆ ಕನಸುಗಳ ನಡುವೆ, ಮಾತಿಗೆ ಮೀರಿದ ನೋವಿಗೆ, ಆಡಬಾರದ ನುಡಿಯ ಅಲಗಿನಂತೆ, ಸಂತನಾಗದವನ ಅಶಾಂತ ಗೀತೆ ಹೀಗೆ ಇನ್ನೂ ಕೆಲವು ಕವಿತೆಗಳ ಧ್ವನಿಯು ಮಾನವೀಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ.

ಯಾವುದೇ ಒಂದು ಕವಿತೆಯು ಮಾನವೀಯತೆಯನ್ನು ಧ್ವನಿಸದಿದ್ದರೆ ಅದು ಕವಿತೆಯಾಗಲಾರದು. ಅದು ನಮ್ಮೊಳಗನ್ನು ತೆರೆದುಕೊಳ್ಳಲು ಸೂಕ್ತ ಕಾರಣಗಳನ್ನು ನೀಡದಿದ್ದಲ್ಲಿ ಅದು ಕವಿತೆಯಾಗದೆ, ಬರಿ ಪದಗಳ ಅಭಿವ್ಯಕ್ತಿಯಾಗುತ್ತದೆ. ಇಲ್ಲಿನ ಪ್ರತಿ ಕವಿತೆಯೂ ರೂಪಕಗಳ ಮೇಲೆ ನಿಂತು ಭವ್ಯತೆ ಹೆಣೆಯುವ ಸಾಹಸಕ್ಕೆ ಕೈ ಹಾಕದೆ, ಸರಳವಾದ ಧ್ವನಿಯಲ್ಲಿಯೇ ಸಾಹಿತ್ಯೇತರರನ್ನೂ ಸೆಳೆಯುವ ಕವಿತ್ವವನ್ನು ಮೈಗೂಡಿಸಿಕೊಂಡಿವೆ.

ಒಟ್ಟಾರೆ, 'ಅಪ್ಪನೆಂಬೋ ಆಗಸ' ಕವನ ಸಂಕಲನವು ಸರಳವಾದ ಭಾಷೆಯ ಕವಿತಾ ಚಾತುರ್ಯವನ್ನು ಹೆಣೆದ ಪದ್ಯಗಳ ದೀಪಿಕೆ. ಈ ಕೃತಿಯು 150ರೂ ಬೆಲೆ ಹೊಂದಿದ್ದು, 2023ರಲ್ಲಿ ಬೆರಗು ಪ್ರಕಾಶನದ ಮೂಲಕ ಪ್ರಕಟಗೊಂಡಿದೆ. ಈ ಕೃತಿಯನ್ನು ಜಾನಪದ ಸಂಶೋಧಕರಾದ ಡಾ. ಶ್ರೀರಾಮ ಇಟ್ಟಣ್ಣವರ ಅವರಿಗೆ ಅರ್ಪಿಸಲಾಗಿದೆ. ಎಚ್. ಎಸ್. ಸತ್ಯನಾರಾಯಣ ಅವರ ಮುನ್ನುಡಿಯೊಂದಿಗೆ, ಟಿ. ಯಲ್ಲಪ್ಪ ಅವರ ಬೆನ್ನುಡಿಯನ್ನೂ ಪಡೆದು ಅರ್ಥಪೂರ್ಣ ಕೃತಿಯಾಗಿ ಹೊರಹೊಮ್ಮಿದೆ. ಓದುಗರು ಯಾವುದೇ ಹಂಗುಗಳಿಲ್ಲ ಕೃತಿಯನ್ನು ಓದಲು ಮುಕ್ತವಾಗಿ ಈ ಕೃತಿಯನ್ನು ಆಯ್ಕೆಮಾಡಬಹುದು.